ಪ್ರಕಾಶಕರ ಕೃತಜ್ಞತಾಪೂರ್ವಕ ವಂದನೆಗಳು.

ಜಿಲ್ಲಾ ಎಡ್ಯುಕೇಶನಲ್ ಕೌನ್ಸಿಲಿನಿಂದ ೭ನೇ ತರಗತಿಗೆ ಗೊತ್ತಾದುದು.

# ಭೀಷ್ಮನ ಕಥೆ

ಎಮ್. ಎನ್. ಕಾಮತ್,
ಕೆನರಾ ಹೈಸ್ಕೂಲ್, ಮಂಗಳೂರು.

ಎಂಟನೇ ಆವೃತ್ತಿ.



Approved by the Madras Text Book Committee and recognized by the Director of Public Instruction, Madras; Approved for use in High Schools Bombay Presidency & Mysore.

ಬಾಲಸಾಹಿತ್ಯ ಮಂಡಲ, ಲಿಮಿಟೆಡ್,
ಮಂಗಳೂರು.

1938



ಕ್ರಯ: 0—6—0.] [Price: 0—6—0.

ಸರಸ್ವತೀ ಪ್ರಿಂಟಿಂಗ್ ವರ್ಕ್ಸ್, ಲಿಮಿಟೆಡ್, ಮಂಗಳೂರು.

॥ ಶ್ರೀ ॥

# ಭೀಷ್ಮನ ಕಥೆ

## ೧. ಗಂಗಾಪುತ್ರ

ಹಿಂದೆ ಈ ದೇಶವನ್ನು ಭರತನೆಂಬೊಬ್ಬ ಅರಸು ಆಳುತಿದ್ದನು. ಅವನು ದುಷ್ಯಂತ ಮಹಾರಾಯನಿಗೆ ಶಕುಂತಲೆಯಲ್ಲಿ ಹುಟ್ಟಿದವನು. ಅವನು ಆಗ ಅತಿ ಪ್ರಖ್ಯಾತನಾದ ಅರಸಾಗಿದ್ದುದರಿಂದಲೇ, ಅವನ ಆಳಿಕೆಗೆ ಒಳಗಾದ ಈ ದೇಶವೆಲ್ಲವೂ ಭಾರತವರ್ಷವೆಂದು ಹೆಸರ್ಗೊಂಡಿತು. ಅವನ ವಂಶವೇ ಭರತವಂಶವು. ಭರತನ ಅನಂತರದಲ್ಲಿ ರಾಜರಾದವರೊಳಗೆ ಹಸ್ತಿ ಎಂಬೊಬ್ಬನಿದ್ದನು; ಅವನ ದೆಸೆಯಿಂದ ರಾಜಧಾನಿಗೆ ಹಸ್ತಿನಪುರವೆಂದೂ ಹಸ್ತಿನಾವತಿಯೆಂದೂ ಹೆಸರಾಯಿತು. ಹಸ್ತಿಯ ಸಂತತಿಯಲ್ಲಿ ಮುಂದೆ ಸಂವರಣನೆಂಬೊಬ್ಬನಿದ್ದನು; ಅವನು ಸೂರ್ಯಪುತ್ರಿಯನ್ನು ಮದುವೆಯಾದನು. ಅವಳಲ್ಲಿ ಕುರು ಎಂಬ ಸುಕುಮಾರನು ಜನಿಸಿದನು. ಅವನಿಂದ ಮುಂದೆ ಆ ವಂಶಕ್ಕೆಲ್ಲ ಕುರುವಂಶವೆಂದು ಹೆಸರು ಬಂದಿತು. ಕುರುವಂಶವಲ್ಲಿ ಪರಂಪರೆಯಾಗಿ ಪ್ರದೀಪನೆಂಬೊಬ್ಬ ಅರಸು ರಾಜ್ಯಭಾರ ಮಾಡುತ್ತಿರಲು, ಅವನಲ್ಲಿ ಲೋಕವಿಖ್ಯಾತನಾದ ಶಾಂತನು ಎಂಬ ಪುತ್ರನು ಉದಿಸಿದನು. ಅವನ ಖ್ಯಾತಿಯು ದೇಶವಲ್ಲೆಲ್ಲ ಬೆಳಗಿತು.

ಪ್ರದೀಪನು ಅರಸುತನ ಗೈಯುತಿದ್ದಾಗ, ಒಂದು ದಿನ ಒಂದು ವಿಚಿತ್ರವಾದ ಕನಸನ್ನು ಕಂಡಿದ್ದನು. ಯಾವಳೊ ಒಬ್ಬ ಶಾಪಗ್ರಸ್ತಳಾದ ಕನ್ಯೆಯು ಅವನ ಬಳಿಗೆ ಬಂದು, ಅರಮನೆಗೆ ತಾನು ಬರಬಹುದೆ ಎಂದು ಕೇಳಿದ ಹಾಗೂ, ಅಷ್ಟರಲ್ಲೆ ಅವಳು ಮಾಯವಾದ ಹಾಗೂ ಕನಸು! ಆ ಸಂಗತಿಯನ್ನು ಅವನು ಆಗ ಯುವರಾಜನಾಗಿದ್ದ ಶಾಂತನುವಿಗೆ ತಿಳುಹಿದನು. ಜನರು ಎಷ್ಟೋ ಬಾರಿ ಸ್ವಪ್ನಗಳನ್ನು ನಂಬುವುದುಂಟು. ವಿಶೇಷ

ವಾಗಿ ಪ್ರಜಾಭಕ್ತನೂ ಧರ್ಮಶಾಲಿಯೂ ಆದ ಅರಸು ಇಂತಹ ಕನಸನ್ನು ಎಂದಿಗೆ ಕಂಡನೊ, ಅದು ಮಹತ್ವವುಳ್ಳುದೆಂದೇ ತಿಳಿದನು. ಶಾಂತನುವು ಆ ದೇವಕನ್ಯೆಯೆ ತನ್ನ ಪತ್ನಿಯಾಗಿ ಬರುವಳೆಂದು ನಂಬಿಕೊಂಡು, ಬಹು ಕಾಲದ ವರೆಗೂ ಮದುವೆ ಮಾಡಿಕೊಳ್ಳದೆ ಇದ್ದನು.

ಶಾಂತನುರಾಜನು, ಪ್ರದೀಪನ ತರುವಾಯದಲ್ಲಿ, ಚಕ್ರವರ್ತಿಯಾಗಿ ರಾಜ್ಯವನ್ನಾಳುತಿದ್ದನು. ವಿವಾಹಿತನಾಗಿರಲಿಲ್ಲದುದರಿಂದ, ಅವನ ಸಮಯ ವೆಲ್ಲವೂ ಪ್ರಜೆಗಳಿಗಾಗಿಯೆ ವ್ಯಯಿಸಲ್ಪಡುತಿದ್ದಿತು. ಅವನು ರೂಪ ದಲ್ಲಿ ಹೇಗೆಯೊ ಗುಣದಲ್ಲಿಯೂ ಹಾಗೆಯೆ ಶಾಂತನಾಗಿದ್ದನು. ಆ ಕಾಲದ ಜನರಲ್ಲಿ ಯೌವನದ ತೇಜವು ವಯಸ್ಸು ಮೀರಿದರೂ ಕುಂದುತಿರ ಲಿಲ್ಲ. ಅದು ಕಾರಣ, ಶಾಂತನುಚಕ್ರವರ್ತಿಯು ವಯಸ್ಸು ಹೆಚ್ಚುತ್ತ ಬಂದರೂ, ಅವನು ಪೌರುಷದಲ್ಲಿ ಯುವಕನೇ ಆಗಿದ್ದನು. 'ದೊರೆತರೆ ಆ ದೇವಕನ್ಯೆ; ಇಲ್ಲದಿದ್ದಲ್ಲಿ ನನಗೆ ವಿವಾಹವೆ ಬೇಡ. ಆದರೆ, ಅವಳನ್ನೆ ನಾನು ನಮ್ಮ ಮನೆಗೆ ತರಬೇಕೆಂದು ತಿಳುಹಿದ ತಂದೆಯ ಆತ್ಮಕ್ಕೆ ಹೇಗೆ ಶಾಂತಿಯನ್ನು ಉಂಟುಮಾಡಲಿ? ಅವಳು ಎಂದಿಗೆ ನೋಡಸಿಗುವಳು? ಅಥವಾ ನನ್ನ ಭಾಗ್ಯದಲ್ಲಿ ಅದು ಬರೆದಿಲ್ಲವೆ?' ಎಂಬುದು ಒಂದೇ ಅವನ ಮನಸ್ಸಿನ ವ್ಯಾಕುಲಕ್ಕೆ ಕಾರಣವಾಗಿದ್ದಿತು. ಇರಲಿ.

ಮೃಗಬೇಟೆಯಾಡುವುದು, ಎಂದಿನಿಂದಲೂ ಅರಸೆನ್ನುವವರಿಗೆ ಒಂದು ವ್ಯಸನವಾಗಿದೆಯಷ್ಟೆ. ದುಷ್ಯಂತನು ಮೃಗಬೇಟೆಯಾಡಲು ಬಂದು ಶಕುಂತಲೆಯನ್ನು ವರಿಸಿದನು; ಹರಿಶ್ಚಂದ್ರನು ಮೃಗಬೇಟೆಗಾಗಿ ತೆರಳಿ ದವನು, ವಿಶ್ವಾಮಿತ್ರನ ಕೋಪಕ್ಕೊಳಗಾಗಿ ರಾಜ್ಯಭ್ರಷ್ಟನಾದನು. ಶಾಂತ ನುವೂ ಮೃಗಬೇಟೆಗೆ ತೆರಳದೆ ಇಲ್ಲ. ಅವಕಾಶ ದೊರೆತಾಗ, ಮನಸ್ಸು ಮ್ಲಾನವಾದಾಗ, ಅಥವಾ ಮೃಗಗಳ ಕಾಟವು ವಿಪರೀತವಾದಾಗ ಅವನೂ ಮೃಗಬೇಟೆಯಾಡುತಿದ್ದನು.

ಅದರಂತೆ ಒಂದು ದಿನ ಬೇಟೆಯಾಡಿ, ಚಕ್ರವರ್ತಿಯು ದಣುವಾರಿಸಿ ಕೊಳ್ಳಲು ಗಂಗಾತೀರದಲ್ಲಿ ಅಡ್ಡಾಡುತಲಿದ್ದನು. ಬೇಟೆಯಾಡಿದ ಪರಿ ಶ್ರಮದಿಂದ ದಣುವಾಗಿದ್ದರೂ, ಮನಸ್ಸು ಉತ್ತೇಜಿತವಾಗಿದ್ದಿತು. ಸಾಮಾನ್ಯ ನಾದೊಬ್ಬ ಬೇಟೆಗಾರನಾದರೂ ಮನೆಗೆ ಹಿಂತೆರಳಿದ ಕೂಡಲೆ, ಅವನ ಹೆಂಡಿರು ಮಕ್ಕಳು ಅವನನ್ನು ಕಾಣುತ್ತಲೆ ಇದಿರಾಗಿ ಬಂದು, ಪ್ರೀತಿ

ಯಿಂದ ಮಾತನಾಡುತ್ತ, ಬೇಟೆಯ ವೃತ್ತಾಂತವನ್ನು ವಿಚಾರಿಸುತ್ತ, ಅವನ ಪರಾಕ್ರಮವನ್ನು ತಿಳಿಯುತ್ತಲೆ ಕಣ್ಣರಳಿಸಿ ಹಿಗ್ಗುತ್ತಲೂ, ಅವನ ಕಷ್ಟಗಳನ್ನು ತಿಳಿಯುತ್ತಲೆ ಮುಖಭಾವದಿಂದ ಅನುಭೂತಿಯನ್ನು ತೋರಿಸುತ್ತಲೂ ಇರುವರು. ಆದರೆ ಚಕ್ರವರ್ತಿಯಾದ ಶಾಂತನುವು ಪ್ರದೀಪನ ಮಗನಾಗಿ ವಂಶಕ್ಕೇ ಪ್ರದೀಪನೆನಿಸಿಕೊಂಡನಾದರೂ, ಅವನ ಸುಖದುಃಖಗಳಲ್ಲಿ ಸಹಭಾಗಿಗಳಾರೂ ಇರಲಿಲ್ಲ. ಪ್ರಜೆಗಳೆಲ್ಲ ಪಿತೃವಾತ್ಸಲ್ಯವನ್ನಿಟ್ಟಿದ್ದರೆಂಬುದು ನಿಜವಾದರೂ, ದಾಂಪತ್ಯಸುಖವೂ ಅಪತ್ಯಸುಖವೂ ಅವನಿಗೆ ಲೇಶವೂ ಇದ್ದಿಲ್ಲ. ಆ ದೇವಕನ್ಯೆಯನ್ನು ಇಷ್ಟು ಕಾಲ ಕಾದು ಕಾದು, ಬೇರೆ ವಿವಾಹವನ್ನೂ ಮಾಡಿಕೊಳ್ಳದೆ ಉಳಿದುದೇ ಧಾರಾಳವಾಯಿತು. ಇನ್ನೆಷ್ಟು ಕಾಲ ಹೀಗೆ ಕಳೆಯಬಹುದು? ಆ ದೇವಕನ್ಯೆಯನ್ನು ಒಮ್ಮೆ ಕಂಡರೆ,—ಅವನಿಗೆ ವಿವಾಹವೂ, ಪಿತೃವಾಕ್ಯಪಾಲನೆಯೂ ಎರಡೂ ಒಂದೇ ಸವನೆ ಕೈಗೂಡುವುವಲ್ಲವೆ?

ಗಂಗಾತೀರದಲ್ಲಿ ಸಂಚಾರನಾಡುತಲಿದ್ದ ಚಕ್ರವರ್ತಿಯ ಮನಸ್ಸಿನಲ್ಲಿ ಈ ಬಗೆಯ ವಿಚಾರಗಳು ತರಂಗತರಂಗವಾಗಿ ಉಕ್ಕೇರುತಿದ್ದುವು. ಆ ಸ್ವಪ್ನವಿಚಾರದಲ್ಲೆ ಅವನು ಮಗ್ನನಾಗಿದ್ದ ಹೊತ್ತಿಗೆ ಸರಿಯಾಗಿ, ಆದೂರದಲ್ಲೇ ಯಾವಳೋ ಒಬ್ಬ ಸ್ತ್ರೀಯು ಸುಳಿಯುತಿದ್ದುದನ್ನು ಅವನು ಕಂಡನು. ತನ್ನಲ್ಲಿ ದೇವಕನ್ಯೆಯನ್ನು ಕುರಿತಾಗಿ ಉತ್ಕಟವಾದ ವಿಚಾರಗಳು ಉಂಟಾಗಿ, ಸ್ವಪ್ನಸ್ಮೃತಿಯು ಜಾಗ್ರತವಾಗಿರುವಾಗಲೇ, ಅವಳು ಸುಳಿಮಂತಾದುದರಿಂದ, ಶಾಂತನುವಿನ ಮನಸ್ಸು ಮತ್ತಷ್ಟು ಉದ್ವೇಗಗೊಂಡಿತು. ಇವಳೇ ಅವಳಾಗಿದ್ದರೆ, ಅವನ ಜೀವನವು ಧನ್ಯವಾಗುವುದಲ್ಲವೆ? ಆ ಸ್ತ್ರೀಯೂ ಮೆಲ್ಲಮೆಲ್ಲನೆ ತಿಳಿದೂ ತಿಳಿಯದವಳಂತೆ ಅವನಿದ್ದ ಕಡೆಗೆ ಬಂದಳು. ಅವನೂ ಅವಳನ್ನು ನೋಡಿದನು; ಅವಳು ಆತನನ್ನು ಕಂಡಳು. ನಾಲ್ಕು ಕಣ್ಣುಗಳೂ ಪರಸ್ಪರವಾಗಿ ಪರಿಚಯಗೊಂಡುವು. ಶಾಂತನುವಾಗಲಿ ಆ ಸುಂದರಿಯಾಗಲಿ ಅಷ್ಟು ಹೊತ್ತು ಕಣ್ಣಿಗೆ ಎವೆಯಿಕ್ಕಲಾರದಾದರು. ಸುಂದರಿ ಲಜ್ಜೆ ತಳೆದಳು. ಶಾಂತನುವು ಅವಳು ಯಾರಾಗಿರಬಹುದೆಂದು ತಿಳಿದುಕೊಳ್ಳಲು ಅವಳನ್ನೇ ಕುರಿತು ಪ್ರಶ್ನೆಮಾಡಿದನು.

‘ತಾವು ಹಸ್ತಿನಾಪುರದ ಶಾಂತನುರಾಜರಲ್ಲವೆ?’ ಎಂದು ಆ ಸುಂದರಿಯು ಕೇಳಿದಳು.

'ನಾನೇ ಶಾಂತನುರಾಜನು' ಎಂದು ಅವನು, ಲವಲವಿಕೆಯಿಂದ ಉತ್ತರ ಕೊಟ್ಟನು.

ಆಗಲಾ ಮನೋರಮೆಯು,—'ನನ್ನ ವಿಷಯವಾಗಿ ನಿಮ್ಮ ತೀರ್ಥರೂಪರು ನಿನಗೆ ಧಾರಾಳವಾಗಿ ಹೇಳಿದುದಿರಬಹುದು. ಅವರು ನನ್ನ ಛಾಯೆಯನ್ನು ಒಮ್ಮೆ ಕಂಡಿದ್ದರು,' ಎಂದಳು.

ಶಾಂತನುಚಕ್ರವರ್ತಿಯು ವಿಶೇಷವಾದ ಕುತೂಹಲದಿಂದ,—'ಆ ಸ್ವಪ್ನಚಿತ್ರವೇ ನನ್ನಲ್ಲಿಯೂ ನಾಟುವ ಹಾಗೆ ಅವರು ತಿಳಿಯಹೇಳಿದರಲ್ಲದೆ, ಎಂದಾದರೂ ನಾನು ವಿವಾಹವಾಗುವೆನಾದರೆ, ನಿನ್ನನ್ನಲ್ಲದೆ ಮತ್ತೊಬ್ಬರನ್ನು ವರಿಸಕೂಡದಾಗಿ ತಿಳಿಸಿದ್ದರು' ಎಂದು ಹೇಳಿದನು.

'ಸರಿ. ತಾವು ಹಸ್ತಿನಾಪುರದ ರಾಜರೆಂಬುದು ವಾಸ್ತವವು. ನಾನೇ ಆ ವಧು, ಆ ದೇವಕನ್ಯೆ; ನನ್ನ ಮಾತನ್ನು ಕೇಳಿ ತಾವು ನನಗೆ ತಮ್ಮ ಮಂದಿರದಲ್ಲಿ ಸ್ಥಾನಕೊಡುವಂತಾಗಬೇಕೆಂದು ಬೇಡಿಕೊಳ್ಳುತ್ತಿರುವೆನು. ಆದರೆ,—ಆದರೆ—ನಾನು ತಮಗೆ ಪತ್ನಿಯಾಗುವೆನಾದರೂ ನನ್ನ ನಿಯಮಗಳು ಇರುವುವು. ಆ ನಿಯಮಗಳನ್ನು ಪಾಲಿಸುವಿರೆಂದು ನನಗೆ ಮಾತು ಕೊಡಬೇಕಾಗಿದೆ' ಎಂದು ದೇವಕನ್ಯೆಯು ಅರುಹಲು, ಶಾಂತನುರಾಜನು ಬಹುಕಾಲದ ತನ್ನ ಮನದಾಸೆಯು ಕೈಗೂಡಿತೆಂದು ತಿಳಿದು, 'ಎಂತಹ ನಿಯಮಕ್ಕಾದರೂ ನಾನೊಪ್ಪಿರುವೆನು' ಎಂದನು.

ಆ ದೇವಕನ್ಯೆಯು,—'ನನ್ನ ನಿಯಮವಿಷ್ಟೆ. ನನ್ನ ನಿಯಮವನ್ನು ಪಾಲಿಸುವಿರೆಂದ ಬಳಿಕ ನಾನು ಒಪ್ಪುವಳೇ. ನಾನು ತಮಗೆ ಪತ್ನಿಯಾಗುವೆನಾದರೂ, ನನ್ನ ಮನಸ್ಸಿಗೆ ತೋಚಿದ ರೀತಿಯಲ್ಲಿ ಮಾತ್ರ ವರ್ತಿಸುವೆನು, ಅದಕ್ಕೆ ಯಾವ ಆಕ್ಷೇಪವೂ ಬರಬಾರದು. ಎಂದಿಗೆ ನನ್ನ ಸ್ವೇಚ್ಛೆಗೆ ಇದಿರಾಗಿ ತಾವು ಮರುಮಾತನಾಡುವಿರೊ, ಅಂದಿಗೆ ನಾನು ಈ ವಿವಾಹ ಬಂಧನದಿಂದ ಹೊರಬೀಳುವೆನು,' ಎಂದಳು.

ಶಾಂತನುವು ಅವಳ ಮಾತಿಗೆ ಒಡಂಬಟ್ಟು ಅವಳ ಪಾಣಿಗ್ರಹಣವನ್ನು ಮಾಡಿದನು. ಬಹುಕಾಲದ ಆಕಾಂಕ್ಷೆಯು ಇಂದಿಗೆ ನೆರವೇರಿತು; ಪ್ರದೀಪರಾಜನ ವಂಶವು ಪ್ರದೀಪ್ತವಾಯಿತು. ಆ ದೇವಕನ್ಯೆಯನ್ನು ತನ್ನ ರಥದಲ್ಲಿ ಎತ್ತಿ ಕುಳ್ಳಿರಿಸಿ, ಅವನು ರಾಜಧಾನಿಗೆ ಮರಳಿದನು. ಬಳಿಕ ಬಹಳ ವಿಜೃಂಭಣೆಯಿಂದ ಆ ವಿವಾಹವು ನೆರವೇರಿತು.

ಈ ದಂಪತಿಗಳು ಬಹುಕಾಲ ಸುಖದಿಂದಿದ್ದರು. ರಾಣಿಯಲ್ಲಿ ಕ್ರಮವಾಗಿ ಏಳು ಮಂದಿ ಮಕ್ಕಳು ಜನಿಸಿದರು. ರಾಜನು ಪ್ರತಿಯೊಂದು ಮಗುವು ಹುಟ್ಟಿದ ಕೂಡಲೆ ಅದರ ಮುಖವನ್ನು ನೋಡಿ ಸಂತೋಷ ಗೊಳ್ಳುವನು. ಅವನ ಸಮಯವೆಲ್ಲವೂ ದಾನ, ಧ್ಯಾನ, ಯಾಗ, ಯಜ್ಞ ಗಳಲ್ಲೆ ಕಳೆಯುತ್ತಿದ್ದಿತು. ರಾಣಿಯು ಪ್ರತಿಯೊಂದು ಮಗುವನ್ನು ಜನನ ವಾದ ಅತ್ಯಲ್ಪ ಕಾಲದೊಳಗಾಗಿ ಗಂಗಾನದಿಯಲ್ಲಿ ಒಗೆದು ಬರುತ್ತಿದ್ದಳು. ಈ ರೀತಿಯಾಗಿ ಅವಳು ಏಳೂ ಮಕ್ಕಳನ್ನು ಹತ್ಯಮಾಡಿದುದನ್ನು ರಾಜನು ತಿಳಿದೂ ತಿಳಿದೂ, ಹಿಂದೆ ತಾನು ಇದಿರಾಡುವುದಿಲ್ಲೆಂದು ವಚನ ಕೊಟ್ಟಿದ್ದ ಕಾರಣ ಮರುಮಾತೆತ್ತದೆ, ಅಂತರಂಗದಲ್ಲಿಯೆ ದುಃಖತಳೆದನು. ಎಂಟನೆಯ ಸಲವೂ, ಅವಳು ಎಂದಿನಂತೆ ಗಂಡುಕೂಸನ್ನು ಹೆತ್ತಳು. ರಾಜನು ಎಂದಿ ನಂತೆ ಮಗುವಿನ ಮೊಗನೋಡಿಯೆ ಸುಖಹೊಂದಿದನು. ಮುಂದೇನು ಮಾಡುವಳೊ ನೋಡಬೇಕೆಂದು ಕಣ್ಣುಬಿಟ್ಟು ಕುಳಿತನು. ಎಂಟನೆಯ ಕುಮಾರನನ್ನು ಅವಳು ಆಗಲೆ ಗಂಗೆಗೆ ಒಗೆಯಲಿಲ್ಲ. ಇದರಿಂದ ರಾಜನ ಪ್ರಾಣವು ತುಂಬ ಕುತೂಹಲಗೊಂಡಿತು. ಕೆಲದಿನಗಳ ತನಕ ಬಾರಿಬಾರಿಗೂ ಆ ಕುಮಾರನನ್ನು ರಾಜನು ಕಾಣುತಲಿದ್ದುದರಿಂದ, ಅವನಲ್ಲಿ ಪುತ್ರಸ್ನೇಹವೂ ಹೆಚ್ಚಾಗುತ್ತ ಬಂದಿತು. ಅದನ್ನು ತಿಳಿದು ರಾಣಿಯು, ಆ ಮಗುವನ್ನು ತನ್ನ ತೋಳಲ್ಲೆತ್ತಿಕೊಂಡು ಗಂಗಾನದಿಯ ಕಡೆಗೆ ಹೊರಟಳು. ರಾಜನೂ ಅವಳನ್ನು ಹಿಂಬಾಲಿಸಿಯೆ ಅತ್ತ ತೆರಳಿದನು. ರಾಣಿಯು ಆ ಮಗುವನ್ನು ಗಂಗೆಯಲ್ಲಿ ಬಿಸುಡಲು ಎತ್ತಿ ತೂಗಿದಳು. ಪುತ್ರಸ್ನೇಹಭರಿತನಾದ ರಾಜನು ಹುಚ್ಚನಂತೆ ಚೀತ್ಕರಿಸಿದನು. 'ರಕ್ಕಸಿಯೆ! ನಿನ್ನ ಪ್ರಾಣದಲ್ಲಿ ದಯೆ ಮಾಯೆ ಒಂದೂ ಇಲ್ಲವೆ? ವಜ್ರದ ಚಂದ್ರನಂತಿರುವ ತನ್ನ ಹೊಟ್ಟೀ ಮಗನನ್ನು ನೀರಿಗೆ ಬಲಿಕೊಡಲು ನಿನ್ನ ಹೃದಯವು ಒಡೆಯದೇನು?' ಎಂದನು.

ರಾಣಿಯು ಕೂಡಲೆ ತನ್ನ ಕೈಯನ್ನು ತಡೆದಳು. ಸುಮ್ಮನೆ ನಿಂತು ಕೊಂಡಳು. 'ರಾಜನೆ! ನಾನು **ಗಂಗಾದೇವಿ!** ಬ್ರಹ್ಮಶಾಪದಿಂದ ನಿನಗೆ ರಾಣಿಯಾಗಲು ಜನ್ಮವೆತ್ತಿದೆನು. ನನ್ನಲ್ಲಿ ಹುಟ್ಟಿರುವ ಈ ಮಕ್ಕಳು ವಸಿಷ್ಠನ ಶಾಪಕ್ಕೊಳಗಾದ ಅಷ್ಟವಸುಗಳು. ಇವನು ಎಂಟನೆಯವನು. ಇವನು ಮಿಕ್ಕವರಂತೆ ಗಂಗೆಯಲ್ಲಿ ಮಿಂದು ತನ್ನ ಶಾಪವನ್ನು ಕಳೆದು

ಕೊಳ್ಳುವುದಿಲ್ಲ. ನಿನ್ನ ಇಷ್ಟದಂತೆ, ಅವನ ಕರ್ಮಫಲದಂತೆ, ಬಾಳುವನು. ನನ್ನ ಜನ್ಮದ ಉದ್ದೇಶವು ಇಲ್ಲಿಗೆ ಮುಗಿಯಿತು. ಹಿಂದೆ ನಾನು ಹೇಳಿದ ಆ ನಿಯಮದ ನೆನಪಿದೆಯೆ? ಇನ್ನು ಮಾತ್ರ ನಾನು ನಿನಗೆ ಸಿಗಲಾರೆನು. ಮಗು ನಿನ್ನದೇ ಆಗಿರಲಿ. ಆದರೆ ಇವನನ್ನು ಇಲ್ಲೇ ಈಗಲೆ ಇರಿಸಲಾರೆನು. ಅವನನ್ನು ಮಾತೃಪ್ರೇಮಪೂರ್ವಕವಾಗಿ ಲಾಲಿಸಿ ಪಾಲಿಸುವವರಿಲ್ಲವಾದುದರಿಂದ, ನಾನೆ ಅವನ ಆರೈಕೆ ನೋಡುವೆನು. ಇಂದಿನಿಂದ ಹದಿನಾರು ಸಂವತ್ಸರಗಳು ಮುಗಿವಂದು, ಅವನನ್ನು ನಿನ್ನ ವಶಕ್ಕೆ ಒಪ್ಪಿಸಿ ಕೊಡುವೆನು' ಎಂದು ಮಾತು ಮುಗಿಸುತ್ತಿದ್ದಂತೆಯೆ ಅವಳು ಶಿಶುವಿನೊಡನೆ ಮಾಯವಾದಳು. ಪತ್ನೀಪುತ್ರರನ್ನು ಕಳೆದುಕೊಂಡ ಶಾಂತನು ಚಕ್ರವರ್ತಿಯು ಅಳುತಳುತ ತನ್ನ ರಾಜಧಾನಿಗೆ ಮರಳಿದನು.

---

## ೨. ಮಗುವೇ ದೇವವ್ರತನು

ಅದಾಗಿ, ಹದಿನಾರು ಸಂವತ್ಸರಗಳು ಕಳೆದುವು. ರಾಜನು ಆ ಅವಧಿಯಲ್ಲಿ ತುಂಬ ದುಃಖಾತುರನು, ಅವನ ಮನಸ್ಸಿನಲ್ಲಿ ಶಾಂತಿಯಿಲ್ಲ, ಅವನ ಹೃದಯದಲ್ಲಿ ಬಲವಿಲ್ಲ, ಕಾರ್ಯದಲ್ಲಿ ಉತ್ಸಾಹವಿಲ್ಲ, ಉದ್ಯಮವೂ ಇಲ್ಲ. ಗಂಗಾನದಿಯ ತೀರದಲ್ಲೆ ಯಾವಾಗಲೂ ಅಡ್ಡಾಡುವನು. ಇನ್ನೊಂದು ಬಾರಿ ಆ ದೇವಕನ್ಯೆಯನ್ನು ಎಂದಿಗೆ ಕಾಣುವೆನೊ ಎಂದು ಅವನ ಆಸೆ. ಏಕೆಂದರೆ, ಅವನು ಅಂದು ಅವಳ ನಿಯಮದಂತೆ ನಡೆಯದೆ ತಪ್ಪಿತವನ್ನು ಮಾಡಿದುದಕ್ಕೆ, ಒಮ್ಮೆ ಕ್ಷಮೆ ಬೇಡಬಹುದೆಂದೆ ಅವನ ಕೋರಿಕೆ. ಹದಿನಾರು ವರ್ಷಗಳು ಕಳೆಯುತ್ತ ಬಂದುವಾದರೂ, ಆ ದೇವಿಯ ಸುಳಿವೇ ಇಲ್ಲ! ತನ್ನ ಹೃದಯದಲ್ಲಿದ್ದ ಅನುತಾಪವನ್ನು ಅವಳಿಗೆ ಹೇಗೆ ತಿಳಿಯಗೊಡುವನು? ಅವನು ತನ್ನ ಮನಸ್ಸಿನ ಜ್ವಾಲೆಯಿಂದ ಸುಡುತ್ತಲೆ ಇದ್ದನು.

ಅಂದಿಗೆ ಹದಿನಾರು ವರ್ಷಗಳು ಪೂರ್ಣವಾದುವು. ಅಂದೇ ಪುನಃ ಅವನು ಪುತ್ರನನ್ನು ಪಡೆಯಬೇಕಾಗಿದೆ. ಅದಕ್ಕಾಗಿಯೆ ಅವನು ಗಂಗಾತೀರಕ್ಕೆ ನಡೆತಂದನು. ಕೊಟ್ಟ ಮಾತನ್ನು ದೇವಕನ್ಯೆಯು ಪೂರಯಿಸದಿರುವಳೆ? ಆದುದರಿಂದಲೇ ಅವನಲ್ಲಿ ಆಸೆಯು ಉಕ್ಕೇರುತ್ತ ಬಂದಿತು. ಅಷ್ಟರಲ್ಲಿಯೆ, ಅಗೊ! ದೂರದಲ್ಲಿ! ಅತ್ತ ಅವನ ಕಡೆಗೆ ನೀರಿನ ಮೇಲೆ

ನಡೆದು ಬರುತ್ತಿರುವ ಆ ಬಾಲಕನು ಯಾರು? ಕಾಮನಂತಹ ಸುಂದರನು; ಅವನ ಕೈಯಲ್ಲಿ ಧನುರ್ಬಾಣಗಳು. ಗಂಗಾನದಿಯು ನೀರನ್ನು ಹರಿಯು ಗೊಡದಂತೆ ಅವನು ಬಾಣಗಳ ದಂಡೆಯನ್ನು ಹೂಡಿರುವನು! ರಾಜನಿಗೆ ಇನ್ನೆಷ್ಟು ಆಶ್ಚರ್ಯವಾಗದು! ರಾಜನು ನೋಡುತಿದ್ದಂತೆಯೆ ಅವನು ಗಂಗೆಯ ನೀರಲ್ಲಿಳಿದನು. ಎಳಗೂಸು ತೂಗುತೊಟ್ಟಿಲಲ್ಲಿ ಸುಖನಿದ್ರೆ ಮಾಡುವಂತೆ, ಗಂಗಾನದಿಯ ತೆರೆಗಳ ನಡುವೆ ಅವನು ತೂಗುತಿದ್ದನು! ತೆರೆಗಳು ಎದ್ದು ಅವನಿಗೆ ತಲೆವಾಸಿನಂತೆ ಬಾಗಿ ದುಂಡಗಾಗುತ್ತಿರಲು, ಮಂದ ಮಾರುತನು ಬೊಬ್ಬುಳಿಗಳೊಳಗಿಂದ ಬೀಸುತ್ತ ಅವನು ನಿದ್ದೆಹೋಗುವಂತೆ ಸುಯ್ಯುತಿರಲು, ಸೂರ್ಯಕಿರಣಗಳು ಅವನ ಮೈಯನ್ನು ತಪಿಸಬಾರದೆಂದು ತೆಳ್ಳನೆ ತೆರೆಗಳು ಅವನನ್ನು ಹೊದೆಯುತಿರಲು, ಜಲಪಕ್ಕಿಗಳು ಕಲಕಲ—ಕಿಲಕಿಲವೆಂದು ಅವನಿಗೆ ಜೋಗುಳ ಹಾಡುತಿರಲು, ಬಾಲಕನು ಮೀನುಗಳನ್ನು ಕರೆದಾಡಿಸುತಲೂ ನೀರುಹಾವುಗಳನ್ನು ಮುದ್ದಿಡುತಲೂ, ಆವೆಗಳ ಕೊರಳುಗಳನ್ನು ತಬ್ಬುತಲೂ, ಮೊಸಳೆಗಳ ಬಾಯಿಗಳಲ್ಲಿ ತೋಳುಗಳನ್ನು ಚಾಚಿ ಅವುಗಳ ಹಲ್ಲುಗಳನ್ನು ಎಣಿಕೆಮಾಡುತಲೂ ಇದ್ದನು! ಅವನು ಮನುಷ್ಯನೆ? ಜಲಚರವೆ? ಇಂತಹ ವಿಚಿತ್ರ ಲೀಲೆಯನ್ನಾಡುವ ಅವನನ್ನು ಕಾಣುತ್ತಲೆ ರಾಜನಲ್ಲಿ ಪುತ್ರಸ್ನೇಹ ಉಂಟಾಯಿತು. ಅವನು ರಾಜನ ಮನಸ್ಸನ್ನು ಹೇಗೆ ಸೆಳೆದುಕೊಂಡನು! ಆಗಲೆ ರಾಜನಲ್ಲಿ ಪುತ್ರಸ್ನೇಹವೂ ಪತ್ನೀಶೋಕವೂ ಒಂದೇ ಬಾರಿ ಮೂಡಿದುವು; ಅವನು ಗಂಗಾತೀರದಲ್ಲಿ ನಿಂತಲ್ಲೆ ಕುಳಿತನು.

ಗಂಗೆಯಲ್ಲಿ ಆಗ ಕನಿಕರ ಉಂಟಾಯಿತು. ಗಂಗೆಯು ತನ್ನ ವಾಹನವಾದ ಮಕರವನ್ನೇರಿ, ತನ್ನ ಆ ಬಾಲಕನನ್ನು ಜತೆಯಲ್ಲಿರಿಸಿಕೊಂಡು, ನೀರಿನ ಮೇಲೆ ಕಾಣಿಸಿಕೊಂಡಳು. ರಾಜನು ತನ್ನ ಎರಡೂ ತೋಳುಗಳನ್ನು ಚಾಚಿ, ಆ ಬಾಲಕನನ್ನು ಆಲಿಂಗಿಸಲು ಮುಂದಾದನು. ಆದರೆ, ಅವನ್ಯಾರೊ ಎಂಬ ಸಂಶಯದಿಂದ ನಾಚಿಕೊಂಡನು. ಅದನ್ನು ಕಂಡು ಗಂಗಾದೇವಿಯು, 'ರಾಜನೆ! ಇವನೀಗ ನನ್ನಲ್ಲಿ ಜನಿಸಿದ ನಿನ್ನ ಎಂಟನೆ ಮಗನು; ಇವನನ್ನು ದೇವವ್ರತನೆಂದು ಕರೆವರು. ನಾನು ಅಂದು ಭಾಷೆ ಕೊಟ್ಟಂತೆ, ಇಂದು ಇವನನ್ನು ನಿನಗೆ ಒಪ್ಪಿಸಿರುವೆನು' ಎಂದು ಅವನಲ್ಲಿ ಉಂಟಾದ ಸಂದೇಹವನ್ನು ದೂರಗೊಳಿಸಿದಳು.

ಕುಮಾರನು ತಂದೆಗೆ ಸಾಷ್ಟಾಂಗ ನಮಸ್ಕಾರಮಾಡಲು ಕಾಲ್ಗೆ ರಗುವಾಗಲೇ, ತಂದೆಯು ಅವನನ್ನು ತನ್ನ ತೋಳುಗಳಿಂದ ಅಪ್ಪಿ ಎತ್ತಿ ಕೊಂಡನು. ಬಳಿಕ ರಾಜನು ಪತ್ನೀಪ್ರೇಮವನ್ನು ಮರೆತು, ಪುತ್ರಸ್ನೇಹ ದಲ್ಲೆ ನನೆದನು. ರಾಜನ ವಾತ್ಸಲ್ಯವನ್ನು ಕಣ್ಣಾರೆ ಕಂಡು ಗಂಗಾ ದೇವಿಯೂ ಆನಂದಿತೆಯಾದಳು. ಆಗ ಅವಳು, 'ರಾಜನೆ! ಮಗನು ದೊರೆತನೆಂದು ನಿನ್ನ ಇಚ್ಛೆಗೆ ಬಂದಂತೆ ಇವನಿಗೆ ಶಿಕ್ಷಣ ಕೊಡಿಸಲಾರೆ. ಏಕೆಂದರೆ, ಇವನು ನನ್ನಿಂದ ಪಡೆದಂತಹ ವಿದ್ಯಾಭ್ಯಾಸವು ನರಲೋಕದಲ್ಲಿ ದೊರೆವುದು ಅಸಾಧ್ಯವು; ದೇವಲೋಕದಲ್ಲಿಯೂ ಸುಲಭಸಾಧ್ಯವಲ್ಲ. ಇವನ ದೆಸೆಯಿಂದ ಇವನಿರುವ ರಾಜ್ಯವು ಎಂದೂ ಹಾಳಾಗದು. ಇವನು ಅಸ್ತ್ರವಿದ್ಯೆಯನ್ನು ವಸಿಷ್ಠರಲ್ಲಿ ಕಲಿತುಕೊಂಡನು. ದೇವಗುರು ದೈತ್ಯಗುರು ಗಳಂತೆಯೆ ಇವನು ಸರ್ವಶಾಸ್ತ್ರಗಳನ್ನೂ ಬಲ್ಲನು. ಪರಶುರಾಮನು ತಿಳಿದಿರುವಷ್ಟೆ ಚೆನ್ನಾಗಿ ಇವನು ಅಸ್ತ್ರವಿದ್ಯೆಗಳನ್ನೂ ತಿಳಿದಿರುವನು. ಇವನಿಗೆ ಅಗೋಚರವಾಗಿ ಯಾವ ನೀತಿಶಾಸ್ತ್ರವೂ ಧರ್ಮಶಾಸ್ತ್ರವೂ ಕರ್ಮ ವಿಧಿಯೂ ಇರುವುದಿಲ್ಲ. ಇವನನ್ನು ಯುವರಾಜನೆನಿಸಿ ಅಭಿಷೇಕಗೊಳಿಸು ವುದು ನಿನಗೆ ವಿಹಿತವು' ಎನ್ನುತ್ತ ಅದೃಶ್ಯಳಾದಳು.

ರಾಜನು—ಆಹಾ, ದೇವಿ! ಗಂಗಾದೇವಿ! ಎಲ್ಲಿಗೆ ತೆರಳಿದೆ? ಏಕೆ ಮಾಯವಾದೆ? ನನ್ನ ಇನ್ನೊಂದು ಮಾತನ್ನು ಕೇಳಬಾರದೆ? ಎಂದು ಕೂಗಿಟ್ಟನಾದರೂ, ದೇವಿಯು ಪುನಃ ಕಾಣಿಸಿಕೊಳ್ಳಲಿಲ್ಲ. ರಾಜನು ಪುತ್ರ ನೊಡನೆ ಹಸ್ತಿನಾಪುರಕ್ಕೆ ಮರಳಿದನು. ಪ್ರಜೆಗಳೂ ಮಂತ್ರಿಗಳೂ ಆ ರಾಜಪುತ್ರನನ್ನು ಕಂಡು ಹೊಗಳಿ ತೃಪ್ತಿಹೊಂದಿದರು. ಎಲ್ಲರ ಸಮ್ಮತಿ ಯನ್ನು ಪಡೆದು ರಾಜನು ಅವನಿಗೆ ಯುವರಾಜಪಟ್ಟವನ್ನು ಕಟ್ಟಿದನು. ಅಂದಿನಿಂದ ದೇವವ್ರತನೇ ಪ್ರಜಾಪಾಲನೆಯನ್ನು ಮಾಡುತಿದ್ದನು.

## ೩. ದೇವವ್ರತನೇ ಯುವರಾಜನು

ದೇವವ್ರತನು ಯುವರಾಜಪದವನ್ನು ಅಲಂಕರಿಸಿದನು. ಅವನು ಆ ಪದವಿಗೆ ಏರಿದಂದು, ಮಾಂಡಲಿಕರೂ, ಸಭಾಸದರೂ, ಪ್ರಜಾಗಣವೂ ಎಂತಹ ಉತ್ಸಾಹವನ್ನು ತೋರ್ಪಡಿಸಿದರೊ ಅದನ್ನು ಬಣ್ಣಿಸಲು ಬರುವುದಿಲ್ಲ. ಮೆರೆವಣಿಗೆಯ ಕಾಲದಲ್ಲಿ, ಯುವರಾಜಶೃಂಗಾರದಿಂದ ಬರುತಿದ್ದ ದೇವವ್ರತನ ಮೂರ್ತಿಯನ್ನು ಕಂಡು, ಅಲ್ಲಲ್ಲಿ ಪ್ರಜೆಗಳು ಅವನ ಹೆಸರನ್ನೆತ್ತಿ ಜಯಘೋಷವನ್ನು ಮಾಡಿದರು. ಆ ಘೋಷವನ್ನು ಕೇಳಿದ ಚಕ್ರವರ್ತಿಯ ಹೃದಯಸಾಗರವು ಆನಂದಸಾಗರವಾಯಿತು. ಚಕ್ರವರ್ತಿಯೊಡನೆ ಯುವರಾಜನು ಬರುತಿದ್ದಂದು, ಅವನು ಸ್ವರ್ಗದಿಂದ ಧರೆಗೆ ತಂದ ಯಾವನೊಬ್ಬ ದೇವನೊ ಎಂದು ಪರಿಭಾವಿಸಿ, ಶಾಂತನುವಿನ ಪರಾಕ್ರಮವನ್ನು ಪ್ರಜೆಗಳು .ಕೊಂಡಾಡುತಿದ್ದರು. ಅವನು ದೇವನಲ್ಲ, ಅದೇ ಚಕ್ರವರ್ತಿಯ ಪುತ್ರನು, ದೇವವ್ರತನು ಎಂದು ತಿಳಿದು, ಅವರ ಕೊಂಡಾಟವು ಶ್ಲಾಘನೆಯಾಗಿ ಮಾರ್ಪಟ್ಟಿದ್ದಿತು. ತ್ರಿಲೋಕಪಾವನೆಯಾದ ಗಂಗೆಯ ಬಸಿರಲ್ಲಿ ಹುಟ್ಟಿ, ಜಲಸಮಾಧಿಯಿಂದ ಅಂದು ಬದುಕಿದ ಆ ಪರಮಬಲಶಾಲಿಯೂ ತೇಜೋವಂತನೂ ಆದ ದೇವವ್ರತನು ತನಗೆ ಪುತ್ರನೆಂಬುದು ಶಾಂತನುವಿಗೆ ಎಂತಹ ಭಾಗ್ಯವು! ಅವನು ಇವನಿಗಾಗಿಯೆ ತನ್ನ ವಚನವನ್ನು ಮೀರಿದ್ದನಾದರೂ, ಅವಳು ಅವನದೊಂದೇ ಒಂದು ಮಾತಿಗಾದರೂ ವಿಳಂಬಿಸದೆ ಮಾಯವಾದರೂ, ಇಂತಹನನ್ನು ಪಡೆದುಕೊಂಡನೆಂದ ಬಳಿಕ ಶಾಂತನುವಿನ ಭಾಗ್ಯಕ್ಕೆ ಎಣೆಯಿದೆಯೆ? ಇದನ್ನೆ ಪರಿಭಾವಿಸುತಲಿದ್ದುದರಿಂದಲೇ ಪತ್ನೀವಿಯೋಗ ದುಃಖದಿಂದ ಗಂಗಾತಟಾಕದಲ್ಲಿ ದುಮ್ಮಿಕ್ಕುವುದೂ ಅಥವಾ ವಿರಹ ತಾಪದಿಂದ ಬಂಡೆಕಲ್ಲುಗಳನ್ನು ಕುರಿತು ಪ್ರೇಮವಾಣಿಯನ್ನಾಡುವುದೂ, ಮೊದಲಾದ ಮೂರ್ಖವಿರಹಿಗಳ ರೀತಿಯನ್ನು ಶಾಂತನುವು ತೊರೆದು, ಜುಂಝಾನಿಲನ ಹಿಂಸೆಗೊಳಗಾದ ಪ್ರಚಂಡ ವೃಕ್ಷರಾಜನಂತೆ ಧೀರೋದಾತ್ತನಾಗಿ ಮೆರೆಯಲು ಶಕ್ತನಾದನು. ರಾಜ್ಯಭಾರವನ್ನು ಪುತ್ರನ ಹೆಗಲ ಮೇಲೆ ಇರಿಸಿದ ಬಳಿಕ, ಶಾಂತನುವಿಗೆ ಧರ್ಮವಿಚಾರದಲ್ಲಿ ದಿನಕಳೆವುದೇ ಮುಖ್ಯೋದ್ಯೋಗವಾಯಿತು; ಪ್ರಜೆಗಳಿಗೆ ಸುಖವನ್ನು ಒದಗಿಸಲು

ಸಾಧಿಸುವುದೇ ದೇವವ್ರತನ ಕರ್ತವ್ಯನಿಷ್ಠೆಯಾಯಿತು. ಅವನ ಆಳಿಕೆಯಲ್ಲಿ ಪ್ರಜೆಗಳಿಗೆ ದುಃಖಸಂಕಟಗಳೆಂದರೆ ಏನೆಂದು ತಿಳಿಯಲೆ ಇಲ್ಲ. ರಾಜ್ಯದಲ್ಲಿ ತುಂಬ ಸುಖವೂ ಶಾಂತಿಯೂ ನೆಲೆಮಾಡಿದುವು. ದೇವವ್ರತನೂ ದಿನದಿನಕ್ಕೆ ಪ್ರಚಂಡ ತೇಜೋವಂತನಾಗಿ ಬಳೆದು ಬರುತಿದ್ದನು. ಅವನು ಸತ್ಯವಾದಿ, ಜಿತೇಂದ್ರಿಯನು, ಧರ್ಮತತ್ಪರನು; ದೇವಾಸುರರೂ ಅವನನ್ನು ಹೊಗಳುತಿದ್ದರು. ರಾಜಾಸ್ಥಾನದ ಕವಿಗಳು,—'ಅವನು ತೇಜದಲ್ಲಿ ಸೂರ್ಯನಂತಿರುವನಾದರೂ ಚಂದ್ರನಂತೆ ಶಾಂತನಾಗಿರುವನು; ಪೃಥ್ವಿಯಂತೆ ಕ್ಷಮಾಯುಕ್ತನು; ಸಾಗರದಂತೆ ಗುಣಪೂರ್ಣನು; ವಾಯುವಿನಂತೆ ತೀವ್ರಗತಿಯುವನು; ಯಮನಂತೆ ದುಷ್ಟದಮನನು' ಎಂದು ಹಾಡುತಿದ್ದರು. ಪ್ರಜೆಗಳ ಐಹಿಕವಿಚಾರಗಳೆಲ್ಲವೂ ನಿರಾತಂಕವಾಗಿ ದೇವವ್ರತನ ಜಾಗರೂಕತೆಯಿಂದ ಸಾಗುತಿರಲು, ಅವರು ದೇವಾರಾಧನೆಯಲ್ಲೆ ನಿರತರಾಗಿದ್ದು, ಯುವರಾಜನಿಗೆ ಮಂಗಲವಾಗಲೆಂದು ಭಗವಂತನಲ್ಲಿ ಪ್ರಾರ್ಥಿಸಿಕೊಳ್ಳುತಿದ್ದರು. ಮಗನ ಮೊಗವನ್ನು ನೋಡಿಯೆ ರಾಜನಂತೂ ಸಂತೋಷಪೂರ್ಣನು!

ಹೀಗಿರಲೊಂದು ದಿನ, ಪ್ರಾತಃಕಾಲದಲ್ಲಿ ಚಕ್ರವರ್ತಿಯ ಚರಣಸೇವೆಯನ್ನು ಮಾಡುತಲಿದ್ದ ಯುವರಾಜನ ಸಂಭಾಷಣೆಗೆ ಅಡ್ಡಬಂದ ನಂತೆ ರಾಜದೂತನೊಬ್ಬನು ಅತ್ತ ಕಟ್ಟುಸಿರಿನಿಂದ ಓಡುತ್ತ ಬಂದು,—'ಯಮುನಾತಟಾಕದ ಪ್ರದೇಶದಲ್ಲಿ ಕಾಡುಜನಗಳ ಹಿಂಸೆಯು ಕಾಡುಮೃಗಗಳ ಹಾವಳಿಗಿಂತ ಅಧಿಕವಾಗಿ ಬೆಳೆಯುತ್ತಲಿದೆ. ಅವರು ಊರುಗಳನ್ನು ಸುಲಿದರು; ವೈಶ್ಯರ ಹಡಗುಗಳನ್ನು ಕೊಳ್ಳೆ ಹೊಡೆದರು; ವ್ಯಾಪಾರವು ಸಾಗುವಂತಿಲ್ಲ; ಅಲ್ಲಿನ ಪ್ರಜೆಗಳು ಉಪವಾಸಿಗಳು; ಹೆಮ್ಮಕ್ಕಳನ್ನು ಈ ಕಾಡುಜನಗಳು ನಾನಾ ಬಗೆಯಾಗಿ ಹಿಂಸೆಮಾಡುತಿರುವರು. ಇಂತಹ ಕಪಟಿಗಳ ಕೈಯಿಂದ ನಮ್ಮನ್ನು ಕಾಪಾಡಬೇಕಾಗಿದೆ' ಎಂದು ಕೈಮುಗಿದನು.

ಅಂದಿನ ತನಕ ಇಂತಹ ದುರ್ವಾರ್ತೆಗಳು ಶಾಂತನುವಿನ ಕಿವಿಸೇರಿದುವೆ ಇಲ್ಲ. ಅವನು ಕೋಪೋದ್ದೀಪಿತನಾಗಿ,—'ಶಾಂತನುರಾಜನ ಜೀವಿತಕಾಲದಲ್ಲಿಯೆ ಇಂತಹ ನೀಚ ಕಪಟಿಗಳು ಪ್ರಜೆಗಳನ್ನು ಪೀಡಿಸುತ್ತಾರೆಯೆ? ದೇವದಾನವರೂ, ಯಕ್ಷಕಿನ್ನರರೂ ದಿಗಂತಗಳಲ್ಲೂ ಯಾವನ

ಕೀರ್ತಿಸ್ತೋತ್ರವನ್ನು ಹಾಡುವ ಪಾಠವನ್ನೇ ಇಟ್ಟುಕೊಂಡು ನಮ್ರರಾಗಿ ದ್ವಾರಿಯೊ ಅಂತಹನಾಗಿರುವ ನನ್ನ ಪ್ರಜೆಗಳನ್ನು ಕೆಣಕಲು ಬರುವವರು ಯಾರವರು? ಪ್ರಲಯಕಾಲದಲ್ಲಿ ಪ್ರಪಂಚವನ್ನೆ ಸುಟ್ಟುರುಹುವ ಅಗ್ನಿಯು ಚಿಕ್ಕ ದೀಪದ ಜ್ಯೋತಿರೂಪದಿಂದ ಆನಂದದಿಂದ ನಲಿಯುತಿರಲು, ಅಂತಹ ಆನಂದಕ್ಕೆ ವಿಘ್ನವನ್ನೊಡ್ಡುವುದೆ ತನಗೆ ಸಂತೋಷವೆಂದು ಅಲ್ಪವಾದ ಪತಂಗವು ತನ್ನ ರೆಕ್ಕೆಗಳಿಂದ ಆ ದೀಪವನ್ನು ನಂದಿಸಲು ಯತ್ನಿಸುವುದಂತೆ! ಈ ಮೂರ್ಖರಿಗೆ ಅವರ ಮೂರ್ಖತನಕ್ಕೆ ತಕ್ಕ ಪ್ರಾಯಶ್ಚಿತ್ತವು ಅವಶ್ಯವಾಗಿದೆಯಲ್ಲವೆ? ಈಗಲೆ ಸೈನ್ಯದೊಡನೆ ಆ ಪ್ರದೇಶಕ್ಕೆ ಹೊರಡುವೆನು' ಎಂದನು.

ಯುವರಾಜನು, ತಾನು ಎಂತಹ ಪ್ರತಾಪಶಾಲಿಯೆಂದು ಇಂದೇ ತೋರಿಸಿಕೊಡುವ ಸುಯೋಗವು ಒದಗಿತೆಂದನು. ಮಾತೆಯು ತನ್ನ ಯುದ್ಧಶಿಕ್ಷಣವನ್ನು ಕುರಿತಾಗಿ ಆಡಿದ ಮಾತುಗಳನ್ನು ಇಂದೇ ಪ್ರತ್ಯಕ್ಷವಾಗಿ ಮಾಡಿಯೇ ತೋರಿಸುವೆನೆಂದನು. ಪ್ರಜೆಗಳಿಗೆ ಶುಭವಾಗಬೇಕೆಂಬ ಇಚ್ಛೆಯೊಂದು, ಮಹಾರಾಜನಾದ ತಂದೆಯ ಆಶೀರ್ವಚನವೊಂದು,—ಇವೆರಡು ಮಹಾಸ್ತ್ರಗಳ ಪ್ರತಾಪಕ್ಕೆ ಕಾಲವನ್ನಾದರೂ ಜಯಿಸುವುದು ಅಸಾಧ್ಯವಾಗಿಲ್ಲವೆಂದನು. ಆದರೆ,—'ಬಲಿಷ್ಠವಾದ ರಾಷ್ಟ್ರವನ್ನು ಗೆದ್ದು ಬರುವುದಕ್ಕಾಗಲಿ, ಅತಿರಥರ ಗರ್ವವನ್ನು ಭಂಗಗೊಳಿಸುವುದಕ್ಕಾಗಲಿ, ಅಥವಾ ನಿನ್ನ ಗುರುವನ್ನೆ ಇದಿರಿಸಿ ಎರಡು ಗಳಿಗೆ ಕಾದುತ್ತ ಕ್ಷಾತ್ರತೇಜವನ್ನು ಸಜ್ಜುಗೊಳಿಸಬೇಕೆಂದಾಗಲಿ ನಾನು ಹೇಳಬಹುದಲ್ಲದೆ, ಸುಕುಮಾರನಾದ ನಿನ್ನನ್ನು ಕಪಟಿಗಳ ಮೇಲೆ ಹಾರೆಂದು ಅವರ ಕೈಗೆ ಒಪ್ಪಿಸಿಕೊಡುವುದಿಲ್ಲ' ಎಂದು ಮಹಾರಾಜನು ಪುತ್ರವಾತ್ಸಲ್ಯದಿಂದ ಅವನನ್ನು ತಡೆದನು.

ಯುವರಾಜನು ಪುನಃ—'ಪಿತೃದೇವ! ಹಿಂದೆ ಭಾರ್ಗವರಾಮನ ಆಶ್ರಮದಲ್ಲಿ ಅಸ್ತ್ರಾಭ್ಯಾಸವನ್ನು ನಾನು ಮಾಡುತ್ತಿರುವಾಗ, ಒಂದು ದಿನ, ಸಾಯಂಕಾಲದಲ್ಲಿ, ಪೂರ್ವಕ್ಷಿತಿಜದ ಮೇಲೆ ಬಿಲ್ಲೊಂದು ಕಾಣಿಸಿಕೊಂಡಿತು. ಅದು ಇಂದ್ರಧನುಸ್ಸು; ನಾನು ಬಾಣವೊಂದನ್ನು ಹೂಡಿ ಕೂಡಲೆ ಆ ಧನುವನ್ನು ಕತ್ತರಿಸಿದೆನು. ಅದು ತುಂಡಾದುದಕ್ಕಾಗಿ ಮಹೇಂದ್ರನು ಸಿಟ್ಟಾಗಿ, ತನ್ನ ಐರಾವತವನ್ನು ನನ್ನ ಮೇಲೆ ಎರಗಿಸಿದನು.

ಅದನ್ನಾಗಲೆ ನಾನು ಬಾಣದಿಂದ ಭೂಮಿಗೆ ಒರಗಿಸಲು, ಇಂದ್ರನೂ ಸ್ವಲ್ಪ ಧೂಳನ್ನು ಉಂಡನು. ಆದರೆ ಗುರುಮಹಾರಾಯರು ಇಂದ್ರನನ್ನು ಕಂಡು, ನಾನು ಕ್ಷಮೆ ಪ್ರಾರ್ಥಿಸಿಕೊಳ್ಳುವಂತೆ ಮಾಡಿದರು. ಐರಾವತಕ್ಕೆ ಬೆದರದವನು ಯಾವ ಕಾಡುಜನರಿಗೆ ಬೆದರುವನು? ನಾನೇ ಯುದ್ಧಕ್ಕೆ ಹೋಗುವಂತೆ ಅಪ್ಪಣೆಯಾಗಲಿ' ಎಂದು ಪ್ರಾರ್ಥಿಸಿಕೊಂಡನು.

ಶಾಂತನುವು, ಈ ಅದ್ಭುತ ಪರಾಕ್ರಮಕ್ಕೆ ಪುತ್ರನನ್ನು ಕೊಂಡಾಡಿದನು. ಆದರೆ ಕಪಟಿಗಳನ್ನು ಗೆಲ್ಲುವುದಕ್ಕಾಗಿ ಪರಾಕ್ರಮಶಾಲಿಯನ್ನು ತಾನು ಕಳುಹುವುದಿಲ್ಲವೆಂದು ನುಡಿದು, ಸೈನ್ಯಸಮೇತನಾಗಿ ತಾನೇ ಅಲ್ಲಿಂದ ನೆಟ್ಟಗೆ ಯಮುನಾತೀರಕ್ಕೆ ನಡೆದನು. ಯುವರಾಜನು ಪಿತ್ರಾಜ್ಞೆಯೆ ಪ್ರಮಾಣವೆಂದು ತಿಳಿದು, ರಾಜ್ಯದ ಆಡಳಿತದ ಕಡೆಗೆ ಲಕ್ಷ್ಯವಿಡಲು ಆಸ್ಥಾನಕ್ಕೆ ತೆರಳಿದನು.

---

## ೪. ಶಾಂತನುವಿನ ಅಶಾಂತಿ

ಕಪಟಿಗಳಾದ ಕಾಡುಜನರ ಹಾವಳಿಯನ್ನು ಕಡೆಗಾಣಿಸಲು ಚಕ್ರವರ್ತಿಯು ಹೊರಟನಷ್ಟೆ. ಕಪಟಿಗಳನ್ನು ಕಪಟತನದಿಂದಲೆ ವಿನಾಶಗೊಳಿಸಬೇಕೆಂದು ಅವನು ನಿಶ್ಚಯಿಸಿ, ಸೈನಿಕರೆಲ್ಲರು ವೇಶಪಲ್ಲಟಿಸಿಕೊಂಡು ಯಮುನಾತಟಾಕದ ಪ್ರದೇಶದಲ್ಲೆ ಸಂದುಗೊಂದುಗಳಲ್ಲೆ ನುಸುಳುತ್ತ, ಕಾಡುಜನರನ್ನು ಅಣಗಿಸಬೇಕೆಂದು ಅಪ್ಪಣೆಕೊಟ್ಟು ಕಳುಹಿದನು. ಈ ವಾರ್ತೆಯು ಆ ಪ್ರದೇಶದಲ್ಲಿ ಹಬ್ಬುತ್ತಲೆ,— ಸೂರ್ಯಕಿರಣಗಳು ಮೂಡುತ್ತಲೆ ಕತ್ತಲೆ ಸರಿದೋಡುವ ಹಾಗೆ,— ಕಾಡಾಡಿಗಳು ದೆಸೆಗೆಟ್ಟು ಓಡಿದರು. ನಿಮಿಷದೊಳಗೆ ಅವರ ಹಾವಳಿಯೆ ಇಲ್ಲದಂತಾಯಿತು. ಶಾಂತನುವಿನ ಆಗಮನ ಮಾತ್ರವೆ, ಪ್ರಜೆಗಳಿಗೆ ಶಾಂತಿದಾಯಕವಾಯಿತು.

ಮಿಕ್ಕವರಂತೆ ಮಹಾರಾಜನೂ ವೇಷಪಲ್ಲಟಿಸಿದ್ದನು. ಮುಖ್ಯವಾಗಿ ಸೈನಿಕರಿಗೆ ಸಹಜವಾದ ಆಯುಧವೊಂದೂ ಅವನ ಬಳಿಯಲ್ಲಿರಲಿಲ್ಲ, ಜಲಪ್ರದೇಶದಲ್ಲಿ ಸಂಚರಿಸುವಂತಹ ಹಳೆಯ ನಾವಿಕನಂತೆ ಅವನು ಕಾಣುತಿದ್ದನು. ದೇಹಾಯಾಸವು ತೋರುತಿದ್ದಂತೆ, ಅವನು ಅಡ್ಡಾಡುತ್ತ ಯಮುನಾತೀರಕ್ಕೆ ಬಂದನು. ಅಂತಹ ದರಿದ್ರರ ಗೌರವರಕ್ಷಣಾರ್ಥಕ್ಕಾಗಿ

ಚಕ್ರವರ್ತಿಯಾದರೂ ಎಂತಹ ದೀನವೇಷವನ್ನು ಧರಿಸಿಕೊಳ್ಳಬೇಕಾಯಿತು! ಹಾಗೆ ದೀನತೆಯನ್ನು ಅವನು ವರಿಸಿದನೆಂದೇ ಪ್ರಜೆಗಳು ಅವನನ್ನು ಎಷ್ಟು ಭಕ್ತಿಯಿಂದ ಕಾಣುತ್ತಿದ್ದರು! ಸಾಮಾನ್ಯ ನಾವಿಕನಂತೆ ಅಡ್ಡಾಡುತ್ತ, ಆ ದೀನರ ಸುಖದುಃಖಗಳ ಪರಿಚಯವನ್ನು ಅವನು ಅಂದು ಪಡೆದಂತೆ, ಹಿಂದೆ ಒಡ್ಡೋಲಗದಲ್ಲಿ ಕುಳಿತು ಅಷ್ಟು ಅವಧಿಯಲ್ಲಿ ಎಂದೂ ಪಡೆದವನಲ್ಲ.

ಆಗ ಪ್ರಾತಃಕಾಲ. ಪ್ರಲಯಾನಂತರದಲ್ಲಿ ಭಗವಂತನು ಆಲದೆಲೆಯ ಮೇಲೆ ಸುಖದಿಂದ ಓಲಗಿಸುವಾಗ ಪ್ರಪಂಚದಲ್ಲಿ ಎಂತಹ ಶಾಂತತೆಯನ್ನು ಕಾಣುವನೊ, ಅದರಂತೆಯೆ ಆ ಪ್ರಾತಃಸಮಯವೂ ಶಾಂತಿಮಯ ವಾಗಿದ್ದಿತು. ಶಾಂತನುವು ಅಲ್ಲಿನ ರಮಣೀಯವಾದ ಸೃಷ್ಟಿಯ ಜೆಡಗನ್ನು ನೋಡುತ್ತಿದ್ದಂತೆಯೇ, ಅಮೋಘವಾದ ಸುವಾಸನೆಯೂ ಮಂದಮಾರುತ ದಲ್ಲಿ ಹರಿವುದನ್ನು ತಿಳಿದನು. ವನಲಕ್ಷ್ಮಿಯು ಪುಷ್ಪಗಂಧವನ್ನೂ ನಾಚಿಸು ವಂತಹ ಸುಗಂಧವು ಯಮುನಾತೀರದಲ್ಲಿ! ಹಿಂದೆ ಗೋಪಿಯರೊಡನೆ ಅಲ್ಲಿ ವಿಹಾರಗೈದ ಭಗವಂತನ ಲೀಲಾಸ್ಮರಣೆಗಾಗಿ, ಅವನು ಧರಿಸಿಕೊಂಡ ವನಮಾಲೆಯಿಂದ ಹೊರಟ ಸೌರಭವು ಇನ್ನೂ ಬೀರುತ್ತಲೆ ಇರುತ್ತಿದ್ದಿತೆ? ಅಥವಾ ಅದೊ, ಅದೂರದಲ್ಲೆ ನೌಕೆಯ ಮೇಲೆ ಜಲಕ್ರೀಡೆಯಾಡುವ ಯಮುನಾದೇವಿಯ ದೆಸೆಯಿಂದ ಈ ಗಂಧವು ಹರಿಯುತ್ತಿದ್ದರೂ ಇರ ಬಹುದು ಎಂದು ಅವನು ಭಾವಿಸಿದ್ದನು.

ಯಮುನಾದೇವಿಯೆಂದು ಅವನು ಭಾವಿಸಿದ್ದಾಕೆಯು, ತನ್ನ ನೌಕೆಯು ಕಲ್ಲುಗುಂಪುಗಳ ಎಡೆಯಲ್ಲಿ ಸಿಕ್ಕಿಕೊಂಡಿತೆಂದೂ, ಅದನ್ನು ಅಲ್ಲಿಂದ ಹೊರಡಿಸಲು ಯಾರೂ ಸಹಾಯಕರಿಲ್ಲವೇ? ಎಂದೂ, ಕೂಗಿ ದಳು. ಶಾಂತನುವು ಆ ಕೂಗನ್ನು ಕೇಳಿ, ಒಂದೇ ಸವನೆ ನೀರಿನಲ್ಲಿಳಿದು, ಆ ನೌಕೆಯನ್ನು ಬಂಡೆಗಳ ಮಧ್ಯದಿಂದ ಪಾರಾಗಿಸಿ, ದಡಕ್ಕೆ ತಂದು ಮುಟ್ಟಿಸಿದನು. ಆತನ ಭಾವನೆಯಂತೆ ಅವಳು ಯಮುನಾದೇವಿಯೂ ಅಲ್ಲ, ಜಲದೇವತೆಯೂ ಅಲ್ಲ, ಅಥವಾ ಹಿಂದೆ ತನ್ನೊಡನೆ ಸಂಸಾರಮಾಡಿ ಕೊಂಡಿದ್ದ ಗಂಗಾದೇವಿಯೂ ಅಲ್ಲ;—ಸಾಮಾನ್ಯ ಬಾಲಿಕೆಯಾದರೂ ಅಸಾಮಾನ್ಯ ಸುಂದರಿ. ಅವಳು ಯಾರಾಗಿರಬಹುದು? ಅವಳನ್ನು ಹೇಗೆ ಮಾತಾಡಿಸಲಿ? ಎಂದು ಅವನು ಆಲೋಚಿಸುತ್ತ,—'ಸಂಸಾರಸಾಗರದಲ್ಲಿ ಒಂದು ಸ್ಥಿತಿಯಿಂದ ಮತ್ತೊಂದಕ್ಕೆ ಮುಂದರಿಸಬೇಕಾಗುವ ಪ್ರಸಂಗ

ದಲ್ಲಿಯೂ ಪುರುಷರ ಶಕ್ತಿಯ ಆವಶ್ಯಕತೆಯು ಸ್ತ್ರೀಯರಿಗೆ ಇದ್ದೇ ಇರುವುದಲ್ಲವೆ?' ಎಂದು ಅವಳೊಡನೆ ಎಂದನು.

ಅವಳು ಬೇಕೆಂದೇ ಏನೂ ತಿಳಿಯದವಳಂತೆ ಮೌನತಳೆದಳು. ಇದು ಶಾಂತನುವಿನಲ್ಲಿ ಮತ್ತಷ್ಟು ಕುತೂಹಲವನ್ನು ಉಂಟುಮಾಡಿತು. ಅವಳು ಒಂದನ್ನೂ ಆಡದೆ, ತನ್ನ ಮನೆಯ ದಾರಿ ಹಿಡಿದು ಸರಸರನೆ ಸರಿದಳು.

ಅಹ! ಭರತಖಂಡದ ಸಾರ್ವಭೌಮನೆ! ಎಂತಹ ಭ್ರಮೆಗೊಳಗಾದೆ? ದೇವಾಸುರರನ್ನು, ಕರೆದಂತೆ ಊಳಿಗಕ್ಕೆ ಹಚ್ಚುವಂತಹ ನಿನ್ನ ಸಾಮರ್ಥ್ಯವನ್ನು, ಬಾಲಿಕೆಯೊಬ್ಬಳು ಗಣನೆಗೆ ತಾರದೆ ಹೋದಳೇ? ಗಂಗಾದೇವಿಯು ನಿನ್ನನ್ನು ಬಿಟ್ಟು ತೆರಳಿದಂದಿನಿಂದ, ಎಂತೆಂತಹ ಮಹಾರಾಜರುಗಳು ತಮ್ಮ ಪುತ್ರಿಯರನ್ನು ನಿನಗೇ ಒಪ್ಪಿಸುವೆವೆಂದು ಪ್ರಾರ್ಥಿಸಿಕೊಂಡರು, ಅವರನ್ನು ವಿನಯದಿಂದ ತಿರಸ್ಕರಿಸಿದ ನೀನೇಕೆ ಈ ಬಾಲಿಕೆಯ ಮಾಟಕ್ಕೆ ಮರುಳಾದೆ? ಇವಳು ಮನೋಹರೆ, ವಿಚಿತ್ರೆ ಎಂಬುದು ನಿಜ; ಆದರೆ ಸಾಮಾನ್ಯನಾದೊಬ್ಬ ಅಂಬಿಗನ ಮಗಳಲ್ಲವೆ? ಆದರೆ ಇವಳ ಮೈಯಿಂದ ಪದ್ಮಪರಾಗದ ಸುಗಂಧವು ಹೊರಡುತಿರುವುದೆಂದು ನೀನು ಮುಗ್ಧನಾಗಿ ಇವಳಾರೆಂದು ವಿಚಾರಿಸಿದೆಯಲ್ಲವೆ? ಇವಳೂ ದೇವಕನ್ಯೆಯೆಂದು ಭಾವಿಸಿದೆಯಾ? ಇನ್ನು ಇವಳನ್ನೆ ಹಿಂಬಾಲಿಸಿದರೆ ಪ್ರೇಮದ ಕುರುಡುಹಾದಿಯು ಅಪಮಾನದ ಕಡೆಗೆ ಹೇಗೆ ಕೊಂಡೊಯ್ಯುತ್ತಿದೆಯೆಂಬುದನ್ನು ತಿಳಿಯುವೆ. ಬಿಡು,-ಇಲ್ಲಿಗೆ ಸಾಕು—ನಿನ್ನ ಶಿಬಿರವನ್ನು ಸೇರಿ, ನಿನ್ನ ಕಾರ್ಯೋದ್ದೇಶವನ್ನು ನೆನೆ!

ಶಾಂತನುವು ಶಿಬಿರಕ್ಕೆ ಮರಳಿದನು. ಅಂಬಿಗನ ಕನ್ಯೆಯು ಸದುತ್ತರವನ್ನು ಕೊಡದಿದ್ದುದರಿಂದ, ಅವಳು ಅಷ್ಟು ದರ್ಪದಿಂದ ಇರಲು ಕಾರಣವೇನೆಂದು ತಿಳಿದುಕೊಳ್ಳಲು ಕುತೂಹಲಗೊಂಡು, ಕೂಡಲೆ ಶಿಬಿರದಿಂದ ಅವಳು ಹೋದ ದಾರಿಯನ್ನೆ ಹಿಡಿದು ಮುಂದರಿದನು. ಅವಳ ಗುಡಿಸಲಿನಲ್ಲಿ ತನ್ನ ವಿಷಯವಾಗಿಯೆ ತಂದೆಯೊಡನೆ ಅವಳು ಆಡುತಿದ್ದುದನ್ನು ಕೇಳಿದನು. ತಾನೇ ಮುಂದಾಗಿ ಬಂದಾಗ, ಆ ಬಾಲಿಕೆಯು ನಾಚಿಕೊಂಡು ಹಿಂಜರಿದುದನ್ನು ನೋಡಿದನು. ಅವಳ ಕಣ್ನೋಟದಲ್ಲಿ ಪ್ರೇಮಚ್ಛಾಯೆಯು ಕುಣಿಯುತಿದ್ದಿತು. ನಾವಿಕನಂತೆ ತೋರುತಿದ್ದ ರಾಜನು, ಅವಳ ತಂದೆಯೊಡನೆ ಸಂಕ್ಷೇಪವಾಗಿ ತಾನು ಆ ಹೆಣ್ಣನ್ನು ಮದುವೆಯಾಗಲು ಬಂದವನೆಂದನು. 'ಗಂಗಾದೇವಿಯು ಅದೃಶ್ಯಳಾಗಿ

ಬಹು ದಿನಗಳಾದರೂ ಮಹಾರಾಜನಾದ ಶಾಂತನುವೂ ಮರಳಿ ವಿವಾಹ ಮಾಡಿಕೊಂಡಿಲ್ಲವೆಂದ ಬಳಿಕ, ನೀನು ನಾವಿಕನಾದರೂ ಮತ್ತೂ ಮುದುಕನಾಗಿದ್ದುದರಿಂದ ನಿನಗೇಕೆ ಹೆಣ್ಣು? ಸುಮ್ಮನೆ ಅದನ್ನು ನಾನು ಪ್ರೀತಿಸುತ್ತೇನೆ; ಅದನ್ನು ನನಗೆ ಕೊಡಿರಿ! ಎಂದು ಕೇಳುವುದಕ್ಕೆ ಅವಳು ಹಣ್ಣಲ್ಲ, ಹೆಣ್ಣು, ಹೆಣ್ಣು!' ಎಂದು ಆ ವೃದ್ಧನು ಗದರಿಸಿದನು.

ರಾಜನು ಇನ್ನು ವೇಷಪಲ್ಲಟವಿಡಲಾರದಾದನು. ತಾನು ಸಾರ್ವಭೌಮನೆಂದು ತಿಳಿದ ಬಳಿಕ, ಈ ಅಂಬಿಗರ ಅರಸು ತನಗೆ ಯಾವ ಆತಂಕವನ್ನೂ ಮಾಡನೆಂದೂ ತನ್ನ ಇಷ್ಟಾರ್ಥವು ಸುಲಭಸಾಧ್ಯವಾಗುವುದೆಂದೂ ಭಾವಿಸಿ, ಆ ಭಾಗದಲ್ಲಿ ಹಿಂಸೆ ಮಾಡುತ್ತಿದ್ದ ಕಾಡಾಡಿಗಳನ್ನು ಅಣಗಿಸಲು ಸಸೈನ್ಯನಾಗಿ ಬಂದಿದ್ದ ಶಾಂತನುರಾಜನು ತಾನೇ ಎಂದು ಪ್ರಕಟವಾಗಿ ಆ ವೃದ್ಧನಿಗೆ ಅರುಹಿದನು.

ಆ ಕ್ಷಣದಲ್ಲಿಯೆ,—ರಂಗಭೂಮಿಯಲ್ಲಿ ಪಟಪರಿವರ್ತನವಾದಂತೆ,- ವೃದ್ಧನಾದ ದಾಸರಾಜನು ಶಾಂತನುಚಕ್ರವರ್ತಿಯನ್ನು ಯಥೋಚಿತವಾಗಿ ಉಪಚರಿಸಿದನು. ಅವನನ್ನು ರತ್ನಸಿಂಹಾಸನದಲ್ಲಿ ಕುಳ್ಳಿರಿಸಿ ತಾನು ಅವನ ಕಾಲಬಳಿ ನಿಂತುಕೊಂಡನು; ಶಾಂತನುವು ತನ್ನ ಮನಸ್ಸಿನಲ್ಲಿ ಆಗ ತಾನೆ ಹಿಗ್ಗಿಕೊಂಡು, ದಾಸರಾಜನು ಆ ಕನ್ಯೆಯನ್ನು ತನಗೆ ಅರ್ಪಿಸಿದರೆ ಅದೇ ಅವನ ಭಾಗ್ಯವಾಗುವುದೆಂದು ನಂಬಿದನು.

ದಾಸರಾಜನಿಗೆ ಮಾತ್ರ ವಿಸ್ಮಯವಾಯಿತು. ಚಂದ್ರವಂಶದ ಚಕ್ರವರ್ತಿಯು ಮಿಕ್ಕೆಲ್ಲರನ್ನು ಬಿಟ್ಟು ತನ್ನ ಮಗಳನ್ನು ದಾನಪಡೆದವನಂತೆ,— ಇದೇ ದಾಸವಂಶದ ಪರಮ ಸೌಭಾಗ್ಯವು. ಆದರೆ ಅವಳನ್ನು ತನ್ನ ಧರ್ಮಪತ್ನಿಯೆಂದು ರಾಜನು ಸ್ವೀಕರಿಸಲಾರನಾದರೆ? ಅವಳ ಮಕ್ಕಳು ಹಸ್ತಿನಾಪುರದ ಸಿಂಹಾಸನವನ್ನು ಏರಲಾರದೆ ಉಳಿವರಾದರೆ? ವಂಶಗೌರವವೆಲ್ಲ ಮತ್ತೆ ಉಳಿವುದೇ! ಈ ಕನ್ಯಾದಾನದ ಪ್ರಯೋಜನವೇನು? ಎಂದು ಮೊದಲಾಗಿ ಭಾವಿಸಿ,—'ಮಹಾಸ್ವಾಮಿ, ನನ್ನ ಕನ್ಯೆಯ ಹಣೆಯಲ್ಲಿ ಬ್ರಹ್ಮನು ಇಷ್ಟನ್ನೆಲ್ಲ ಬರೆದಿರುವನೋ ಇಲ್ಲವೊ ಯಾರು ಬಲ್ಲರು? ತಾವು ಕುರುವಂಶದಲ್ಲಿ ವಿಖ್ಯಾತರಾದ ಚಕ್ರವರ್ತಿಯರು. ನನ್ನದೊಂದು ಅಲ್ಪ ಬಿನ್ನಪವನ್ನು ಲಾಲಿಸುವವರಾಗಬೇಕು. ಇವಳನ್ನು ಧರ್ಮಪತ್ನಿಯೆಂದು ವರಿಸುವಿರಾದರೆ ಮಾತ್ರ ನಾನು ಅವಳನ್ನು ತಮಗೊಪ್ಪಿಸುವೆನು. ಇವಳಲ್ಲಿ

ಹುಟ್ಟಬಹುದಾದ ಪುತ್ರರಿಗೆ ಸಿಂಹಾಸನಾಧಿಕಾರವು ದೊರೆವಂತಾಗಬೇಕು' ಎಂದು ವಿನಯದಿಂದ ಹೇಳಿಕೊಂಡನು.

ರಾಜನು ಯಾವುದನ್ನು ಅತಿ ಸುಲಭವೆಂದು ಎಣಿಸಿದ್ದನೊ, ಅದೇ ಈಗ ಅತಿ ಕಠಿಣವಾಯಿತೆಂದು ತಿಳಿದನು. ಗಂಗಾದೇವಿಯು ಮಾಯವಾದಂದಿನಿಂದ ಇಂದಿನ ತನಕ ಯಾವಳೊಬ್ಬ ರಾಜಕನ್ಯೆಯು ಸ್ವಯಂವರಕ್ಕಾದರೂ ತೆರಳದೆ, ವಿವಾಹವು ತನಗೆ ಅಪೇಕ್ಷಣೀಯವಲ್ಲವೆಂದು ನಂಬಿಕೊಂಡಿದ್ದ ರಾಜನು, ನೋಡಿದ ಮಾತ್ರದಲ್ಲಿ ಇವಳಲ್ಲಿ ಅನುರಕ್ತನಾದ ಕಾರಣದಿಂದಲೇ ಇವಳೇ ತನಗೆ ಭಗವತ್ಪ್ರೇರಿತಳೆಂಬ ವಿಶ್ವಾಸದಿಂದ ನಂಬಿಕೊಂಡಿದ್ದ ರಾಜನು, ಈಗ ವಿವಾಹ ಭಾವನೆಯಿಂದ ವಿಷಾದ ತಳೆದನು. ದಾಸರಾಜನು ಶಾಂತನುವಿನ ವಂಶಗೌರವ ಸಂಪತ್ತು ಸೌಭಾಗ್ಯಗಳನ್ನು ಮಾತ್ರ ಎಣಿಸಿ, ತನ್ನ ಮಗಳ ಕಡೆಗೆ ತಾನು ವರ್ತಿಸಬೇಕಾದ ರೀತಿಯನ್ನು ಮರೆಯಲಿಲ್ಲ. ಶಾಂತನುರಾಜನೂ ಈ ವಿವಾಹದಲ್ಲಿ ನೆಟ್ಟ ಮನಸ್ಸುಳ್ಳವನಾದರೂ ತನ್ನ ಮಗನ ಕಡೆಗೆ ತಾನು ವರ್ತಿಸಬೇಕಾದ ರೀತಿಯನ್ನು ಮರೆಯಲಿಲ್ಲ. ದೇವವ್ರತನು ತನಗೆ ಪ್ರಿಯತಮೆಯಾದ ಗಂಗಾದೇವಿಯ ಪ್ರಿಯಪುತ್ರನು; ಅವನೇ ತನ್ನ ರಾಜ್ಯಕ್ಕೆ ಮುಂದಣ ಅಧಿಕಾರಿಯು, ಅವನನ್ನು ರಾಜ್ಯಾಧಿಕಾರದಿಂದ ವಂಚಿಸುವಂತಹ ಈ ವಿವಾಹವು ತನಗೇನೂ ಪ್ರಯೋಜನದ್ದಾಗಿಲ್ಲವೆನುತ್ತ, ರಾಜನು ಅಲ್ಲಿಂದೆದ್ದು ವಿಷಾದಭರದಿಂದ ತನ್ನ ಶಿಬಿರಕ್ಕೆ ತೆರಳಿದನು.

ತನ್ನ ಶಿಬಿರಕ್ಕೆ ಮರಳಿದನೆಂಬುದು ನಿಜವೆ; ಅದರಂತೆ ದಾಸರಾಜನ ಕನ್ಯೆಯನ್ನು ಮರೆಯಲಾರದಾದನೆಂಬುದೂ ನಿಜವೆ. ಅವನ ಕಣ್ಣು ತುಂಬ ಅವಳ ಮೂರ್ತಿಯೆ; ಕಿವಿ ತುಂಬ ಅವಳ ಕೋಕಿಲಕಂಠಧ್ವನಿಯೆ. ಅವನ ಮನಸ್ಸಿನ ಸಮಾಧಾನವು ಕೆಟ್ಟಿತು. ಗಂಗಾದೇವಿಯ ವಿಯೋಗದಿಂದ ಉಂಟಾದ ವಿರಹಯಾತನೆಯನ್ನು ಈ ದೇವಿಯ ವಿವಾಹದಿಂದ ತೊರೆವೆನೆಂದು ಭಾವಿಸಿದುದಷ್ಟೆ ಅವನಿಗೆ ಲಾಭವಾಯಿತು. ಸುಲಭವೆಂದು ಆಶಿಸಿದುದು ಅಲಭ್ಯವೆಂದು ನಿರಾಶೆಯಾಯಿತು. ಶಿಬಿರವನ್ನು ಕೀಳಿಸಿ, ರಾಜಧಾನಿಗೆ ಮರಳಿದನು. ಶಾಂತನುವಿನ ಅಂತರಂಗವು ಈ ರೀತಿಯಾಗಿ ಅಶಾಂತಿಯ ಲೀಲಾರಂಗವಾಯಿತು.

## ೫. ದೇವವ್ರತನೇ ಭೀಷ್ಮನು!

**ಶಾ**ಂತನುವಿಗೆ ಮನಶ್ಶಾಂತಿಯಿಲ್ಲ; ಅಶಾಂತಿ. ಯಾಗಯಜ್ಞಾದಿಗಳಲ್ಲಿ ಅವನಿಗೆ ಆಸಕ್ತಿಯಿಲ್ಲ. ದಾನಧ್ಯಾನಾದಿಗಳು ಇನ್ನು ಸಲ್ಲವು. ರಾಜ್ಯ ಕಾರ್ಯದಲ್ಲಿ ಅರುಚಿ. ಅವನು ಚಕ್ರವರ್ತಿಯೆಂಬುದು ನಿಜವಾದರೂ, ಪ್ರೇಮಸಾಮ್ರಾಜ್ಯಾಧಿಕಾರಿಯಾದ ಮನ್ಮಥನ ಸಾರ್ವಭೌಮಾಧಿಕಾರವು ಅವನ ಪದವಿಗೂ ನೂರುಪಾಲಿಗೆ ದೊಡ್ಡದು! ಬಾಗಿಲಲ್ಲೇ ಯುವರಾಜನು ಅವನನ್ನು ಕಾಣಬಂದುದನ್ನು ತಿಳಿದನು. ತಿಳಿದು ನಿಟ್ಟುಸಿರು ಸುಯ್ದನು. ಅಹ! ಇಂತಹ ಸತ್ಪುತ್ರನ ಕೈಗೆ ತನ್ನ ಅಧಿಕಾರವನ್ನೊಪ್ಪಿಸಿ, ಇವನು ವಾನಪ್ರಸ್ಥಕ್ಕೆ ತೆರಳುವ ಬದಲಾಗಿ, ಈ ದ್ವಿತೀಯ ವಿವಾಹವನ್ನು ಕುರಿತು ಇಷ್ಟು ಚಿಂತಾಮಗ್ನನಾಗಿ ಹೇಗೆ ಕಾಣುವನು! ಅಥವಾ ಇನ್ನು ಅವನಿಗೆ ವಾನಪ್ರಸ್ಥವಾದರೂ ಹೇಗೆ ಸಾಧ್ಯವು? ಯಾವಳೊ ಒಬ್ಬ ಬಾಲಿಕೆಯ ಪ್ರೇಮಜಾಲದಲ್ಲಿ ಸಿಲುಕಿಕೊಂಡು ನರಳುವ ಆ ಪ್ರಾಣಿಯು, ಪರಮಾರ್ಥಸಾಧನೆಗಳನ್ನು ಹೇಗೆ ಮಾಡಬಲ್ಲುದು? ಅತ್ತ ಆ ಬಾಲಿಕೆ, ಇತ್ತ ಈ ಪುತ್ರ,—ಇವರಿಬ್ಬರ ಸುಖದುಃಖಗಳೂ ಅವನನ್ನೇ ಅವಲಂಬಿಸಿವೆ. ಪುತ್ರನಿಗೆ ರಾಜ್ಯಾಧಿಕಾರವನ್ನೊಪ್ಪಿಸಿದರೆ, ಬಾಲಕಿಯನ್ನು ವರಿಸಲಾಗುವುದಿಲ್ಲ; ಬಾಲಕಿಯನ್ನು ವರಿಸಿದರೆ ಪುತ್ರನಿಗೆ ರಾಜ್ಯಾಧಿಕಾರವು ತಪ್ಪುವುದು. ಅತ್ತ ಬಾಲಿಕೆಯನ್ನೂ ವರಿಸಿಕೊಂಡು ಇತ್ತ ಪುತ್ರನಿಗೂ ರಾಜ್ಯಾಧಿಕಾರವನ್ನೊಪ್ಪಿಸಲಾಗುವಂತೆ ಹೇಗೆ ಸಾಧಿಸಿ, ಈ ಇಕ್ಕಟ್ಟಿನಿಂದ ಉದ್ಧಾರಹೊಂದಬಹುದು?

ಇದನ್ನೆ ಚಿಂತಿಸಿ, ಅವನು ತಲೆಬಾಗಿ ಮೌನದಿಂದ ಇದ್ದನು. ಆಗ ಯುವರಾಜನು ಮೆಲ್ಲಡೆಯಿಂದ ಅತ್ತ ಬಂದು ಮಹಾರಾಜನಾದ ತಂದೆಗೆ ಸಾಷ್ಟಾಂಗವೆರಗಿದನು.

**ದೇವವ್ರತ**—ನಗರಪ್ರವೇಶವಾಗಿ ಇಂದಿಗೆ ನಾಲ್ಕು ದಿನಗಳಾದರೂ, ಇದುವರೆಗೆ ಆಸ್ಥಾನಕ್ಕೆ ಬಂದು ಪ್ರಜೆಗಳನ್ನು ಕಂಡುದಿಲ್ಲ. ನನ್ನ ಲೋಪದೋಷಗಳ ದೆಸೆಯಿಂದ ರಾಜ್ಯದಲ್ಲಿ ಗೊಂದಲಗಳೇನೂ ಉಂಟಾಗಿಲ್ಲವಷ್ಟೆ. ತಪ್ಪಿತಗಳೇನೂ ನನ್ನಿಂದ ನಡೆದಿರುವಲ್ಲಿ, ನನ್ನನ್ನು ಸಾಮಾನ್ಯ ಪ್ರಜೆಯಂತೆಯೆ ದಂಡಿಸುವಷ್ಟು ಅನುಗ್ರಹಿಸಬೇಕು. ಆದರೆ, ಈ ರೀತಿಯಾಗಿ ಕ್ಲೇಶಗೊಂಡಿರುವುದು ಉತ್ತಮವಲ್ಲ.

**ಶಾಂತನು**--ಪುತ್ರಾ, ನೀನು ರಾಜ್ಯಭಾರವನ್ನು ಬಲು ಚೆನ್ನಾಗಿ ನಡೆಸಿರುವೆ. ನಿನ್ನನ್ನು ಯೋಗ್ಯರೀತಿಯಲ್ಲಿ ನಾನು ಸಂಭಾವಿಸಿಲ್ಲವೆಂದು ಕುಂದೆಣಿಸದಿರು.

**ದೇವವ್ರತ**—ಕುಂದುಗಳ ಮಾತಂತಿರಲಿ. ಮಹಾರಾಜನು ಎಂದಿನಂತೆ ಏತಕ್ಕೆ ಪ್ರಫುಲ್ಲಚಿತ್ತನಾಗಿಲ್ಲ? ಆಗಾಗ ಶೂನ್ಯದೃಷ್ಟಿಯಿಂದ ಮಹಾರಾಜನು ಆಕಾಶದ ಕಡೆಗೆ ನೋಡುತ್ತ ಬಿಸುಸುಯ್ವನೇಕೆ? ಚಿತ್ತವೃತ್ತಿಯು ಹೀಗೆ ಪಲ್ಲಟಗೊಂಡಿರುವುದೇಕೆ? ತಂದೆಯು ಸುಖದುಃಖಗಳಲ್ಲಿ ಸೇರಿಕೊಂಡಿದ್ದು, ದುಃಖಸಂಕಟಗಳನ್ನು ದೂರೀಕರಿಸಲಾರದೆ ಉಳಿದರೆ, ಮಗನಾಗಿ ಹುಟ್ಟಿದವನ ಜೀವನದ ಪ್ರಯೋಜನವೇನಾಯಿತು? ಯಾವನಾದರೂ ಈ ಸಾಮ್ರಾಜ್ಯದ ಮೇಲೆ ದಂಡೆತ್ತಿ ಬರಲು ದುಡುಕಿರುವನೆ? ಯಾವನೊಬ್ಬ ಅತಿರಥನು ನಿಮ್ಮನ್ನು ಅವಮಾನಿಸಿದನೆ? ಅಂತಹನನ್ನು, ಅವನ ನಾಲಗೆ ಹಿಡಿದೆಳೆದು ಇತ್ತ ತಂದು, ಈ ಸಿಂಹಾಸನದ ಪಾದಪೀಠದ ದೂಳನ್ನುಣ್ಣಿಸಿ ಮರಳಿಸಬೇಕೆ? ಪ್ರತ್ಯಕ್ಷನಾದ ಯಮಧರ್ಮನೆ ಇಲ್ಲಿಗೆ ಯಮದಂಡವನ್ನು ಹಿಡಿದು ಬರುವನೆಂತಾದರೆ, ಈ ಭುಜದಂಡಗಳಿಂದ ಅವನನ್ನು ದಂಡಿಸಬೇಕೆ?

**ಶಾಂತನು**—ನಿನ್ನಂತಹ ಪರಾಕ್ರಮಶಾಲಿಯಾದ ಮಹಾವೀರ ಪುತ್ರನಿಗೆ ತಂದೆಯಾಗಲು ಭಾಗ್ಯವುಳ್ಳ ನನ್ನನ್ನು ಕೆಣಕಬಲ್ಲ ವೀರನಾವನು? ನನ್ನ ಖಿನ್ನತೆಗೆ ಕಾರಣವೆ ಬೇರೆಯಾಗಿದೆ; ಅದನ್ನು ಹೇಳುತಿದ್ದೆನು; ಆದರೆ,-

**ದೇವವ್ರತ**—ಚಂದ್ರವಂಶದ ಅರಸುಗಳು ಸತ್ಯವ್ರತಿಗಳು. ಹೇಳಬೇಕಾಗಿದ್ದ ಸತ್ಯವನ್ನು ಮರೆಯಿಡುವುದೂ ಒಂದು ಬಗೆಯ ಅಧರ್ಮವಲ್ಲವೆ?

**ಶಾಂತನು**—ಸತ್ಯಪಾಲಕನೆಂದು ತೋರಿಸುವುದಕ್ಕಾಗಿ ಮಾತ್ರ ನಿರುಪಾಯನಾಗಿ ನಿನಗೆ ನನ್ನ ಮನೋಭಾವನೆಯನ್ನು ತಿಳುಹಬೇಕಾಯಿತು. ಪುತ್ರಾ, ದೇವವ್ರತಾ, ನನ್ನ ಖಿನ್ನತೆಗೆ ಕಾರಣನು—ನೀನೇ.

ದೇವವ್ರತನ ಎದೆ ಹಾರಿತು! ಮೊಗವನ್ನು ಉಜ್ಜ್ವಲವಾಗಿ ಎತ್ತಿ,—'ತಂದೆಯ ಮನೋವ್ಯಥೆಗೆ ಕಾರಣನಾದ ನನ್ನೀ ದೇಹವು ನಿಂತಲ್ಲೆ ಉರಿದು ಭಸ್ಮವಾಗಲೊಲ್ಲದೇಕೆ? ಮಹಾರಾಜ! ಈ ಖಡ್ಗವನ್ನು ಧರಿಸಿಕೊಂಡು ಈಗಲೆ ನನ್ನ ಶಿರವನ್ನು ಹಾರಿಸಿರಿ!' ಎಂದು ಚೀರಿದನು.

**ಶಾಂತನು**—ನನ್ನ ಮಾತುಗಳು ಮುಗಿವ ಪರ್ಯಂತವೂ ತಡೆ.

ವಿನಾಕಾರಣವಾಗಿ ಸಂತಾಪಗೊಳಬೇಡ, ತಂದೆಯಾದವನು ಮಗನ ಕೂಡೆ ಹೇಳಬಾರದಂತಹ ಕೆಲ ಮಾತುಗಳಿವೆ. ಆದರೆ, ನಿನ್ನಂತಹ ಸುಜ್ಞನೂ ವಿವೇಕಿಯೂ ಆದ ಪುತ್ರನೆ ಮಿತ್ರನೆಂದು ಭಾವಿಸಬೇಕಾಗಿದೆಯಲ್ಲವೇ? ಅದುಕಾರಣವೆ, ನನ್ನ ಅಂತರಂಗದ ಪೀಡೆಯ ಕಾರಣವನ್ನು ಹೇಳುವೆನು. ನಿನಗೆ ಮಾತೆಯಾದ ಗಂಗಾದೇವಿಯು ನನ್ನನ್ನು ಬಿಟ್ಟು ತೆರಳಿ ಅರ್ಧ ಶತಮಾನವು ಕಳೆದಿದೆಯಲ್ಲವೆ? ಇದುವರೆಗೆ ನಾನು ಅಖಂಡವಾದ ಬ್ರಹ್ಮ ಚರ್ಯವನ್ನು ಆಚರಿಸಿರುವೆನು. ಆದರೆ ಶಾಸ್ತ್ರಕಾರರು 'ಯಾವನಿಗೆ ಒಬ್ಬನೆ ಪುತ್ರನಿರುವನೊ ಅವನು ಅಪುತ್ರಕನೆಂದೇ ಭಾವಿಸತಕ್ಕದು' ಎನ್ನುವರು. ಜೀವನವು ಕ್ಷಣಸ್ಥಾಯಿಯಾಗಿದೆಯಲ್ಲವೆ? ಎಂದಿಗೆ ದೇಹ ವನ್ನು ತ್ಯಜಿಸಿ ಆತ್ಮವು ಹೊರಡುವುದೊ, ಅದನ್ನು ಯಾರು ತಾನೆ ಮೊದಲೇ ಅರಿತುಕೊಳ್ಳಲಾಪರು? ಭಗವಂತನ ದಯೆಯು ಈ ವಂಶದ ಮೇಲೆ ಇದ್ದೇ ಇದೆ; ಆದರೂ ನಿನಗೆ ಏನಾದರೊಂದು ಅಮಂಗಲವು ಉಂಟಾದಲ್ಲಿ, ಈ ವಂಶವೆ ಲೋಪಗೊಳುವುದಲ್ಲವೆ? ಅದಕ್ಕಾಗಿಯೆ ನಾನು ದುಃಖಿತನು. ವಂಶರಕ್ಷಣೆಯೇ ಧರ್ಮದ ಮೂಲವು; ವಂಶಹೀನರಿಗೆ ಧರ್ಮವು ಫಲಿಸದು.

**ದೇವವ್ರತ:**—ಅರಸುಗಳು ಒಬ್ಬಳೆ ಪತ್ನಿಯನ್ನು ವರಿಸಿಕೊಂಡಿರ ಬೇಕಾಗಿಯೂ ಇಲ್ಲ, ಒಬ್ಬಳ ವಿಯೋಗದ ಬಳಿಕ, ಬ್ರಹ್ಮಚಾರಿ ಗಳಾಗಿ ಇರಬೇಕಾಗಿಯೂ ಇಲ್ಲ. 'ರಾಜಾನೋ ಬಹುವಲ್ಲಭಾ' ಎಂಬುದು ಸ್ಮೃತಿವಾಕ್ಯವು.

**ಶಾಂತನು:**—ಪುತ್ರಾ, ಈ ಚಿಂತೆಯೆ ಕವಿದಿರುವ ನನ್ನ ಹೃದಯಾ ಕಾಶದಲ್ಲಿ ಯಾವ ತಾರೆಯು ಬೆಳಗುತಿದೆಯೋ, ಅದು ಚಿರಕಾಲಕ್ಕೂ ನನ್ನದಾಗಿಯೇ ಬೆಳಗುತಿರಬೇಕೆಂಬ ಲವಲವಿಕೆಯಿಂದ ತಾನೆ ಮತ್ತಷ್ಟು ಚಿಂತೆ ಹಿಡಿದಿರಬೇಕಾಗಿದೆ. ಆದರೆ, ಆ ತಾರೆಯ ಉದಯದಿಂದ ಅನಿಷ್ಟ ಫಲವು ನಿನಗುಂಟಾಗುವುದೆಂದು ತುಂಬ ಅಂಜಿಕೊಂಡಿರುವೆನಾದ ಕಾರಣ, ಬೆಳಕು ಹೊತ್ತಿಸಲೆತ್ನಿಸಿ ಮನೆಸುಡುವುದಕ್ಕಿಂತ ಕತ್ತಲೆಯಲ್ಲಿರುವುದೇ ವಾಸಿಯೆಂದು ತಿಳಿದು, ಇದ್ದ ಚಿಂತೆಯನ್ನೆ ಹೊದ್ದುಕೊಂಡಿರುವೆನು.

ಶಾಂತನುವು ಅಲ್ಲಿಗೆ ತನ್ನ ಮಾತು ಮುಗಿಸಿ ಸುಮ್ಮನಾದನು. ಮಗನ ಮೊಗವನ್ನೆ ನೋಡಿದನು. ಅವನ ಕಣ್ಣುಗಳಲ್ಲಿ ನೀರು ಒಸರಿತು.

ದೇವವ್ರತನು ಆಗಲಿ,—'ನನ್ನ ಭವಿಷ್ಯತ್‌ದುಃಖನಿವಾರಣೆಗಾಗಿ ತಾವೀಗ ದುಃಖವನ್ನು ಅನುಭವಿಸುವುದನ್ನು ನೋಡಿದ ಬಳಿಕ, ಇನ್ನು ಆ ದುಃಖ ಕಾರಣವನ್ನು ವಿಚಾರಿಸಿಕೊಂಡು, ಅದನ್ನು ನಿರ್ಮೂಲಿಸದೆ ಅನ್ನವನ್ನುಣ್ಣು ವುದಿಲ್ಲ ಎನ್ನುತ್ತ, ಅವನನ್ನು ಮಹಾರಾಜನು ತಡೆಯುವ ಮೊದಲೆ ಅಲ್ಲಿಂದೆದ್ದು ಹೊರಕ್ಕೆ ನಡೆದನು. ಮಹಾರಾಜನು, ಅವನೇನು ಮಾಡು ವನೋ, ಎಂದು ಬೆದರಿ ಕುಳಿತನು.

---

## ೬. ಭೀಷ್ಮನ ಪ್ರತಿಜ್ಞೆ.

ಮಹಾರಾಜನ ಮನಃಕ್ಲೇಶದ ಕಾರಣವನ್ನು ದೇವವ್ರತನು ಮಂತ್ರಿ ಮಂಡಲಕ್ಕೆ ತಿಳುಹಿದನು. ಸೈನ್ಯದೊಡನೆ ಯಮುನಾತೀರದ ಪ್ರದೇಶಕ್ಕೆ ಮಹಾರಾಜನು ತೆರಳಿದಾಗ ಅವನೊಡನೆ ತೆರಳಿದ ಸೇನಾಧ್ಯಕ್ಷನೊಬ್ಬನು, ದಾಸರಾಜನ ಕನ್ನೆಯನ್ನು ರಾಜನು ನೋಡಿದುದನ್ನೂ ದಾಸರಾಜನು ಕನ್ಯಾದಾನಮಾಡಲು ಅಸಮ್ಮತನಾದುದನ್ನೂ ಕುರಿತು ಯುವರಾಜನಿಗೆ ತಿಳುಹಿದನು.

ಯುವರಾಜನು ಕೂಡಲೆ ರಥವನ್ನೇರಿ ದಾಸರಾಜನಿರುವಲ್ಲಿಗೆ ತೆರಳಿ, ಅವನಿಂದ ಯಥಾಯೋಗ್ಯವಾದ ಸತ್ಕಾರಗಳನ್ನು ಪಡೆದನು. ದೇವವ್ರತನು ತನ್ನ ಆಗಮನದ ವೃತ್ತಾಂತವನ್ನು ಹೇಳತೊಡಗಿದನು.

**ದೇವವ್ರತ**—ರಾಜನೆ! ನಮ್ಮ ತಂದೆಗೆ,—ಭಾರತಚಕ್ರವರ್ತಿಗೆ— ಕನ್ಯಾದಾನವನ್ನು ಮಾಡಲು ಶಕ್ತಿಯುಳ್ಳ ನೀವೇ ಧನ್ಯರು, ಭಾಗ್ಯವಂತರು!

**ದಾಸರಾಜ**—ಯುವರಾಜನೇ! ರೂಪವಂತನಾದ ಪತಿಯನ್ನು ಕನ್ನೆಯು ಇಚ್ಛಿಸುವಳೆಂದು ಶಾಸ್ತ್ರವು; ನಿಮ್ಮ ತಂದೆಯು ರೂಪದಲ್ಲಿ ಅಸಮಾನನಾಗಿರುವುದರಿಂದ ಕನ್ನೆಯು ಈ ವಿವಾಹವನ್ನು ಸಮ್ಮತಿಸು ವವಳೇ ಸರಿ. ತನ್ನ ಮಗಳನ್ನು ಧನವಂತನಿಗೆ ಕೊಡಬೇಕೆಂದು ಕನ್ನೆಯ ತಾಯಿಯು ಬಯಸುವಳೆಂದು ಶಾಸ್ತ್ರವು ನಿಮ್ಮ ತಂದೆಯು ಕುಬೇರನಿಗೂ ಒಡೆಯನಾದುದರಿಂದ ಕನ್ನೆಯ ಮಾತೆಯು ಈ ವಿವಾಹಕ್ಕೆ ಇದಿರಾಡು

ವನೆಲ್ಲ. ತನ್ನ ಅಳಿಯನು ಲೋಕವಿಶ್ರುತನಾಗಿರಬೇಕೆಂದು ಕನ್ಯಾಪಿತ ನಲ್ಲಿ ಆಸೆ; ನಿಮ್ಮ ತಂದೆಯ ಹೆಸರು ಹದಿನಾಲ್ಕು ಲೋಕಗಳಲ್ಲೂ ವ್ಯಾಪ್ತಿ ಯುಳ್ಳದಾಗಿರುವುದರಿಂದ ಆ ಭಾಗದಲ್ಲಿಯೂ ವಿವಾಹಕ್ಕೆ ಆಕ್ಷೇಪವಿಲ್ಲ. ಕನ್ಯೆಯ ಆತ್ಮೀಯ ಪರಿಜನರು ಕನ್ಯೆಯನ್ನು ಉತ್ತಮವಂಶಕ್ಕೇ ಕೊಟ್ಟು ತನ್ಮೂಲಕವಾಗಿ ತಮ್ಮ ವಂಶವನ್ನೂ ಉಜ್ಜ್ವಲಗೊಳಿಸಬೇಕೆಂದು ಅಪೇಕ್ಷಿ ಸುವರು; ಈ ವಿಚಾರದಲ್ಲಿಯೂ ಆಕ್ಷೇಪಕ್ಕೆ ಎಡೆಯಿಲ್ಲ. ಹೀಗೆ ಕನ್ಯಾ ದಾನಕ್ಕೆ ಸರ್ವವಿಧದಲ್ಲಿಯೂ ಸಮ್ಮತಿಯೆ ಅಲ್ಲದೆ ತಡೆಯೊಂದೂ ಇಲ್ಲ. ಹೀಗಾದ ಬಳಿಕ.......

**ದೇವವ್ರತ**—ಆ ಶುಭವಿವಾಹವು ಆದಷ್ಟು ಬೇಗನೆ ಸಾಗಲೆಂದು ನನ್ನ ಮನಸ್ಸು ಉತ್ಸಾಹಗೊಂಡಿರುವುದು.

**ದಾಸರಾಜ**—ಆದರೆ ನನ್ನ ಕನ್ಯೆಯನ್ನು ನಿಮ್ಮ ತಂದೆಗೆ ಒಪ್ಪಿಸಿ ಕೊಡುವುದರಿಂದ, ಹೆಚ್ಚಿನ ಪ್ರಯೋಜನವೇನು? ನಮ್ಮ ಜಾತಿಯ ಜನಗಳಲ್ಲಿ ಯೋಗ್ಯ ತರುಣನೊಬ್ಬನಿಗೆ ಮದುವೆಮಾಡಿಕೊಟ್ಟರಾಗದೆ?

**ದೇವವ್ರತ**—ಚಕ್ರವರ್ತಿಯು ಅಳಿಯನೆಂದರೆ ಸಾಮಾನ್ಯವಾಯಿತೆ? ನಿಮ್ಮ ಮಗಳು ಸಾಮ್ರಾಜ್ಞಿಯಾಗುವಳು!

**ದಾಸರಾಜ**—ಇಂತಹ ಸುಸಂಧಿಯನ್ನು ಕಳೆದುಕೊಂಡರೆ ಮುಂದೆ ಪಶ್ಚಾತ್ತಾಪಕ್ಕೆ ಕಾರಣವಾಗುವುದೆಂದು ಬಲ್ಲೆನು; ಶಾಂತನುಮಹಾರಾಜ ರಂತಹ ಪತಿಯು ನನ್ನ ಕನ್ಯೆಗೆ ಒಪ್ಪತಕ್ಕವನೆ ಸರಿ; ಆದರೆ—

**ದೇವವ್ರತ**—ಆದರೆ ಏನು? ಆಕ್ಷೇಪವೇನೂ ಇಲ್ಲವೆಂದು ಈಗಲೆ ಹೇಳಿದ ಈ ಕನ್ಯಾದಾನಕ್ಕೆ 'ಆದರೆ'ಯ ಬಾಧೆಯೇನಿದೆ? ಆ ಬಾಧೆಯನ್ನು ನಿವಾರಿಸುವ ಭಾರವನ್ನು ನಾನೆ ವಹಿಸಿಕೊಳ್ಳುವೆನು.

**ದಾಸರಾಜ**—ಅದೊಂದು ದೊಡ್ಡ ಪ್ರತಿಬಂಧಕವು! ಸಪತ್ನಭಾವಕ್ಕೆ ತಡೆಯೇನಿದೆ?

**ದೇವವ್ರತ**—ಆ ಭಾವಕ್ಕೆ ಎಂದೂ ಎಡೆಯಿಲ್ಲ. ನಾನೇ ಬಂದು ಈ ವಿವಾಹವನ್ನು ವ್ಯವಸ್ಥೆಮಾಡುತಿರುವೆನಲ್ಲವೆ?

**ದಾಸರಾಜ**—ದೇವದಾನವಾದಿಗಳೂ ಬೆದರತಕ್ಕಂತಹ ಯುವರಾಜ ನೊಬ್ಬ ಪುತ್ರನಿರುವಾಗ, ನನ್ನ ಕನ್ಯೆಯಲ್ಲಿ ಹುಟ್ಟಬಹುದಾದ ಪುತ್ರರ ಪಾಡೇನಾಗುವುದು? ಸಾಮ್ರಾಜ್ಯದಲ್ಲಿ ಒಬ್ಬನೆ ಯುವರಾಜನು ಇದ್ದರೆ

ಸಾಕಾಗುವುದಿಲ್ಲವೆ? ಹಾಗಾದ ಬಳಿಕ ಇನ್ನಾವ ರಾಜ್ಯದ ಮೇಲೆ ಅವರಿಗೆ ಅಧಿಕಾರ ಕೊಡಬಹುದು?

**ದೇವವ್ರತ**—ರಾಜಾ! ನಿನ್ನ ಆಶಯವನ್ನು ತಿಳಿದೆನು. ಅದು ವಾಸ್ತವವಾಗಿರುವ ಆಕ್ಷೇಪವು. ಚಂದ್ರಸೂರ್ಯರನ್ನು ಸಾಕ್ಷಿಯಾಗಿರಿಸಿ ಕೊಂಡು, ನಾನೆಂದಿಗೂ ಈ ಸಾಮ್ರಾಜ್ಯಾಧಿಕಾರವನ್ನು ಬಯಸದೆ, ನಿನ್ನ ಕನ್ಯೆಯಲ್ಲಿ ಜನಿಸುವ ಪುತ್ರರಿಗೆಂದೂ ಇದಿರಾಡದೆ, ಸಾಮಾನ್ಯನಾದೊಬ್ಬ ಸೈನಿಕನಂತೆ ಅವರ ಆಜ್ಞೆಗಳನ್ನು ಶಿರಸಾವಹಿಸಿ ಬಾಳುವೆನು—ಎಂದೆನ್ನುವ ಈ ಪ್ರತಿಜ್ಞೆಗೆ ನಮ್ಮ ವಂಶದ ಪಿತೃಗಳೇ ಸಾಕ್ಷಿಯಾಗಿರಲಿ! ಹೇಗೆ? ಆಕ್ಷೇಪವು ನಿವಾರಣೆಹೊಂದಿತಲ್ಲವೆ?

**ದಾಸರಾಜ**—'ನ ಭೂತೋ ನ ಭವಿಷ್ಯತಿ' ಎಂಬಂತಹ ಈ ಪ್ರತಿಜ್ಞೆ ಯಿಂದ ನಿಮ್ಮ ತೀರ್ಥರೂಪರ ಸುಖದ ದಾರಿಯಲ್ಲಿದ್ದ ದೊಡ್ಡದೊಂದು ಕಂಟಕವನ್ನು ಕಿತ್ತುಹಾಕಿದಂತಾಯಿತು. ಸತ್ಯಪ್ರತಿಜ್ಞನಾದ ನಿಮ್ಮಿಂದ ಈ ಪ್ರತಿಜ್ಞೆಯು ಪಾಲಿಸಲ್ಪಡುವುದೆಂದೂ ಬಲ್ಲೆನು,—

**ದೇವವ್ರತ**—ಆದರೆ,—ಇನ್ನೂ 'ಆದರೆ' ಯಾವುದಿದೆ?

**ದಾಸರಾಜ**—ಆದರೆ, ಕನ್ಯಾಪಿತರ ಮನಸ್ಸು ಮರುಳು ಮನಸ್ಸು. ಮುಂದೆ ಇಂತಿಂತಹ ಅಡಚಣಿಗಳು ಬರಬಹುದೆಂದು ಭಾವಿಸಿ, ಅವನ್ನು ಮೂರ್ತಿಮತ್ತಾಗಿ ಕಂಡು ಅವರು ಕಂಗೆಡುವರು. ನಿಮ್ಮ ಸತ್ಯಪ್ರತಿಜ್ಞೆ ಯಿಂದ ನನ್ನ ಮಗಳ ಸಂತತಿಯು ಸುಖವಾಗಿ ರಾಜ್ಯವನ್ನಾಳುವುದು. ಆದರೆ, ನಿಮ್ಮ ಪುತ್ರಪೌತ್ರರೂ ಈ ಪ್ರತಿಜ್ಞೆಯನ್ನು ಪಾಲಿಸುವರೆಂದು ಭರವಸೆ ಯಾವುದಿದೆ?

**ದೇವವ್ರತ**—ಇಷ್ಟೆಯೆ ನಿಮ್ಮ ಬೆದರಿಕೆ? ಜನಕನೆ ದೇಹದಾತನು, ಆತನ ಕಲ್ಯಾಣಕ್ಕಾಗಿ ದೇಹವನ್ನಾದರೂ ಅರ್ಪಿಸುವುದು ಪುತ್ರನ ಕರ್ತವ್ಯವು! ದೇವತೆಗಳೆ! ಋಷಿಗಳೆ! ದಾನವಗಂಧರ್ವಯಕ್ಷಕಿನ್ನರರೆ! ರಾಜಗುರು ಅಮಾತ್ಯ ರಥಿ ಮಹಾರಥಿಗಳೇ! ವೀರಸ್ವರ್ಗದಲ್ಲಿ ನೆಲಸಿರುವ ಪಿತೃಗಳೆ! ಮುಂದೆ ಭರತಭೂಮಿಯಲ್ಲಿ ಜನ್ಮವೆತ್ತುವ ವೀರರೆ! ಮಧ್ಯಾಹ್ನ ದಲ್ಲಿ ನಡುನೆತ್ತಿಯ ಮೇಲೆ ಹಿರಣ್ಮರಥಾರೂಢನಾಗಿ ಸರ್ವಪ್ರಪಂಚವನ್ನೂ ಕಣ್ಣುತುಂಬ ನೋಡುವ ದಿವ್ಯಸಾಕ್ಷಿಯಾದ ಸೂರ್ಯನಾರಾಯಣನೆ! ನನ್ನ ಪ್ರತಿಜ್ಞೆಯನ್ನು ಕೇಳಬೇಕು!

ಆದರಿಲ್ಲಿಂ ಮೇಲೆ, ನಾರಿಯು
ರಾದವರು ಭಾಗೀರಥಿಗೆ ಸರಿ;
ಮೇದಿನಿಯು ಸಲಿಸುವೆನು ನಿನ್ನಯ ಮಗಳ ಮಕ್ಕಳಿಗೇ।
ಈ ದಿವಿಜ ಈ ಹರಿಹರ ಬ್ರ-
ಹ್ಮಾದಿದೇವರು ಸಾಕ್ಷಿ ಹೋಗೆಂ-
ದಾ ದಯಾಂಬುಧಿ ನಗುತ ನಿನ್ನಯ ಮಗಳ ಕರೆಸೆಂದ.

ಯಾವಜ್ಜೀವವೂ ಅವಿವಾಹಿತನಾಗಿ ನಾನು ಅಖಂಡ ಬ್ರಹ್ಮಚರ್ಯವನ್ನ ಪರಿಗ್ರಹಿಸುವೆನು!—ಇನ್ನಾದರೂ ನಿರಾತಂಕವಾಗಿ ಈ ಕನ್ಯಾದಾನ ಮಾಡಬಹುದಲ್ಲವೆ?

ಆದಾಗಲೆ, ಅಂತಹ ಅಸಾಧಾರಣವೂ ಅತೀ ಕಠಿನವೂ ಆದ ಘೋರ ಪ್ರತಿಜ್ಞೆಯನ್ನು ಕೇಳಿ ದಾಸರಾಜನು ಬೆಚ್ಚಿದನು. ದೇವಲೋಕಕ್ಕೂ ಗಂಧರ್ವಲೋಕಕ್ಕೂ ಈ ವಿಸ್ಮಯವು ಹರಡಿತು. ಅಪ್ಸರೆಯರೂ ಕಿನ್ನರೆಯರೂ ಹೂಮಳೆಗರೆದು, ದೇವತೆಗಳು ವಿಮಾನವನ್ನೇರಿ ದಾಸ ರಾಜನ ಸಭಾಗೃಹದ ಮೇಲಕ್ಕೆ ಕಾಣಿಸಿಕೊಂಡರು.

'ಶಾಂತನುನಂದನನ ಈ ಭಯಂಕರ ಪ್ರತಿಜ್ಞೆಯು ಎಣೆಯಿಲ್ಲದ್ದಾಗಿದೆ; ಇಂತಹ ಭೀಷ್ಮಪ್ರತಿಜ್ಞೆಯನ್ನು ಮಾಡಿದ ಅವನು ಇಂದಿನಿಂದ **ಭೀಷ್ಮ** ನೆಂಬ ನಾಮಧೇಯದಿಂದ ಮೆರೆಯಲಿ!' ಎಂದು ಅಶರೀರವಾಣಿಯಾಯಿತು.

ಆಕಾಶವಾಣಿಯ ಶಬ್ದೋಚ್ಚಾರಗಳನ್ನು ಸ್ವರ್ಗಮರ್ತ್ಯಪಾತಾಳ ಲೋಕಗಳಲ್ಲಿಯೂ ವಾಯುವು ಪಸರಿಸಿದನು. 'ಭೀಷ್ಮಾ! ಭೀಷ್ಮಾ!' ಎಂದು ಎಲ್ಲೆಲ್ಲಿಂದಲೂ ಪ್ರತಿಧ್ವನಿಯೆದ್ದಿತು. ದೇವವ್ರತನು ಭೀಷ್ಮನೆನಿಸಿ ಕೊಂಡನು.

ಇಂತಹ ಸತ್ಯಪ್ರತಿಜ್ಞೆಯ ದೆಸೆಯಿಂದ ಯಾವ ಕನ್ಯೆಯೊಡನೆ ತನ್ನ ತಂದೆಯು ವಿವಾಹವಾಗುವಂತೆ ಭೀಷ್ಮನು ಅನುಕೂಲತೆಯನ್ನು ಕಲ್ಪಿಸಿ ಕೊಟ್ಟನೊ, ಅವಳು ಅಂದಿನಿಂದ **'ಸತ್ಯವತಿ'** ಎಂದು ಪ್ರಖ್ಯಾತಳಾದಳು.

ಬಳಿಕ ಸತ್ಯವತಿಯನ್ನು ದಾಸರಾಜನು ಭೀಷ್ಮನಿರುವಲ್ಲಿಗೆ ತಂದು, ಶಾಂತನುಚಕ್ರವರ್ತಿಗಾಗಿ ಒಪ್ಪಿಸಿಕೊಟ್ಟನು. ಭೀಷ್ಮನು 'ಮಾತೆಯೆ! ಇನ್ನು ರಾಜಧಾನಿಗೆ ತೆರಳೋಣ' ಎಂದು ಅವಳನ್ನು ಮಹಾಸಮಾರೋಹ ದಿಂದ ಹಸ್ತಿನಾಪುರಕ್ಕೆ ರಥವನ್ನೇರಿಸಿ ತಂದನು. ಆವನು ಪುರಪ್ರವೇಶವನ್ನು

ಮಾಡುವ ಮೊದಲೆ, ಅವನ ಭೀಷಣಪ್ರತಿಜ್ಞೆಯು ಪ್ರಸ್ತಾಪವು ಎಲ್ಲೆಲ್ಲಿಯೂ ಹರಡಿದ್ದಿತು. ಪ್ರಜೆಗಳು ಗುಂಪುಗುಂಪಾಗಿ ಬಂದು ಅವನನ್ನು ಇದಿರ್ಗೊಂಡರು. ಯುವರಾಜನು ರಾಜ್ಯಭಾರದಿಂದ ವಂಚಿತನಾದನೆಂದು ಅವರಿಗೆ ಸಂತಾಪವು; ಸಂತಾಪದ ದೆಸೆಯಿಂದ ಅವರು ಕೆರಳಿದರು. ಭೀಷ್ಮನ ರಥವನ್ನು ಅವರು ಸುತ್ತುತ್ತ ಚಡಪಡಿಸುತ್ತ ರಾಜಬೀದಿಯಲ್ಲಿ ಬರುತ್ತಿರಲು, ಆ ದೃಶ್ಯವು ಚಮತ್ಕಾರವಾಗಿದ್ದಿತು.

---

## ೭. ಭೀಷ್ಮನೇ ಇಚ್ಛಾಮರಣಿ!

"ಪ್ರಜೆಗಳಿರಾ! ತಂದೆಯಾದವನನ್ನು ಪ್ರತಿಯೊಂದೂ ವಿಧದಲ್ಲಿ ತುಷ್ಟಿಗೊಳಿಸುವುದು ಪುತ್ರನ ಕರ್ತವ್ಯವಲ್ಲವೆ? ಹಾಗೆ ಸಾಧಿಸುವುದರಲ್ಲಿ ರಾಜ್ಯಾಧಿಕಾರವನ್ನು ತ್ಯಜಿಸುವಂತಹ ಪ್ರಸಂಗವು ತೀರ ಸಾಮಾನ್ಯವಾದ ಮಾತೇ ಸರಿ. ಜೀವವನ್ನಾದರೂ ತ್ಯಜಿಸಿ, ಪಿತನ ಮನೋವಾಂಛೆಗಳನ್ನು ಪೂರಯಿಸಬೇಕಾಗಿದ್ದರೆ, ಅದನ್ನೂ ಮಾಡುವುದಕ್ಕೆ ನಾನು ಪ್ರಸ್ತುತನೇ ಆಗಿದ್ದೆನು. ಬಂಧುಗಳೆ! ಈಗ ನಿಮ್ಮನ್ನು ನಾನು ರಾಜನಂತೆ ಆಳುವ ಅಧಿಕಾರದಿಂದ ಸ್ವೇಚ್ಛೆಯಾಗಿ ದೂರವಿರುವೆನು; ಆದರೆ ನನ್ನಿಂದ ಸಾಧ್ಯವಾಗುವಷ್ಟು ಚೆನ್ನಾಗಿ ನಿಮಗೆ ಮಂಗಲವನ್ನು ಉಂಟುಮಾಡುವುದೆ ನನ್ನ ಪ್ರಾಣದ ಯತ್ನವಾಗಿರುವುದೆಂದು ನಂಬಿರಿ!' ಎಂದು ಭೀಷ್ಮನು ಪ್ರಜೆಗಳಿಗೆ ಸಮಾಧಾನವನ್ನು ಹೇಳಲು, ಆತ್ಯಾನಂದವನ್ನು ಹೊಂದಿದ ಅವರು, ಅವನ ಹೆಸರಿನಲ್ಲಿ ಬಾರಿಬಾರಿಗೂ ಜಯಧ್ವನಿ ಮಾಡಿದರು; ಹಸ್ತಿನಾಪುರದಲ್ಲಿನ ಪ್ರಜೆಗಳೆಲ್ಲರೂ ಅವನ ಜತೆಯಲ್ಲಿಯೆ ರಾಜಬೀದಿಯಲ್ಲಿ ಮುನ್ನಡೆದರು. ಪ್ರಜೆಗಳ ಉಲ್ಲಾಸದಿಂದ ರಾಜಧಾನಿಯು ನಗುತಲಿದ್ದಿತು. ದೇವವ್ರತನ ಹೆಸರಲ್ಲಿ ಜಯಧ್ವನಿಯು ಮೊರೆಯಲು, ಅದನ್ನು ಶಾಂತನುರಾಜನು ಕೇಳುತ್ತ ಕೇಳುತ್ತ ಚಕಿತನಾದನು. ಇಷ್ಟು ದಿನ ಆತನು ಅಂತಃಪುರವನ್ನು ಬಿಟ್ಟು ಹೊರಬಿದ್ದವನಲ್ಲ. ಈ ಕೋಲಾಹಲವೇನೆಂದು ತಿಳಿದುಕೊಳ್ಳುವುದಕ್ಕೆ ಆತನು ರಾಜಗೃಹದ ಗೋಪುರವನ್ನೇರಿದನು. ಹೊರಬೀದಿಯಲ್ಲಿ ಅವನು ಯಾವ ದೃಶ್ಯವನ್ನು ಕಂಡನೊ, ಅದನ್ನು ಅವನು ತಿಳಿದುಕೊಳ್ಳಲಾರದಾದನು. ದೇವವ್ರತನನ್ನು ಬಳಿಸಿ,

ಅಸಂಖ್ಯಾತರಾದ ಪ್ರಜೆಗಳು ರಾಜಧಾನಿಯ ಕಡೆಗೆ ಬರುತಿರುವರು; ಕ್ಷಣಕ್ಷಣಕ್ಕೂ ಅವನ ಹೆಸರೆತ್ತಿ ಜಯಧ್ವನಿ ಮಾಡುತಿರುವರು. ಕೆಲವರು 'ಭೀಷ್ಮನಿಗೆ ಜಯವಾಗಲಿ!' ಎನ್ನುತಿರುವರು. 'ಏನಿದು! ಪ್ರಜೆಗಳು ತನಗೆ ವಿರುದ್ಧರಾಗಿ ಎದ್ದರೇ? ಪ್ರಜೆಗಳು ದೇವವ್ರತನ ವಶವರ್ತಿಗಳಾಗಿ ತನ್ನನ್ನು ಇದಿರಾಡಲು ಬಂದರೇ' ಎಂದು ಸಂದೇಹಗೊಂಡು ಭಾವಿಸಿ ಭಾವಿಸಿ, ಅವನು ಪ್ರಜಾವಿದ್ರೋಹವನ್ನು ವಿಚಾರಿಸಿ ತಿಳಿಯಲು ಹೊರ ಬಂದನು.

ಅಷ್ಟರೊಳಗೆ, ದೇವವ್ರತನು ಸತ್ಯವತಿಯನ್ನು ಮುಂದಾಗಿ ಇರಿಸಿ ಕೊಂಡು, ಇದಿರು ಬಂದು ತನ್ನ ತಂದೆಯ ಚರಣಗಳಿಗೆ ಸಾಷ್ಟಾಂಗ ವೆರಗಿದನು.

ದೇವವ್ರತನ ಜತೆಯಲ್ಲಿ ಪದ್ಮಗಂಧೆಯನ್ನು ಕಂಡು ಶಾಂತನುವಿಗೆ ಇನ್ನೂ ಆಶ್ಚರ್ಯವಾಯಿತು. ಇವನು ಪದ್ಮಗಂಧೆಯನ್ನು ಹೇಗೆ ಪಡೆ ದನು? ಏಕೆ ತಂದನು? ಎಂದು ಕೇಳಬೇಕೆನ್ನುವಷ್ಟರಲ್ಲಿ, ದೇವವ್ರತನೆ ಎಲ್ಲ ವೃತ್ತಾಂತವನ್ನು ವಿಜ್ಞಾಪಿಸಿಕೊಂಡನು. ಶಾಂತನುವಿಗೆ ಇದರಿಂದ ಮತ್ತೂ ಆಶ್ಚರ್ಯವಾಯಿತು; ಒಡನೆಯೆ ಕಣ್ಣೀರು ಸುರಿಯಿತು. ಶಾಂತನುರಾಜನು ಅಳುತಳುತ, 'ಸೂರ್ಯವಂಶದ ದಶರಥರಾಜನ ಪುತ್ರ ನಾದ ರಾಮಚಂದ್ರನು ತನ್ನ ತಂದೆಯನ್ನು ಸತ್ಯಪಾಶದಿಂದ ಬಿಡಿಸುವುದ ಕ್ಕಾಗಿ, ವಿಮಾತೆಯ ತಂತ್ರಕ್ಕೊಳಪಟ್ಟು ವನವಾಸಕ್ಕೆ ತೆರಳಿದ್ದನೆಂಬುದನ್ನು ಕೇಳಿರುವೆನು. ನೀನಾದರೊ, ಸ್ವೇಚ್ಛೆಯಿಂದ ಪಿತೃಮನಸ್ಸಂತೋಷಕ್ಕಾಗಿ ಹಸ್ತಿನಾವತಿಯ ರಾಜ್ಯಭಾರವನ್ನು ತ್ಯಜಿಸಿದೆಯಲ್ಲವೆ? ಅದೂ ಅಲ್ಲದೆ ಮನುಷ್ಯರಾದವರಿಗೆ ಸಾಮಾನ್ಯ ಸ್ವಭಾವವಾಗಿರುವ ದಾರಾಪರಿಗ್ರಹ ಕಾರ್ಯದಿಂದಲೂ ನೀನು ಸ್ವೇಚ್ಛೆಯಾಗಿ ದೂರನಾದೆಯಲ್ಲವೆ? ನಿನಗೆ ಪುತ್ರರಿಲ್ಲದೆ ಮುಂದೆ ನರಕವಾಸವನ್ನು ಅನುಭವಿಸಬೇಕಾಗಿರುವುದನ್ನಾ ದರೂ ನೀನು ಗಣನೆಗೆ ತಂದುಕೊಳ್ಳಲಿಲ್ಲವಷ್ಟೆ. ನಿನ್ನನ್ನು ರಾಜ್ಯಾಧಿಕಾರ ದಿಂದ ವಂಚಿಸಬೇಕಾಗುವುದೆಂಬ ಅದೊಂದೇ ಕಾರಣದಿಂದ, ನನಗೆ ಈ ವಿವಾಹವೇ ಬೇಡವೆಂದು ನಾನು ಬೇರೆಯಾಗಿದ್ದೆನು. ಅದರಿಂದ ನನ್ನ ಮನಸ್ಸು ಕೊಂಚ ಕೆಟ್ಟಿದ್ದಿತಾದರೂ, ನೀನು ಸ್ವತಃ ಅತ್ತ ತೆರಳಿ, ನಿನ್ನ ಕಾಲುಗಳ ಮೇಲೆಯೆ ಎಂತಹ ಕೊಡಲಿ ಏಟನ್ನು ಹಾಕಿಕೊಂಡೆ? ಅಷ್ಟಾ ದರೂ ನೀನೆ ನಮ್ಮೆಲ್ಲರಿಗಿಂತಲೂ ಹೆಚ್ಚಾಗಿ ಆನಂದಗೊಂಡಿರುವೆಯಲ್ಲವೆ?

ದೈವವೆ! ಇಂತಹ ಸತ್ಪುತ್ರನು ಮುಂದೆ ಹೆದ್ದಾರಿಯ ತಿರುಕನಾಗುವಂತಾಯಿತೆ!' ಎಂದು ಶ್ಲಾಘಿಸುತ್ತಲೂ ರೋದಿಸುತ್ತಲೂ ಇದ್ದನು.

'ತಂದೆಯೆ, ರಾಜ್ಯವೂ ಧನಕೋಶವೂ ಎಲ್ಲ ಕಾಲಕ್ಕೂ ಬಾರವು. ಇಂದಿಗಿವೆ, ನಾಳೆಗಿಲ್ಲ. ಕಳೆದು ಹೋಗುವ ಈ ಸಂಪತ್ತಿಗೆ ಸೋಲದೆ ನಾನು ಚಿರಕಾಲಕ್ಕೂ ಬಾಳುವಂತಹ ಯಶೋಸಂಪತ್ತನ್ನು ಗಳಿಸಿಕೊಳ್ಳಲು ಇಂದಿಗೆ ಸಮರ್ಥನಾದೆನು. ಇದುವೆ ನನಗೆ ಆನಂದದಾಯಕವಲ್ಲವೆ? ನಿಮ್ಮಗಳಿಗೆ ಆನಂದವುಂಟಾಗುವ ಹಾಗೆ ಸಾಧಿಸುವುದೆ ನನಗೆ ನನ್ನ ಜೀವನದ ಕರ್ತವ್ಯವಲ್ಲವೆ? ನಾನು ಶಾಶ್ವತವಾಗಿರುವ ಯಶೋಸಂಪತ್ತನ್ನು ಗಳಿಸಿಕೊಳ್ಳುವಾಗಲೆ ನಿಮಗೂ ತುಂಬಾ ಆನಂದವನ್ನು ಉಂಟುಮಾಡುವ ಸಂದರ್ಭವನ್ನು ನೋಡಿದೆನು. ಇದು ಇನ್ನೂ ಆನಂದಕರವಾದುದಲ್ಲವೆ? ಈ ಆನಂದವೇ ನಾನು ಕರ್ತವ್ಯಶೀಲನಾದುದಕ್ಕೆ ನನಗೆ ದೊರೆಯಬಹುದಾದ ಮೊದಲನೆ ಪುರಸ್ಕಾರವು. ದೇವತೆಗಳು ನಾನು ಸಾಧಿಸಿದ ಕಾರ್ಯಕ್ಕೆ ಸಂತುಷ್ಟರಾಗಿ ನನಗೆ ಭೀಷ್ಮನೆಂಬ ಹೆಸರನ್ನಿತ್ತುದು ನನಗೆ ಎರಡನೆ ಬಹುಮಾನವು. ಇದರಿಂದಲೇ ನಾನು ಸ್ವನಾಮಧನ್ಯನಾದ ಪುರುಷನಾದೆನು; ಇದರಿಂದಲೆ ಚಿರಸ್ಥಾಯಿಯಾಗಿರುವ ಯಶಸ್ಸು ನನಗೆ ದೊರೆತು, ನಾನೀಗ ಪ್ರಪಂಚದಲ್ಲಿ ಚಿರಕಾಲಕ್ಕೂ ಪರಿಚಯ ಹೊಂದುವಂತಾಯಿತಲ್ಲವೆ? ನನಗೆ ಪುತ್ರರೇತಕ್ಕೆ ಬೇಕು? ಪುತ್ರತುಲ್ಯವಾದ ಪ್ರಜಾಸಮೂಹವೆ ನನ್ನನ್ನು ಎಂತಹ ನರಕದಿಂದಲಾದರೂ ಉದ್ಧರಿಸಬಲ್ಲದು. ಇಂತಹ ನನ್ನ ಸುಖದಿಂದ ನೀವೂ ಸಂತುಷ್ಟಚಿತ್ತರಾಗಬೇಕಾಗಿರುವುದು ನ್ಯಾಯವು. ನನ್ನ ಸತ್ಯಪ್ರತಿಜ್ಞೆಯಿಂದ ದೊರಕಿಸಿಕೊಂಡ ಮಾತಾ ಸತ್ಯವತಿಯನ್ನು ನೀವು ಗ್ರಹಣಮಾಡಿಕೊಂಡು ನಿಮ್ಮ ಮನೋವ್ಯಥೆಯನ್ನು ದೂರಗೊಳಿಸಿ, ನನ್ನ ಆನಂದವನ್ನು ವರ್ಧಿಸಿರಿ' ಎಂದು ಭೀಷ್ಮನು ತಂದೆಯನ್ನು ಬೇಡಿಕೊಂಡನು.

ಬಳಿಕ, ಶಾಂತನುಚಕ್ರವರ್ತಿಯು ಸತ್ಯವತಿಯನ್ನು ಸ್ವೀಕರಿಸಿಕೊಂಡನು. ಆಗ ಶಾಂತನುಮಹಾರಾಜನು, 'ಪುತ್ರಾ! ದೇವತೆಗಳು ನಿನ್ನ ಭೀಷ್ಮಪ್ರತಿಜ್ಞೆಯನ್ನು ಕೇಳಿಯೆ ನಿನಗೆ ಭೀಷ್ಮನೆಂಬ ಅಭಿಧಾನವನ್ನಿತ್ತರಲ್ಲ! ನಾನು ನಿನಗೇನು ಬಹುಮಾನ ಕೊಡಲಿ? ನಿನ್ನ ಸ್ವಾರ್ಥವನ್ನು ತೊರೆದು ನನ್ನ ಆನಂದವನ್ನು ವರ್ಧಿಸಿದೆಯಾದುದರಿಂದ, ನೀನು ಇನ್ನು

**'ಇಚ್ಛಾಮರಣಿ'** ಯಾಗುವಂತೆ ನಾನು ವರಪ್ರದಾನವನ್ನು ಮಾಡುವೆನು. ನೀನೇ ಬಯಸದೆ, ನಿನಗೆಂದಿಗೂ ಸಾವು ತಟ್ಟದು' ಎಂದು ಪುತ್ರನನ್ನು ಹರಸಲು, ಕೋಟಿಕಂಠಗಳಿಂದ ಪ್ರಜಾಗಣವು 'ಭೀಷ್ಮನಿಗೆ ಜಯವಾಗಲಿ' ಎಂದು ಘೋಷವನ್ನು ಮಾಡಿತು.

ತರುವಾಯ ಭೀಷ್ಮನು ಸತ್ಯವತಿಗೆ ತಲೆವಾಗಿ, 'ಅಮ್ಮಾ, ನನ್ನನ್ನು ತಮ್ಮ ಉದರದಲ್ಲಿಯೆ ಹುಟ್ಟಿದ ಮಗನೆಂದು ಭಾವಿಸಿಕೊಳ್ಳಬೇಕು. ನಮ್ಮ ತಂದೆಯ ಆದೇಶದಂತೆಯೆ ತಮ್ಮ ಮಾತನ್ನೂ ನಾನು ಶಿರಸಾವಹಿಸಿ ಕೊಂಡು ಪಾಲಿಸುವೆನು. ಎಂದಿಗೆ ಯಾವುದು ನನ್ನಿಂದಾಗತಕ್ಕದಿದೆಯೊ ಅದನ್ನಾಗಲೆ ನನಗೆ ಅಪ್ಪಣೆ ಕೊಟ್ಟರೆ ಸಾಕಾಗುವುದು' ಎಂದು ಬಿನ್ನ ವಿಸಲು, ಅವಳು,—'ವತ್ಸಾ! ನೀನು ನನ್ನನ್ನು 'ಅಮ್ಮಾ' ಎಂದು ಕರೆದೊಡನೆಯೆ ನನ್ನ ಹೃದಯದಲ್ಲಿ ಉತ್ಸಾಹವು ತಲೆದೋರಿರುವುದು. ನಿನ್ನ ಸ್ವಾರ್ಥತ್ಯಾಗದ ದೆಸೆಯಿಂದಲೆ ನಾನು ಈ ಸೌಭಾಗ್ಯವನ್ನು ಪಡೆದೆನು; ಇದಕ್ಕಾಗಿ ನಾನು ನಿನಗೆ ಚಿರಕಾಲಕ್ಕೂ ಕೃತಜ್ಞಳಾಗಿರುವೆನು. ನೀನೆ ನನಗೆ ಪ್ರಥಮ ಪುತ್ರನು. ನೀನು ನನ್ನನ್ನು ತಾಯಿಯೆಂದು ಭಾವಿಸುತ್ತಿರುವುದೆ ನನಗೆ ಗೌರವವು. ನಿನ್ನಂತಹ ದಿವ್ಯ ಚರಿತ್ರವುಳ್ಳವನೂ ಧಾರ್ಮಿಕನೂ ಶೌರ್ಯವೀರ್ಯಶಾಲಿಯೂ ಆದ ಯಾವನೊಬ್ಬ ಪುತ್ರನು ನನ್ನಲ್ಲಿ ಹುಟ್ಟುವುದು ಅಸಂಭವವು. ಇದುಕಾರಣವೆ ನಾನು ಈಗಲೆ ನಿನ್ನಲ್ಲಿ ನನ್ನದೊಂದು ಕೋರಿಕೆಯನ್ನು ತಿಳುಹುವೆನು. ನೀನು ಸ್ವೇಚ್ಛೆ ಯಾಗಿ ಹಸ್ತಿನಾಪುರದ ಸಿಂಹಾಸನಾಧಿಕಾರವನ್ನು ತ್ಯಜಿಸಿರುವೆ. ನೀನು ಅದನ್ನು ಪುನಃ ಸ್ವೀಕರಿಸಬೇಕಾಗಿ ನಾನು ಹೇಳುವುದಿಲ್ಲ,—ಆದರೆ ನಿನಗೆ ಪ್ರಾಣಸಮಾನರಾಗಿರುವ ಪ್ರಜೆಗಳನ್ನು ಕಾಪಾಡುವ ಭಾರವನ್ನು ಮಾತ್ರ ನಾನು ನಿನ್ನ ಮೇಲೆಯೆ ಇಟ್ಟಿರುವೆನು. ಇದನ್ನು ನೀನು ವಹಿಸಿಕೊಳ್ಳುವು ದರಿಂದ ನನ್ನಲ್ಲಿ ಸಂತೋಷವೂ ರಾಜನಲ್ಲಿ ಅತ್ಯಾನಂದವೂ ಉಂಟಾಗುವು ದರಲ್ಲಿ ಸಂದೇಹವಿಲ್ಲ' ಎಂದಳು.

ಈ ಮಾತುಗಳನ್ನು ಕೇಳುತ್ತಲೆ, ಮಂತ್ರಿಗಳೂ ಪ್ರಜಾಮುಖಂಡರೂ 'ಮಹಾರಾಣಿಗೆ ಜಯವಾಗಲಿ!' ಎಂದು ಜಯಘೋಷವನ್ನು ಮಾಡಿದರು. ತಾಯಿಯಾದವಳು ಹೇಳತಕ್ಕದಾದ ಮಾತುಗಳನ್ನೆ ರಾಣೀಮಾತೆಯು ಹೇಳಿದಳಲ್ಲವೆ!

ರಾಜ್ಯಪಾಲನೆಯನ್ನು ಮಾಡುವುದು ರಾಜರ ಕರ್ತವ್ಯವು. ಅದನ್ನು ವಹಿಸಿಕೊಂಡರೆ ತನ್ನ ಪ್ರತಿಜ್ಞೆಗೆ ಭಂಗ ಬರುವುದಲ್ಲವೆ? ರಾಜನೆ ಅನುಜ್ಞೆಮಾಡಿದಂತೆ ತಾನು ಕೆಲಸ ನಡೆಸುವುದು ಉತ್ತಮವಲ್ಲವೆ? ಎಂದೇ ಭೀಷ್ಮನ ಭಾವನೆ.

ಹೀಗೆ ಚಿಂತಾಮಗ್ನನಾದ ಭೀಷ್ಮನನ್ನು ಕುರಿತು ಸತ್ಯವತಿಯು,— 'ವತ್ಸಾ, ಇದಕ್ಕಾಗಿ ಚಿಂತಿಸುವುದೇಕೆ? ಇದರಿಂದ ನಿನ್ನ ಪ್ರತಿಜ್ಞೆಗೆ ಭಂಗ ಬಾರದು. ಈ ರಾಜ್ಯಕ್ಕೆ ಯಾವನು ರಾಜನಾಗಬಹುದೊ ಅವನು ನಿನ್ನ ಸಹಾಯದಿಂದಲ್ಲದೆ ಆಳಲು ಅಸಮರ್ಥನಾಗುವನು; ಎಂದರೆ, ಅವನು ಸಿಂಹಾಸನದಲ್ಲಿ ಕುಳಿತುಕೊಳ್ಳುವನು ಮಾತ್ರವಲ್ಲದೆ, ರಾಜ್ಯಶಾಸನವನ್ನೂ ರಕ್ಷಣವನ್ನೂ ನೀನೇ ವಹಿಸಿಕೊಳ್ಳಬೇಕಾಗುವುದು. ರಾಜ್ಯದ ಶಾಂತಿಯೂ ಪ್ರಜೆಗಳ ಮಂಗಲವೂ ನಿನ್ನ ಮೇಲೆಯೆ ಅವಶ್ಯವಾಗಿಯೂ ಇರಬೇಕಾಗುವುದು; ಇದನ್ನು ನೀನು ಸಮ್ಮತಿಸುವುದಿಲ್ಲವಾದರೆ ಭಯಂಕರವಾದ ದೋಷಗಳು ಉಂಟಾಗುವುವಲ್ಲವೆ?' ಎಂದಳು. ಪ್ರಜೆಗಳೂ ಇದೇ ಉಚಿತವಾದುದೆಂದು ಭೀಷ್ಮನನ್ನು ಪ್ರಾರ್ಥಿಸಿಕೊಂಡರು.

**ಭೀಷ್ಮನು**—'ಮಾತೆಯೆ, ನಿನ್ನ ಈ ಆದೇಶವು ಶಿರೋಧಾರ್ಯವಾಗಿದೆ. ಎಷ್ಟು ಕಾಲದ ತನಕ, ಹಸ್ತಿನಾಪುರದ ಯಾವನೊಬ್ಬ ರಾಜನು ನನ್ನ ಈ ಅಧಿಕಾರವನ್ನು ಕಿತ್ತುಬಿಡನೊ, ಅಷ್ಟು ಕಾಲ ನಾನು ಆ ರಾಜನ ಅನುವರ್ತಿಯಾಗಿದ್ದು ರಾಜ್ಯರಕ್ಷಣೆಯನ್ನು ಮಾಡುತ್ತ, ಯಾವಜ್ಜೀವವೂ ಹಸ್ತಿನಾಪುರದ ಸಿಂಹಾಸನವನ್ನು ಕಾಪಾಡುವುದಕ್ಕಾಗಿ ಪ್ರಾಣಪಣವಾಗಿ ಸಾಧಿಸುವೆನು,' ಎಂದು ನುಡಿವಷ್ಟರಲ್ಲಿಯೆ ಶಾಂತನುರಾಜನು ಸ್ನೇಹಭಾವದಿಂದ ಪುತ್ರನನ್ನಾಲಿಂಗಿಸಿದನು. ಅವನು ಆಶೀರ್ವಾದಪೂರ್ವಕವಾಗಿ,—'ನಿನ್ನ ಮನಸ್ಸು ಕ್ಷಣಕಾಲಕ್ಕೆ ಮಾತ್ರ ಉತ್ತೇಜನಗೊಂಡುದರ ಫಲವಾಗಿ, ಈ ರೀತಿಯಾದ ಕಠೋರಪ್ರತಿಜ್ಞೆಯನ್ನು ನೀನು ಮಾಡಿದ್ದೆಯೆಂದು ನಾನು ಭಾವಿಸಿದ್ದೆನು. ನನ್ನನ್ನು ಸಂಸಾರಿಯನ್ನಾಗಿ ಮಾಡಿ, ನೀನು ವನವಾಸಿಯಾಗುವೆಯೊ ಎಂದೂ ನನ್ನಲ್ಲಿ ಬೆದರಿಕೆಯುಂಟಾಗಿದ್ದಿತು; ಮುಂದೆ ಈ ರಾಜ್ಯದ ಗತಿಯೇನಾಗುವುದೊ ಎಂದೂ ನಾನು ಚಿಂತಾಪರನಾಗಿದ್ದೆನು. ನಿನ್ನ ಮಾತುಗಳಿಂದ ನಾನು ಸಮಾಧಾನ ಹೊಂದಿರುವೆನು. ಭಗವಂತನು ನಿನ್ನೀ ಪ್ರತಿಜ್ಞೆಯನ್ನು ಪಾಲಿಸಲು ನಿನಗೆ ಶಕ್ತಿಯನ್ನು ಕೊಡಲಿ!' ಎಂದು ನುಡಿದನು.

ಬಳಿಕ ಮಹಾಸನಾರೋಹದಿಂದ ಶಾಸ್ತ್ರವಿಧಿಗನುಸಾರವಾಗಿ ಶಾಂತನುಚಕ್ರವರ್ತಿಯು ಸತ್ಯವತಿಯನ್ನು ವಿವಾಹಮಾಡಿಕೊಂಡನು.

---

## ೮. ಭೀಷ್ಮಪಿತಾಮಹ

ಭೀಷ್ಮನು ರಾಜ್ಯದ ರಕ್ಷಕನೆಂದ ಬಳಿಕ, ಶಾಂತನುಚಕ್ರವರ್ತಿಯು ಅಂತಃಪುರದಲ್ಲಿ ಉಳಿದು, ಸತ್ಯವತಿಯಿಂದ ಸೇವೆಶುಶ್ರೂಷೆಗಳನ್ನು ಸ್ವೀಕರಿಸಿಕೊಂಡು ಸಂತುಷ್ಟನಾಗಿದ್ದನು. ತಾಯಿಯಿಲ್ಲದ ಭೀಷ್ಮನು ಮರಳಿ ತಾಯಿಯನ್ನು ಪಡೆದಂತೆ ಸಂತೃಪ್ತನಾಗಿ, ನವಜೀವನವನ್ನು ಪಡೆದಿದ್ದನು. ಅವನು ಪುನಃ ಬಾಲ್ಯಭಾವವನ್ನೆ ತಳೆದು, ಅದಕ್ಕೆ ಉಚಿತವಾದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದನು. ಭೀಷ್ಮನಿಗೆ ಸತ್ಯವತಿಯು ಆತನ ಹುಟ್ಟುತಾಯಿಯಂತಾದಳು; ಸತ್ಯವತಿಗೆ ಭೀಷ್ಮನು ಅವಳ ಹೊಟ್ಟೆಮಗುವಿನಂತಾದನು.

ಹೀಗೆ ಕೆಲಕಾಲವು ಕಳೆಯಿತು. ಸತ್ಯವತಿಯು ಇಬ್ಬರು ಕುಮಾರರನ್ನು ಹೆತ್ತಳು. ಅವರಲ್ಲಿ ಒಬ್ಬನು **ಚಿತ್ರಾಂಗದನು; ವಿಚಿತ್ರವೀರ್ಯನು** ಮತ್ತೊಬ್ಬನು. ಭೀಷ್ಮನು ಇವರನ್ನು ತನ್ನ ನಿಜಸೋದರರಂತೆ ಸ್ನೇಹದಿಂದಲೂ ಪ್ರೀತಿಯಿಂದಲೂ ಪಾಲನೆಮಾಡಿದನು. ಮತ್ತೂ ಕೆಲಕಾಲದ ಬಳಿಕ ಶಾಂತನುವು ಮೃತನಾದನು; ಸತ್ಯವತಿಯು ಜೀವನ್ಮೃತಳಾದಳು. ಭೀಷ್ಮನೂ ಸತ್ತವನಂತೆ ದುಃಖದಿಂದ ನಿಸ್ತೇಜನಾದನು. ಚಿತ್ರಾಂಗದ ವಿಚಿತ್ರವೀರ್ಯರಿಬ್ಬರೂ ಆಗ ಬರೇ ಕೂಸುಗಳು; ದುಃಖವೆಂದರೆ ಏನೆಂದು ಅವರಿಗೆ ತಿಳಿಯದು. ಆದರೂ, ತಾಯಿಯೂ ಅಣ್ಣನು ದುಃಖಿಸುವುದನ್ನು ಕಂಡು ಅವರೂ ಸ್ವಲ್ಪ ಬಾಡಿದರು.

**ಸತ್ಯವತಿಯು**—'ವತ್ಸಾ! ಸಿಂಹಾಸನವು ಶೂನ್ಯವಾಗಿದೆಯಲ್ಲವೆ? ಇನ್ನು ಉಪಾಯವೇನು? ನೀನು ಜ್ಯೇಷ್ಠನಾಗಿರುವುದರಿಂದ....' ಎನ್ನುವುದರೊಳಗೆ ಭೀಷ್ಮನು, 'ನಾನು ರಾಜ್ಯದ ರಕ್ಷಕನಲ್ಲವೆ? ನಿಮಗೇಕೆ ಚಿಂತೆ? ಸಿಂಹಾಸನವು ಶೂನ್ಯವಾಗಿರದಂತೆ ಪಂಡಿತವರ್ಯರ ಅಭಿಪ್ರಾಯದಿಂದ ಮುಹೂರ್ತವನ್ನು ನೋಡಿಟ್ಟಿರುವೆನು. ಚಿತ್ರಾಂಗದನ ಪಟ್ಟಾಭಿಷೇಕವನ್ನು ತ್ವರ್ಯದಲ್ಲೆ ಮಾಡಿಸುವೆನು; ನಾನೇ ಅವನಿಗೆ ಶ್ವೇತಛತ್ರವನ್ನು

ಹಿಡಿಯುವೆನು. ಅವನಲ್ಲಿ ಎಷ್ಟು ಕಾಲದ ತನಕ ರಾಜ್ಯಶಾಸನಕ್ರಮದ ಜ್ಞಾನವು ಮೂಡಲಾರದೊ, ಅಷ್ಟು ಕಾಲವೂ ತಮ್ಮ ಪರಾಮರ್ಶೆಗೊಳಗಾಗಿ, ಮಂತ್ರಿಗಳ ಸಹಾಯದಿಂದ, ರಾಜ್ಯಭಾರವನ್ನು ನಾನು ನಿರ್ವಹಿಸುವೆನು. ನಾನು ಜೀವಿಸಿರುವಷ್ಟು ಕಾಲ ಹಸ್ತಿನಾಪುರದ ಅರಸನ ರಕ್ಷಣೆಯ ಭಾರವು ನನ್ನ ಮೇಲಿರಲಿ; ತಾವೆಂದೂ ಚಿಂತಿಸಲವಕಾಶವಿಲ್ಲದಂತೆ ನೋಡುವೆನು. ನಾನು ಸೋದರರ ಶಿಕ್ಷಣಭಾರವನ್ನು ವಹಿಸುವೆನು; ತಾವು ನನ್ನನ್ನು ಲಾಲಿಸಿಪಾಲಿಸಿರಿ. ಅವರಿಬ್ಬರೂ ನನಗೆ ಸಮಕಕ್ಷಿಗಳಾಗುವ ತನಕ ಅವರ ಶಿಕ್ಷಣವನ್ನು ನಾನು ತಡೆಯುವುದಿಲ್ಲ' ಎಂದು ಬಿನ್ನವಿಸಿಕೊಂಡನು.

'ವತ್ಸಾ, ರಾಜ್ಯವೂ ನಿನ್ನದು; ಇಬ್ಬರು ಸೋದರರೂ ನಿನ್ನವರು; ಅಭಾಗಿನಿಯಾದ ನಾನಂತೂ ನಿನ್ನವಳೆ! ನೀನೇ ನಮ್ಮನ್ನು ನಾವು ಹೋಗಬೇಕಾದ ದಾರಿಯಲ್ಲಿ ನಡೆಸುವನಾಗು; ಭಗವಂತನು ನಿನ್ನನ್ನು ಕಾಪಾಡಲಿ!' ಎಂದು ಅವಳು ಆಶೀರ್ವದಿಸಿದಳು.

**ಭೀಷ್ಮನು**—'ಅಮ್ಮಾ, ಭಗವಂತನೆ ಸಕಲ ಕಾರ್ಯಗಳಿಗೂ ಕರ್ತೃವು; ನಾವು ಅವನ ಕರ್ಮಚಾರಿಗಳು; ಅವನೆ ನಮ್ಮನ್ನು ಎತ್ತ ನಡೆಯಿಸುವನೊ ನಾವತ್ತ ನಡೆಯೋಣ' ಎಂದು ಕರ್ಮಫಲಾಧಿಪತಿಯಾದ ಭಗವಂತನ ಕೈಯಲ್ಲಿ ಕರ್ಮಶಾಲಿಯಾದ ಭೀಷ್ಮನು ತನ್ನನ್ನೆ ಅರ್ಪಿಸಿಕೊಂಡನು. ಚಿತ್ರಾಂಗದನೆ ಪಟ್ಟಕ್ಕೆ ಬಂದನು.

ಅನಂತರಲ್ಲಿ ಭೀಷ್ಮನ ಶಿಕ್ಷಣದ ಫಲವಾಗಿ ಭೀಷ್ಮಸಮಾನ ಪ್ರತಾಪಶಾಲಿಯಾದ ಚಿತ್ರಾಂಗದನು ರಾಜ್ಯವನ್ನಾಳುತಲಿರಲು, ಅವನು ತನ್ನ ಬಾಹುಬಲವನ್ನು ಭೀಷ್ಮನಂತೆ ಅಂಕೆಯಲ್ಲಿಟ್ಟುಕೊಳ್ಳಲಾರದೆ ಯುದ್ಧಾರ್ಥವಾಗಿ ರಾಜಧಾನಿಯಿಂದ ಹೊರಟು, ಸರ್ವತ್ರವೂ ವಿಜಯವನ್ನು ಪಡೆದು ಕೊನೆಗೆ ಮಾಯಾವಿಯಾದೊಬ್ಬ ಚಿತ್ರಾಂಗದನೆಂಬ ಗಂಧರ್ವನೊಡನೆ ಮೂರು ಸಂವತ್ಸರಗಳ ತನಕ ಕಾದಾಡಿ ರಣರಂಗದಲ್ಲಿ ಪ್ರಾಣತ್ಯಾಗವನ್ನು ಮಾಡಿದನು.

ಅವನ ಮರಣವೃತ್ತಾಂತವು ರಾಜಧಾನಿಯಲ್ಲಿ ಶೋಕವನ್ನು ಪಸರಿಸಿತು. ವಿಧಿಕೃತಕಾರ್ಯಕ್ಕೆ ಪರಿವರ್ತನೋಪಾಯವಿಲ್ಲವೆಂದು ಭೀಷ್ಮನು ಸಂತವಿಸಿಕೊಂಡು ವಿಚಿತ್ರವೀರ್ಯನನ್ನು ಪಟ್ಟದಲ್ಲಿ ಕುಳ್ಳಿರಿಸಿದನು.

ಚಿತ್ರಾಂಗದನು ಅಕಾಲಮೃತ್ಯುವಿಗೆ ತುತ್ತಾದುದರಿಂದ ಕುರುವಂಶವನ್ನು ರಕ್ಷಿಸುವ ಉಪಾಯವನ್ನು ಭಾವಿಸುತ್ತ, ಭೀಷ್ಮನು ವಿಚಿತ್ರವೀರ್ಯನಿಗೆ ವಿಳಂಬವಿಲ್ಲದೆ ವಿವಾಹಮಾಡಿಸಲು ಉದ್ಯೋಗಪರನಾದನು.

ಅದೇ ಸಮಯಕ್ಕೆ ಸರಿಯಾಗಿ ಕಾಶೀರಾಜನು ತನ್ನ ಮೂವರು ಕನ್ಯೆಯರಿಗೂ ಸ್ವಯಂವರವಾಗುವುದೆಂದು ದೇಶದಲ್ಲೆಲ್ಲ ಸಾರಿದನು! ಭೀಷ್ಮನು ಆಗಲೆ ಸ್ವಯಂವರಮಂಟಪಕ್ಕೆ ತೆರಳಿ, ಆ ಮೂವರು ಕನ್ಯೆಯರನ್ನೂ ತನ್ನ ತಮ್ಮನ ಸಲುವಾಗಿ ಅಪಹರಿಸಿಕೊಂಡು, ನೆರೆದ ರಾಜರಲ್ಲಾರೇ ಆಗಲಿ ತನ್ನನ್ನು ಗೆದ್ದು ಅವರನ್ನು ವರಿಸಬಹುದೆನ್ನಲು, ರಾಜಪುತ್ರರೆಲ್ಲರೂ ಅವನನ್ನು ಕೂಡಲೆ ಆಕ್ರಮಿಸಿದರು. ಇದುವರೆಗೆ ಭೀಷ್ಮನ ಯುದ್ಧ ಪ್ರಕಾರವನ್ನು ಕುರಿತು ನಾವೇನೂ ತಿಳಿದಿರಲಿಲ್ಲ. ಇದೇ ಮೊದಲನೆ ಬಾರಿಗೆ, ಅವನು ಯುದ್ಧಕ್ಕೆ ಕರೆದುದು ಎಲ್ಲರನ್ನು; ಎಲ್ಲರು ಮುತ್ತಿದುದೂ ಅವನೊಬ್ಬನನ್ನು! ಆದರೂ ಒಬ್ಬೊಬ್ಬರನ್ನಾಗಿ ಅವನು ಎಲ್ಲರನ್ನೂ ಚೆಲ್ಲ ಬಡಿದನು. ಭೀಷ್ಮನು ಚೌಪಟಮಲ್ಲನಲ್ಲವೆ?

ಅನಂತರ ಭೀಷ್ಮನು ಕಾಶೀರಾಜನ ಮೂವರು ಕನ್ಯೆಯರೊಡನೆ ವಿಚಿತ್ರವೀರ್ಯನಿಗೆ ವಿವಾಹವಾಗಬೇಕೆಂದು ಬ್ರಾಹ್ಮಣರನ್ನು ಕರೆಯಿಸಿ, ಶುಭಸಂಸ್ಕಾರವನ್ನು ಮಾಡಲುದ್ಯುಕ್ತನಾದನು. ವಿವಾಹಸಭೆಯಲ್ಲಿ ಕಾಶೀರಾಜನ ಜ್ಯೇಷ್ಠಕನ್ಯೆಯಾದ **ಅಂಬೆಯು** ಎದ್ದುನಿಂತು,--'ಸರ್ವಶಾಸನ ವಿಶಾರದನಾದ ಶಾಂತನುನಂದನನೆ! ನಿನಗೊಂದು ನನ್ನ ವಿಜ್ಞಾಪನೆ ಇರುವುದು. ನನ್ನನ್ನು ಇಲ್ಲಿ ಗೆದ್ದು ತರುವ ಮೊದಲೆ ನಾನು ನಮ್ಮ ರಾಜಸಭೆಯಲ್ಲಿ ಸಾಲ್ವನನ್ನು ವರಿಸಿಕೊಳ್ಳಲು ನಿಶ್ಚಯಮಾಡಿದ್ದೆನು' ಎಂದಳು. ಅಂಬೆಯು ಮಾತುಗಳನ್ನು ಕೇಳುತ್ತಲೆ, ಭೀಷ್ಮನು, ಅವಳನ್ನು ಸನ್ಮಾನದಿಂದ ಸಾಲ್ವರಾಜನಲ್ಲಿಗೆ ದಂಡಿಗೆಯಲ್ಲಿ ಕಳುಹಿಕೊಟ್ಟನು. ಆದರೆ ಅವಳು ಭೀಷ್ಮನಿಂದ ಅಪಹೃತಳಾದವಳೆಂದು ಸಾಲ್ವನು ಅವಳನ್ನು ಸ್ವೀಕರಿಸಲಿಲ್ಲ. ಆಗ ಅವಳು ಭೀಷ್ಮನಲ್ಲಿಗೆ ಮರಳಿ,-'ಗೆದ್ದು ತಂದವನೂ ಕದ್ದು ತಂದವನೂ ನೀನೆ ಆಗಿರುವುದರಿಂದ ನೀನೆ ನನ್ನನ್ನು ವರಿಸಿಕೊಳ್ಳು' ಎಂದಳು. 'ನಾನು ಚಿರಕುಮಾರನು, ಪ್ರತಿಜ್ಞಾಬದ್ಧನು, ನನಗೆ ವಿವಾಹವೆ ಇಲ್ಲ' ಎಂದು ಅವನೆಂದನು. ಆಗ ಅಂಬೆಯು,—'ಹಾಗಿದ್ದರೆ ಕುಮಾರಿಯಾದ ರಾಜಪುತ್ರಿಯನ್ನು ಕೈಗೆ ಹಿಡಿದೆತ್ತಿ ರಥದಲ್ಲಿ ಕುಳ್ಳಿರಿಸಿಕೊಂಡು ಇಲ್ಲಿಗೆ

ತಂದು ನಾಚಿಸಿದೆ ಏಕೆ? ನೀನು ಹೀಗೆ ಮಾಡಿದೆಯಾದುದರಿಂದಲ್ಲವೆ ಸಾಲ್ವರಾಜನೂ ನನ್ನನ್ನು ತಿರಸ್ಕರಿಸಿದನು? ನನ್ನ ಈ ದುರ್ಗತಿಗೆ ಕಾರಣನು ನೀನೆ ಅಲ್ಲವೆ? ನನ್ನನ್ನು ಕದ್ದು ತರುವುದಕ್ಕೂ ಗೆದ್ದು ತರುವುದಕ್ಕೂ ಪುರುಷ ನಂತೆ ಕಾಣಿಸಿಕೊಂಡು, ಈಗ ಮಾತ್ರ ನನ್ನನ್ನು ವರಿಸುವುದಿಲ್ಲವೆಂದು ನಪುಂಸಕನಂತೆ ಹೇಳಿದ ನೀನು, ನಪುಂಸಕನಿಂದಲೆ ಮಡಿವವನಾಗು!' ಎಂದು ಅವನನ್ನು ಶಪಿಸಿ, ದೊಡ್ಡದೊಂದು ಅಗ್ನಿಯನ್ನು ಪ್ರಜ್ವಲಿಸಿ, ಅದ ರಲ್ಲಿ ಹಾರಿ, ಪ್ರಾಣತ್ಯಾಗವನ್ನು ಮಾಡಿದಳು.

ಹೀಗಾಗಿ ವಿಚಿತ್ರವೀರ್ಯನು **ಅಂಬಿಕೆ ಅಂಬಾಲಿಕೆ**ಯರೊಡನೆ ಆನಂದದಿಂದ ಮದುವೆಯಾದನು. ರಾಜನೆಂಬ ಹೆಸರಂತೂ ಅವನದೆ; ಅಣ್ಣನು ರಾಜ್ಯರಕ್ಷಕನು; ಆದ್ದರಿಂದ ಅವನು ಸುಖದಿಂದ ಕಾಲಕಳೆದನು. ಈ ಸುಖವು ಮಾತ್ರ ಬಹು ದಿನಕ್ಕೆ ಉಳಿಯಲಿಲ್ಲ; ಭಯಂಕರವಾದ ಕ್ಷಯ ರೋಗವು ಅವನನ್ನು ತುತ್ತುಗೊಂಡಿತು. ಪುತ್ರವಧುಗಳೊಡನೆ ಸತ್ಯವತಿಯೂ ಶೋಕಗೊಂಡು ಹುಚ್ಚಿಯಾದಳು. ಭೀಷ್ಮನನ್ನು ಕರೆದು,—'ವತ್ಸನೆ, ನನ್ನ ಆಸೆಗಳು ಬರಿದಾದವು. ಹಸ್ತಿನಾವತಿಯ ಸಿಂಹಾಸನವು ಬರಿದಾ ಗಿರುವುದು. ಇನ್ನಾದರೂ, ನೀನೆ ಈ ಸಿಂಹಾಸನವನ್ನೇರಿ ಕುರುವಂಶವನ್ನು ಬೆಳಗಿಸುವ ಉಪಾಯವನ್ನು ಮಾಡು' ಎಂದಳು.

ಭೀಷ್ಮನು ಈ ಮಾತುಗಳನ್ನು ಕೇಳಲಾರದೆ, ಕಿವಿಗಳನ್ನು ಮುಚ್ಚಿ ಕೊಂಡನು.

'ವತ್ಸಾ, ನೀನು ರಾಜನಾಗದಿದ್ದರೆ ರಾಜ್ಯದ ಅವಸ್ಥೆ ಏನಾಗುವುದೊ ನೋಡು; ಕುರುವಂಶದ ಪಿತೃಗಳಿಗೆ ಸದ್ಗತಿ ದೊರೆಯಬೇಡವೆ?' ಎಂದು ಪುನಃ ಅವಳೆಂದಳು.

ಸೂರ್ಯನು ತೇಜಸ್ಸನ್ನೂ ಚಂದ್ರನು ಶೈತ್ಯವನ್ನೂ ತೊರೆದರೂ ಭೀಷ್ಮನು ಸತ್ಯಪ್ರತಿಜ್ಞೆಯನ್ನು ಬಿಡಲಾಪನೆ?

ವತ್ಸಾ! ನಿನ್ನ ಪ್ರತಿಜ್ಞೆಯನ್ನು ಬಲ್ಲೆನು. ಕುರುವಂಶದ ರಕ್ಷಣೆ ಗಾಗಿ ಇನ್ನು ನೀನಲ್ಲದೆ ಮತ್ತಾರು ಇರುವರು? ನೀನು ವಂಶರಕ್ಷಣೆಯನ್ನು ಕೈಗೊಳ್ಳದೆ ಇರುವೆಯಾದರೆ, ಅದಕ್ಕೆ ಸ್ವರ್ಗೀಯನಾದ ನಿನ್ನ ತಂದೆಯ ಆತ್ಮವು ಏನನ್ನುವುದು? ಅದುಕಾರಣ, ನನ್ನ ಆದೇಶಕ್ಕನುಸಾರವಾಗಿ ವರ್ತಿಸು' ಎಂದಳು.

'ಮಾತೆಯೆ, ಇತರ ಎಂತಹ ಮಾತನ್ನಾದರೂ ವೇದವಾಕ್ಯವೆಂದೇ ಮನ್ನಿಸುವೆನು. ಇದೊಂದನ್ನು ಮಾತ್ರ ಮಿೀರಬೇಕಾಗಿದೆ. ಭೀಷ್ಮನಾಮಕ್ಕೆ ಕಲಂಕವನ್ನು ಹಚ್ಚುವುದು ನನ್ನಿಂದಾಗದು,

ತಾಯೆ! ನಿಮ್ಮೋಪಾದಿ ರಾಜ
ಸ್ತ್ರೀಯರೆಂದಾ ನುಡಿಯೊಳಗೆ ಗಾಂ-
ಗೇಯ ಮುಳುಗನೆ? ಭೀಷ್ಮವಚನಕೆ ಬೇರೆ ಮೊಳೆಯುಂಟೆ?
ಕಾಯದಲ್ಪಸುಖಕ್ಕೆ ಘನನಿಜ
ಶ್ರೇಯಸವ ಕೆಡಿಸುವೆನೆ? ಎಲವದ
ಕಾಯಿಗೋಸುಗ ಕಲ್ಪವೃಕ್ಷವ ಕಡಿವನಲ್ಲೆ'ಂದ

ಎಂದು ಭೀಷ್ಮನೆಂದನು.

'ವಿಪತ್ತೊದಗಿದಾಗ ದೇವತೆಗಳು ಬೃಹಸ್ಪತಿಯನ್ನೂ ದಾನವರು ಶುಕ್ರಾಚಾರ್ಯರನ್ನೂ ಕುರಿತು ಕೇಳಿಕೊಳ್ಳುವಂತೆ ನಾನು ನಿನಗಲ್ಲದೆ ಇನ್ನಾರಿಗೆ ಹೇಳಿಕೊಳ್ಳಲಿ! ಇನ್ನು ತಿಳಿದಂತೆ ವರ್ತಿಸು. ಪರಂತು, ವಂಶರಕ್ಷಣೋಪಾಯವನ್ನು ಸಾಧಿಸು' ಎಂದು ಸತ್ಯವತಿಯು ಅಳುತಳುತ ತಿಳುಹಿದಳು.

ದೈವವಿಧಿ-ಧರ್ಮವಿಧಿಗಳೆಲ್ಲವನ್ನೂ ತಿಳಿದ ಭೀಷ್ಮನು ತಾನೂ ಅತ್ತುಕೊಂಡು, ಚೆನ್ನಾಗಿ ಪರ್ಯಾಲೋಚಿಸಿದನು. ಕೊನೆಗೆ 'ವಂಶ ರಕ್ಷಣೆಗಾಗಿ ಯಾವನಾದರೊಬ್ಬ ವೇದಜ್ಞನಾದ ಬ್ರಾಹ್ಮಣನನ್ನು ಕುರಿತು ಪರ್ಯಾಲೋಚಿಸಬಾರದೇಕೆ? ಎಂದು ಸೂಚಿಸಲು, ಆಗ ತಾನೆ, ಅಗತ್ಯ ತಿಳಿದಾಗ ತನ್ನನ್ನು ಸ್ಮರಿಸೆಂದು ಹಿಂದೆ ಅವಳಿಗೆ ಭಾಷೆಯಿತ್ತ ದ್ವೈಪಾಯನ ಋಷಿಯು ನೆನಪಾಗಿ, ಸತ್ಯವತಿಯು ಅವನನ್ನು ಸ್ಮರಿಸಿದಳು. ದಿವ್ಯ ಪುತ್ರನಲ್ಲವೆ! ಮಾತೆಯ ಕರೆಯನ್ನು ತಕ್ಷಣದಲ್ಲಿ ಕೇಳಿ ಅಲ್ಲಿಗೆ ಬಂದನು. ಈ ಪ್ರಮಾದವನ್ನೆಲ್ಲ ತಿಳಿದುಕೊಂಡನು. ಭೀಷ್ಮನು ಅವನನ್ನು ಕುರಿತು ಕುರುವಂಶವನ್ನು ಉಳಿಸುವ ಉಪಾಯವನ್ನು ಕೈಕೊಳ್ಳಬೇಕೆಂದು ವಿನಯ ದಿಂದ ಬೇಡಿಕೊಂಡನು. ಅವನ ವರದಿಂದ, ಅಂಬಿಕೆಯ ಗರ್ಭದಲ್ಲಿ ಜನ್ಮಾಂಧನಾದ ಧೃತರಾಷ್ಟ್ರನೂ, ಅಂಬಾಲಿಕೆಯ ಗರ್ಭದಲ್ಲಿ ವೀರಶ್ರೇಷ್ಠ ನಾದ ಪಾಂಡುವೂ, ಶೂದ್ರಸ್ತ್ರೀಯೊಬ್ಬಳಲ್ಲಿ ಪರಮಭಾಗವತನಾದ ವಿದು ರನೂ ಜನ್ಮಗ್ರಹಣ ಮಾಡಿದರು.

ಮೂವರೂ ಭ್ರಾತೃಪ್ಪುತ್ರರನ್ನು ಭೀಷ್ಮನು ತನ್ನ ಮಕ್ಕಳಂತೆಯೆ ಲಾಲಿಸಿಪಾಲಿಸಿದನು. ಒಂದು ಕಡೆಯಲ್ಲಿ ರಾಜ್ಯರಕ್ಷಣೆ, ಮತ್ತೊಂದು ಕಡೆ ಇವರ ಶಿಕ್ಷಣ! ಧೃತರಾಷ್ಟ್ರನು ಅಯುತ ಆನೆಗಳ ಬಲವುಳ್ಳವನು; ಆದರೆ ಕುರುಡನಾದುದರಿಂದ ಅದೇನೂ ಪ್ರಯೋಜನಕ್ಕೆ ಬಾರದಾಯಿತು. ಈ ದೋಷದ ಕಾರಣದಿಂದ, ಅವನೇ ಜ್ಯೇಷ್ಠನಾಗಿದ್ದರೂ, ರಾಜ್ಯಾಧಿಕಾರದಿಂದ ವಂಚಿತನಾದನು.

ದ್ವಿತೀಯ ಪುತ್ರನಾದ ಪಾಂಡುವನ್ನು ಹಸ್ತಿನಾನಗರದ ಸಿಂಹಾಸನದಲ್ಲಿ ಕುಳ್ಳಿರಿಸಿ, ಭೀಷ್ಮನು ರಾಜ್ಯಶಾಸನವನ್ನು ಮಾಡಿದನು; ಪ್ರಜೆಗಳನ್ನು ಕಾಪಾಡಿದನು. ಭೀಷ್ಮನ ಶಿಕ್ಷಣದಿಂದ ಪಾಂಡುವು ಅತ್ಯಂತ ಪರಾಕ್ರಮಶಾಲಿಯಾಗಿ ಬಳೆದನು. ತಾನು ಅರಸಾದರೂ ಪಾಂಡುವು ಅಣ್ಣನನ್ನು ಮನ್ನಿಸುತಿದ್ದನು. ದಿಗ್ವಿಜಯದಿಂದ ಗಳಿಸಿತಂದ ಧನರತ್ನಾದಿಗಳನ್ನು ಧೃತರಾಷ್ಟ್ರನಿಗೆ ಅರ್ಪಿಸುತಿದ್ದನು. ಧೃತರಾಷ್ಟ್ರನೂ ತಮ್ಮನನ್ನು ಬಹು ಪ್ರೀತಿಯಿಂದ ಕಾಣುತಿದ್ದನು.

ಹೀಗೆ ಭ್ರಾತೃಪ್ಪುತ್ರರು ಯೌವನಸ್ಥರಾಗುತ್ತಲೆ, ಭೀಷ್ಮನು ಗಾಂಧಾರ ರಾಜಕನ್ಯೆಯಾದ ಗಾಂಧಾರಿಯೊಡನೆ ಧೃತರಾಷ್ಟ್ರನಿಗೆ ವಿವಾಹ ಮಾಡಿಸಿದನು. ಯದುವಂಶದ ವಸುದೇವನಿಗೆ ಪಿತನಾದ ಶೂರಸೇನನು ತನ್ನ ಮಗಳಾದ ಪೃಥೆಯನ್ನು ಅಪುತ್ರಕನಾದ ಕುಂತೀಭೋಜನಿಗೆ ಸಾಕಣೆಗೆ ಕೊಟ್ಟಿದ್ದನು. ಕುಂತೀಭೋಜನು ಅವಳನ್ನು ಪಾಲಿಸಿದವನೆಂದು ಅವಳ ಹೆಸರು ಕುಂತೀದೇವಿಯೆಂದಾಯಿತು. ಇವಳ ರೂಪಗುಣಶೀಲಾದಿಗಳನ್ನು ಕೇಳಿದ ಭೀಷ್ಮನು ಪಾಂಡುವಿಗೆ ಇವಳೇ ಯೋಗ್ಯ ವಧುವೆಂದು ನಿಶ್ಚಯಿಸಿದ್ದನು. ಆಗಲೆ, ಕುಂತಿಯ ಸ್ವಯಂವರವೂ ಸಿದ್ಧವಾಗಿರಲು, ಭೀಷ್ಮನು ಪಾಂಡುವನ್ನು ಆ ಸ್ವಯಂವರಸಭೆಗೆ ಕಳುಹಿದನು. ಅಲ್ಲಿ ನೆರೆದಿದ್ದ ರಾಜರುಗಳಲ್ಲಿ ಪಾಂಡುವು ದೇವೇಂದ್ರನಂತೆ ಉಚ್ಚಾಸನವನ್ನೇರಿ ಕುಳಿತನು. ಗ್ರಹಗಳನ್ನು ಕಳೆಗುಂದಿಸುವ ದಿನಕರನಂತೆ ರಾಜರುಗಳು ಅವನ ಪಾಂಡು ತೇಜದಿಂದ ಮುಚ್ಚಿ ಮಬ್ಬಾದರು. ಇಂತಹ ಅಪೂರ್ವ ತೇಜಃಪುಂಜನಾದ ರಾಜಪುತ್ರನನ್ನು ಕುಂತೀದೇವಿಯು ಸ್ವಯಂವರಮಾಲೆಯಿಂದ ಸಿಂಗರಿಸಿ, ಅವನಿಗೆ ತಾನು ವಧುವಾದಳು. ಇದಾದ ಬಳಿಕ ಮದ್ರ ದೇಶಾಧಿಪನ ಸೋದರಿಯಾದ ಮಾದ್ರೀದೇವಿಯನ್ನು ಭೀಷ್ಮನು ಪಾಂಡುವಿಗೆ ಕೊಡಿಸಿ ವಿವಾಹಮಾಡಿಸಿದನು.

ಪಾಂಡುವಿಗೆ ಕುಂತಿಯಲ್ಲಿ ಯಮ, ವಾಯು, ಇಂದ್ರರ ಅನುಗ್ರಹದಿಂದ ಯುಧಿಷ್ಠಿರ-ಭೀಮ-ಅರ್ಜುನರೂ, ಮಾದ್ರಿಯಲ್ಲಿ ಅಶ್ವಿನೀಕುಮಾರರ ಅನುಗ್ರಹದಿಂದ ನಕುಲ-ಸಹದೇವರೂ ಪುತ್ರರಾದರು; ಇವರೆ ಪಂಚಪಾಂಡವರೆಂದು ಖ್ಯಾತರು. ಅತ್ತ ಗಾಂಧಾರಿಯಲ್ಲಿ ಧೃತರಾಷ್ಟ್ರನಿಗೆ ದುರ್ಯೋಧನನೆ ಮೊದಲಾದ ಪುತ್ರರು ಜನಿಸಿದರು; ಇವರೆ ಕೌರವರು.

ಹೀಗೆ ಬ್ರಹ್ಮಚಾರಿಯಾದ ಭೀಷ್ಮನು ಕೌರವ-ಪಾಂಡವರ ಜನನದಿಂದ **'ಕುರುಕುಲಪಿತಾಮಹ'**ನೆನಿಸಿದನು.

---

## ೯. ದಾಯ—ವಾದ

ಕೌರವ—ಪಾಂಡವರ ಎಳೆವಯಸ್ಸಿನಲ್ಲಿಯೆ ಪಾಂಡುನೃಪತಿಯು ಮೃತನಾದನು. ಆಗ ಈ ರಾಜಪುತ್ರರಿಗೆ ಪಿತಾಮಹನಾದ ಭೀಷ್ಮನು ತನ್ನಿಂದಾಗುವಷ್ಟು ಚೆನ್ನಾಗಿ ಅವರ ಆರೈಕೆ ನೋಡುತ್ತ ಬಂದನು. ಪಾಂಡವರಲ್ಲಿ ಸದ್ವ್ಯವಹಾರ ಬುದ್ಧಿಯು ಧಾರಾಳವಾಗಿದ್ದುದರಿಂದ ಭೀಷ್ಮನು ಅವರನ್ನು ಹೆಚ್ಚಾಗಿ ಮೆಚ್ಚುತಿದ್ದನು. ಯುಧಿಷ್ಠಿರನೆ ಈ ರಾಜಪುತ್ರರೆಲ್ಲರಲ್ಲಿ ಜ್ಯೇಷ್ಠನೂ ಶ್ರೇಷ್ಠನೂ ಎಂದು ಅವನು ತಿಳಿದು, ಅವನಿಗೆ ಯುವರಾಜಪದವನ್ನು ಕೊಟ್ಟನು. ಅದಕ್ಕಾಗಿ ದುರ್ಯೋಧನನು ಅಸಂತುಷ್ಟನಾದನು. ಕೂಟನೀತಿಜ್ಞನಾದ ಕುಟಿಲ (ಶಕುನಿ) ನನ್ನು ಕರೆಯಿಸಿ, ದುರ್ಯೋಧನನು ಗೋಪನದಲ್ಲಿ ಪರಾಮರ್ಶಿಸಿದನು. ಅವನ ಅಭಿಪ್ರಾಯದ ಪ್ರಕಾರ,—'ದಾಯವಾದಿಗಳಲ್ಲಿ ದಂಡನೀತಿಯೆ ನ್ಯವಹಾರ್ಯವು. ರಾಜ್ಯವೆಲ್ಲವನ್ನು ತನ್ನ ಸ್ವಾಧೀನಪಡಿಸಿಕೊಳ್ಳತಕ್ಕುದು. ಹಗೆಯನ್ನು ಬಾಲಕನೆಂದು ಉಪೇಕ್ಷಿಸಲಾಗದು. ವ್ಯಾಧಿ, ಅಗ್ನಿ, ರಿಪು, ಜಲ ಇವು ನಾಲ್ಕು ಪರಿಣಾಮದಲ್ಲಿ ಸಮಾನವಾಗಿವೆ. ಶತ್ರುವು ಬಲಿಷ್ಠನಾದರೆ ಅವನಲ್ಲಿ ವಿನಯವನ್ನು ಆಡತಕ್ಕುದು. ಶತ್ರುವನ್ನು ಸತತವೂ ತನ್ನ ಹೆಗಲಿಗೇರಿಸಿಕೊಂಡಿದ್ದು, ಅನುಕೂಲವಾದ ಸಮಯ ಒದಗಲು, ಅವನನ್ನು ಭೂತಲಕ್ಕೆ ಅಪ್ಪಳಿಸಬೇಕು' ಎಂದು ನಿರ್ಧಾರವಾಯಿತು.

ತಿಮಿರವಡಗಿದ ಲೋಕ, ಶಿಕ್ಷಾ
ಕ್ರಮಣವಡಗಿದ ದಂತಿ, ಕರ್ಮ
ಭ್ರಮೆಗಳಡಗಿದ ಯೋಗಿ, ರುಜೆಯಡಗಿದ ನರೋತ್ತಮನು ॥
ಹಿಮವಡಗಿದ ಸರೋಜದಂತಿಹು
ದಮಲಮತಿ ಕೇಳ್, ಪಗೆಗಳಡಗಿದ
ರಮರಪದವೆನಿಸುವುದು, ಚಿತ್ತೈಸೆಂದನಾ ಶಕುನಿ.

ಕಾಲವನು ಗೂಗೆಗಳು, ನಿರ್ಜರ
ರೇಳಿಗೆಯನಾ ದೈತ್ಯರುಗಳು, ತ
ಮಾಳಿ ರವಿಕಿರಣಗಳನಾ ಬಲುನಿದ್ದೆಯನು ಚೋರ ॥
ಕಾಲಭುಜಗನು ಗರುಡನುಳಿವನು
ತಾಳದಂಡದಿ, ಪಾಂಡವರು ನಿ
ನ್ನೇಳಿಗೆಯ ಸೈರಿಸರು, ಚಿತ್ತೈಸೆಂದನಾ ಶಕುನಿ.

ಈ ನಿರ್ಧಾರದಂತೆ, ದುರ್ಯೋಧನನು ಯುಧಿಷ್ಠಿರನನ್ನು ಹಸ್ತಿನಾಪುರದಿಂದ ಹೊರಡಿಸಿ, ತಾನೇ ಸರ್ವಾಧಿಕಾರಿಯಾಗಬೇಕೆಂದು ಬಗೆದನು. ಅದಕ್ಕಾಗಿ ಅವನನ್ನು ವಾರಣಾವತಕ್ಕೆ ಹೋಗಲು ಪ್ರೇರೇಪಿಸಿ, ಪಾಂಡವರನ್ನು ಜತುಗ್ರಹದಲ್ಲಿ ಸುಡಿಸಬೇಕೆಂದು ವ್ಯವಸ್ಥೆಮಾಡಿಸಿದನು. ವಿದುರನ ಪರಾಮರ್ಶೆಯ ದೆಸೆಯಿಂದ ಪಾಂಡವರು ಸುರಂಗದ ಮಾರ್ಗವಾಗಿ ಅಲ್ಲಿಂದ ಹೊರಬಿದ್ದು ಬದುಕಿಕೊಳ್ಳುವಂತಾಯಿತು. ಕುಂತಿಯೂ ಮಕ್ಕಳೂ ಅಲ್ಲಿಂದ ಪಲಾಯನಮಾಡಿ ಮುಂದೆ ಪಾಂಚಾಲನಗರವನ್ನು ಬ್ರಾಹ್ಮಣ ವೇಷದಿಂದ ಸೇರಲು, ಅಲ್ಲಿ ನೆರೆದಿದ್ದ ಸ್ವಯಂವರಸಭೆಯಲ್ಲಿ ಅರ್ಜುನನು ದ್ರೌಪದಿಯನ್ನು ಲಭಿಸಿಕೊಂಡನು. ಕುಂತಿಯ ನಿರ್ದೇಶದಿಂದ ಪಂಚ ಭ್ರಾತರೂ ಅವಳನ್ನು ಮದುವೆಯಾದರು. ಅಲ್ಲಿ ಸಮವೇತರಾಗಿದ್ದ ರಾಜರುಗಳು ಬ್ರಾಹ್ಮಣವೇಷಧಾರಿಯಾದ ಅರ್ಜುನನನ್ನು ಗೆದ್ದು, ದ್ರೌಪದಿಯನ್ನು ಸೆಳೆದುಯ್ಯಲು ಕಾದಾಡಿದರು. ಅರ್ಜುನನೊಬ್ಬನೇ ಅವರನ್ನು ಪರಾಜಿತರನ್ನಾಗಿ ಮಾಡಿದನು. ಆಗ ಗುಟ್ಟು ಬಯಲಾಗಿ, ಬ್ರಾಹ್ಮಣನು ಅರ್ಜುನನೆಂದು ಎಲ್ಲರಿಗೂ ತಿಳಿದುಬಂದಿತು. ಪಾಂಡವರು ತಾಯಿಯೊಡನೆ ದ್ರುಪದರಾಜನಲ್ಲೇ ನೆಲೆನಿಂತರು.

ಪಾಂಡವರು ಇನ್ನೂ ಜೀವಹಿಡಿದಿರುವರೆಂದು ತಿಳಿದೊಡನೆಯೆ ಭೀಷ್ಮನು ಎಲ್ಲವನ್ನೂ ಧೃತರಾಷ್ಟ್ರನಿಗೆ ತಿಳಿಯಹೇಳಿ, ರಾಜ್ಯವನ್ನೆರಡಾಗಿ ಪಾಲುಗೊಳಿಸಿ, ಒಂದು ಭಾಗವನ್ನು ದುರ್ಯೋಧನನಿಗೆ ಕೊಡಿಸಿದನು. ಅವನೇ ಹಸ್ತಿನಾಪುರದ ರಾಜನಾದನು. ಮತ್ತೊಂದರ್ಧವನ್ನು ಪಾಂಡವರಿಗೆ ಕೊಡಲಾಯಿತು. ಅವರು ಇಂದ್ರಪ್ರಸ್ಥದಲ್ಲಿ ನೂತನ ರಾಜಧಾನಿಯನ್ನು ನಿರ್ಮಾಣಮಾಡಿಕೊಂಡರು. ಅಲ್ಲಿ ಯುಧಿಷ್ಠಿರನೆ ಅರಸನಾದನು. ಇದರ ದೆಸೆಯಿಂದ ಕೌರವಪಾಂಡವರೊಳಗಣ ಮನೋಮಾಲಿನ್ಯವು ಕೆಲದಿನಗಳ ತನಕ ಅಡಗುವಂತಾಯಿತು.

ಶ್ರೀಕೃಷ್ಣನ ಪರಾಮರ್ಶೆಯಿಂದ ಯುಧಿಷ್ಠಿರನು ರಾಜಸೂಯ ಯಾಗವನ್ನು ಕೈಕೊಂಡನು. ಅವನ ನಾಲ್ವರು ಸೋದರರೂ ನಾಲ್ದಿಕ್ಕುಗಳಲ್ಲಿನ ರಾಜರುಗಳೆಲ್ಲರನ್ನು ಗೆದ್ದು, ಅವರಿಂದ ಹೇರಳವಾದ ಧನವನ್ನು ತಂದರು. ಅವರೆಲ್ಲರೂ ಯುಧಿಷ್ಠಿರನಿಗೆ ಅಧೀನರಾದರು. ಯುಧಿಷ್ಠಿರನು ಭಾರತವರ್ಷದ ಸಮ್ರಾಟನಾದನು.

ಯುಧಿಷ್ಠಿರನ ಧನರತ್ನಸಂಪತ್ತನ್ನೂ ಅಭಿವೃದ್ಧಿಯನ್ನೂ ದುರ್ಯೋಧನನು ನೋಡಿ ಮತ್ಸರಗೊಂಡನು. ಮತ್ಸರವು ಅವನನ್ನು ಸುಡಲಾರಂಭಿಸಿತು. ಪಾಂಡವರನ್ನು ಹೇಗೆ ಪುನಃ ರಾಜ್ಯದಿಂದೋಡಿಸಲಿ ಎಂಬದನ್ನು ಶಕುನಿಯೊಡನೆ ಸರ್ವದಾ ವಿಚಾರಿಸುತ್ತಿರುವುದೆ ಅವನ ಉದ್ಯೋಗವಾಯಿತು. ಶಕುನಿಯ ಸಹಾಯದಿಂದ ಕಪಟದ್ಯೂತವನ್ನಾಡಿ ಗೆದ್ದು, ಹನ್ನೆರಡು ಸಂವತ್ಸರಗಳ ಪರ್ಯಂತರವೂ ಅವರು ವನವಾಸಕ್ಕೆ ತೆರಳಬೇಕೆಂದು ಅವರನ್ನು ಹೊರಡಿಸಿದನು. ಅದೂ ಅಲ್ಲದೆ ಆ ಅವಧಿಯು ಮುಗಿದ ಬಳಿಕ, ಮತ್ತೊಂದು ವರುಷ ಅವರು ಅಜ್ಞಾತಭಾವದಿಂದ ಇರಬೇಕೆಂದೂ ಶರ್ತವಾಯಿತು. ಅದೊಂದು ವರುಷದಲ್ಲಿ ಕೌರವರು ಅವರನ್ನು ಶೋಧಿಸಿ ತೆಗೆದರೆಂದರೆ, ಪುನಃ ಅವರು ಹನ್ನೆರಡು ಸಂವತ್ಸರ ಕಾಲ ಅರಣ್ಯವಾಸಕ್ಕೆ ಸೇರಬೇಕೆಂದಾಯಿತು. ಆ ಶರ್ತಗಳ ಪ್ರಕಾರ ಪಾಂಡವರು ವನವಾಸವನ್ನು ಅನುಭವಿಸಿದಲ್ಲಿ, ಅವರ ರಾಜ್ಯವನ್ನು ಅವರಿಗೇ ಮರಳಿ ಕೊಡುವುದಾಗಿ ಕೌರವರ ವಾಗ್ದಾನವು!

ಸತ್ಯವಾದಿಯಾದ ಯುಧಿಷ್ಠಿರನು ತಮ್ಮಂದಿರೊಡನೆಯೂ ಪತ್ನಿಯೊಡನೆಯೂ ಹನ್ನೆರಡು ಸಂವತ್ಸರಗಳ ತನಕ ಕಾಡಾಡಿಯಾಗಿ,

ಮತ್ತೊಂದು ವರುಷವನ್ನು ಗುಪ್ತಭಾವದಿಂದ ವಿರಾಟರಾಯನಲ್ಲಿ ಕಳೆದನು. ಅವರನ್ನು ಶೋಧಿಸಿ ತೆಗೆವುದು ಕೌರವರಿಗೆ ದುಸ್ಸಾಧ್ಯವಾಯಿತು. ಆದುದರಿಂದ, ಹಿಂದಣ ವಾಗ್ದಾನದಂತೆ, ತಮ್ಮ ರಾಜ್ಯವನ್ನು ತಮಗೆ ಮರಳಿ ಕೊಡಬೇಕಾಗಿ ಪಾಂಡವರು ದುರ್ಯೋಧನನಲ್ಲಿ ವಿಜ್ಞಾಪಿಸಿ ಕೊಂಡರು. ಅವನು ಮಾತ್ರ ಯುದ್ಧಮುಖದಿಂದಲ್ಲದೆ ರಾಜ್ಯವನ್ನು ಕೊಡಲಾರೆನೆಂದನು.

ಯುದ್ಧದಿಂದ ಆಪ್ತೀಯರಾದವರಿಗೆ ಮರಣ ಉಂಟಾಗುವುದೆಂದೂ ಪ್ರಜೆಗಳಿಗೆ ಕಷ್ಟಗಳು ಉಂಟಾಗುವುದೆಂದೂ ಅರಿತುಕೊಂಡ ಯುಧಿಷ್ಠಿರನು ಐದು ಸೋದರರಾದ ತಮಗೆ ಐದೂರುಗಳನ್ನು ಕೊಟ್ಟರೆ ಸಾಕೆಂದು ಶ್ರೀಕೃಷ್ಣನ ಮೂಲಕ ಕೌರವರಿಗೆ ತಿಳುಹಿದನು; ಆದರೆ,—

'ನೆಲದೊಳರ್ಧವನೀವುದಿರಲೀ
ಸ್ಥಳವನೈದನು ಮುನ್ನಕೊಡೆ; ಎ-
ನ್ನಿಳೆಯೊಳ್ಪಾದವ ಮೆಟ್ಟಲೀಯೆ; ಅದೇಕೆ ಕೈವಾರಾ? ॥
ನೆಲನ ಕಡೆಯಲಿ ಮುಳ್ಳುಮೊನೆಯು-
ತ್ಸಳಿಪ ಧರಣಿಯನಿತ್ತೆನಾದರೆ
ಬಳಿಕ ನೀ ನಗು; ಹೋಗು, ಕದನಕೆ ಕೊಂಡು ಬಾ,' ಎಂದ.

ಹೀಗೆ, ದುರ್ಯೋಧನನು ಯುದ್ಧದಲ್ಲಲ್ಲದೆ ಸೂಜಿಯ ಮೊನೆ ಚುಚ್ಚುವಷ್ಟು ಸ್ಥಾನವನ್ನಾದರೂ ಕೊಡಲು ಸಮ್ಮತಿಸಲಿಲ್ಲ.

ಈ ವ್ಯವಹಾರವು ಭೀಷ್ಮನಿಗೆ ರುಚಿಸಲಿಲ್ಲ. ಭೀಷ್ಮನು ಪ್ರತಿಯೊಂದು ಕಾರ್ಯಕ್ಕೂ ದುರ್ಯೋಧನನಿಗೆ ಸದುಪದೇಶವನ್ನು ಕೊಡುತ್ತಿದ್ದನು. ದುರ್ಯೋಧನನಿಗೆ ಅದು ಒಪ್ಪುತ್ತಿರಲಿಲ್ಲ. ಆದರೆ, ಹಾಗೆಂದು ತಾನು ಸತ್ಯವತಿಗೆ ಕೊಟ್ಟ ಮಾತನ್ನು ಭೀಷ್ಮನು ಅಲ್ಲಗಳೆಯಲಾಗುವುದೆ? ಯಾರು ಯಾವಾಗ ಹಸ್ತಿನಾಪುರದ ಸಿಂಹಾಸನದ ಮೇಲೆ ರಾಜರಾಗಿ ಆಳುವರೊ, ತಾನು ಅವರಿಗೆ ಅನುಗತನಾಗಿದ್ದು ರಾಜ್ಯವನ್ನು ರಕ್ಷಿಸುವೆ ನೆಂದು ಅವನ ವಚನವಲ್ಲವೆ? ಅದಕ್ಕಾಗಿಯೆ ಆಗಾಗ ದುರ್ಯೋಧನನಿಗೆ ಬೋಧಿಸಿ, ಮುಂದಾಗಬಹುದಾದ ಗೃಹಯುದ್ಧವನ್ನು ನಿವಾರಣೆಮಾಡಲು ಪ್ರೇಚಾಡಿದನು.

ಭೀಷ್ಮನು ಈ ರೀತಿಯಾಗಿ ಹಿತೋಪದೇಶವನ್ನು ಮಾಡಿದನು:—

ಸೋದರರಾದವರು ತಮ್ಮೊಳಗೆ ಜಗಳಾಡುತ್ತಿರುವುದು ಲೋಕ ದೃಷ್ಟಿಗೆ ಹಿತವೆನಿಸುವುದಿಲ್ಲ. ಅಂತಹ ಯುದ್ಧದಿಂದ ಮಾನವೂ ಬೆಳೆಯದು. ಯಶಸ್ಸೂ ಉಂಟಾಗಲಾರದು. ಸೋತರೂ ಗೆದ್ದರೂ ಪರಿಣಾಮವೆಲ್ಲ ಒಂದೇ—ಪೌರುಷವಿಲ್ಲ; ಪುರುಷಾರ್ಥವಿಲ್ಲ. ಪಾಂಡವರು ಎಂದಾದರೂ ನಿಮಗೆ ಕಷ್ಟಕೊಟ್ಟವರೂ ಅಲ್ಲ, ಕೊಡುವವರೂ ಅಲ್ಲ. ನೀವೆ ನಿಮ್ಮಿಚ್ಛೆಗೆ ಬಂದಂತೆ ಯಾವ ಭಾಗವನ್ನು ಅವರಿಗೆ ದಾನ ಮಾಡುವಿರೊ, ಅದನ್ನೆ ಅವರು ತೃಪ್ತಿಯಿಂದ ಉಪಭೋಗಿಸುವರು. ಅವರು ಎಂದೂ ಸತ್ಯಭ್ರಷ್ಟ ರಾದುದೂ ಇಲ್ಲ; ಆಗುವುದೂ ಇಲ್ಲ. ನಿಮ್ಮೆದಿರಿನಲ್ಲಿ ಯಾವ ಪ್ರತಿಜ್ಞೆ ಯನ್ನು ಅವರು ಮಾಡಿದರೊ ಅದನ್ನೆ, ಅವರು ಯಥಾರ್ಥವಾಗಿ ಕೈ ಗೊಂಡು ಪೂರಯಿಸಿರುವರು. ಪ್ರತಿಜ್ಞೆ ಮುಗಿಸಿ ಅವರು ಮರಳಿದರೆ, ಅವರಿಗೆ ಅರ್ಧರಾಜ್ಯವನ್ನು ಕೊಡುವುದಾಗಿ ನೀವು ಮಾತುಕೊಟ್ಟಿರುವಿರಿ. ಆಗ ಆಡಿದ ಆ ಮಾತನ್ನೆ ಈಗ ಮಾಡಿಕೊಟ್ಟು, ನೀವು ಅವರನ್ನೂ ನಿಮ್ಮನ್ನೂ ಕೃತಾರ್ಥರನ್ನಾಗಿ ಮಾಡಿಕೊಳ್ಳಿರಿ.

'ಪಾಂಡವರನ್ನು ಶತ್ರುಗಳನ್ನಾಗಿ ನೀವು ಭಾವಿಸುವಿರಿ. ಅವರು ನಿಮಗೆಲ್ಲಿ ಹಗೆತನವನ್ನು ತೋರಿಸಿದರು? ನಿಮಗೆ ಎಂದು ಅವರು ಅನಿಷ್ಟವನ್ನು ಉಂಟುಮಾಡಿದರು? ನೀವು ಅವರನ್ನು ವಾರಣಾವತದಲ್ಲಿ ಸುಡಿಸಲೆತ್ನಿಸಿದಿರಿ; ಅವರು ಹೇಗೂ ಬದುಕಿಕೊಂಡು ಬ್ರಾಹ್ಮಣವೇಷ ಧಾರಿಗಳಾಗಿ ತಮ್ಮ ಜೀವನ ಸಾಗಿಸಿದರೇ ಹೊರತಾಗಿ, ನಿಮಗೆ ಪ್ರತೀ ಕಾರವೇನನ್ನೂ ಸಾಧಿಸಲಿಲ್ಲ. ದ್ರೌಪದಿಯ ಸ್ವಯಂವರ ಕಾಲದಲ್ಲಿ ಸಮವೇತರಾದ ಎಲ್ಲ ರಾಜರನ್ನೂ ಪರಾಜಯಗೊಳಿಸಿ ಅವರು ದ್ರೌಪದಿ ಯನ್ನು ಲಭಿಸಿಕೊಂಡಂದು, ಅವರಿನ್ನೂ ಜೀವಿತರಾಗಿದ್ದಾರೆಂದು ಅವರಿಗೆ ನೀವು ರಾಜ್ಯಾಂಶವನ್ನು ಕೊಡಲು, ಅವರು ಇಂದ್ರಪ್ರಸ್ಥದಲ್ಲೆ ರಾಜಧಾನಿ ಯನ್ನು ರಚಿಸಿಕೊಂಡು ರಾಜಸೂಯ ಯಜ್ಞವನ್ನು ಮಾಡಿದರಲ್ಲವೆ? ನಾಲ್ವರು ಸೋದರರು ನಾಲ್ದಿಕ್ಕುಗಳಲ್ಲಿ ರಾಜರುಗಳನ್ನು ಪರಾಜಯ ಗೊಳಿಸಿ, ಅವರಿಂದ ಧನರತ್ನಗಳನ್ನು ಕಪ್ಪವಾಗಿ ಸಂಗ್ರಹಿಸಿ ತಂದು, ಅವರನ್ನು ತಮಗೆ ಅಧೀನರಾಗುವ ಹಾಗೆ ಮಾಡಿಕೊಂಡ ಸಮಯದಲ್ಲಿ, ನಿಮ್ಮ ರಾಜ್ಯದ ಮೇಲಾಗಲಿ ನಿಮ್ಮ ಮೇಲಾಗಲಿ ಅವರು ಅಧಿಕಾರ ನಡೆಸಲೆತ್ನಿಸಿ ದರೇ? ನಿಮ್ಮನ್ನು ಕೆಳರಾಜರೆಂದು ಜನರೆದಿರಿನಲ್ಲಿ ಹೀನಯಿಸಿದರೆ? ಕಪಟ

ಜೂಜಿನಲ್ಲಿ ಅವರ ರಾಜ್ಯಸಂಪತ್ತನ್ನು ನೀವು ಸೆಳೆದುಕೊಂಡು, ಸಭಾ ಮಧ್ಯದಲ್ಲಿ ದ್ರೌಪದಿಯ ಮಾನಭಂಗವನ್ನು ನೀವು ಮಾಡಿದಂದು, ಅವರು ಆಗಲೇ ಆದರೂ ನಿಮಗೆ ಯಾವ ಅನಿಷ್ಟವನ್ನೂ ಸಾಧಿಸಿದರೇ? ಪ್ರತಿಜ್ಞಾ ಪಾಶಬದ್ಧರಾಗಿ ಅವರು ವನವಾಸಕ್ಕೆ ತೆರಳಿದರು. ಜಾತಿಕ್ರೋಧವು ಅವರಲ್ಲಿದ್ದಿದ್ದರೆ ಗಂಧರ್ವನ ಕೈಯಲ್ಲಿ ಸಿಕ್ಕಿದ್ದ ನಿಮ್ಮನ್ನು ಅವರು ಬಿಡಿಸ ಬರುತಿದ್ದರೆ? ನಿಮ್ಮನ್ನು ಇಷ್ಟು ಬಗೆಯಲ್ಲಿ ಕ್ಷಮಿಸಿದವರನ್ನು, ಈ ರೀತಿ ಉಪಕಾರ ಮಾಡಿದವರನ್ನು, ನೀವು ಇಂದು ಶತ್ರುಗಳೆಂದು ಭಾವಿಸುವುದೆ? ನಿಮ್ಮ ಮಿತ್ರರೆಂದರೆ ಕರ್ಣ-ಶಕುನಿಗಳೆ?

'ಇನ್ನೂ ಕೇಳಿರಿ:—ಪಂಚಪಾಂಡವರನ್ನು ಕೊಂದು ಅವರ ರಾಜ್ಯ ವನ್ನು ಸೆಳೆದುಕೊಳ್ಳಲು ನೀವು ಪೇಚಾಡುವಿರಂತೆ! ಪಂಚಪಾಂಡವರ ಮಾತಿರಲಿ, ಒಬ್ಬ ಅರ್ಜುನನನ್ನೆ ಜಯಿಸಬಲ್ಲ ವೀರನಾರೂ ಇದುವರೆಗೆ ಹುಟ್ಟಿರುವುದೇ ಇಲ್ಲ. ಅದು ನನ್ನಿಂದಾಗದು; ಅವನ ಗುರುವಾದ ದ್ರೋಣಾಚಾರ್ಯರಿಂದಲೂ ಆಗದು; ನಿಮಗೆ ಮಿತ್ರನಾದ ಪ್ರಧಾನವೀರ ನಾದ ಆ ಕರ್ಣನಿಂದಲೂ ಸಾಗದು, ಕುರುಸೈನ್ಯದ ಸಮವೇತಶಕ್ತಿಯಿಂದ ಲಾದರೂ ಅವನನ್ನು ಗೆಲ್ಲುವುದು ಅಸಾಧ್ಯವು.

'ಇದಕ್ಕೂ ಪ್ರಮಾಣ ಬೇಕಾಗಿದೆಯೆ? ದ್ರೌಪದಿಯ ಸ್ವಯಂವರ ಕಾಲದಲ್ಲಿ ಪೃಥ್ವಿಯಲ್ಲಿದ್ದ ರಾಜಶಕ್ತಿಯನ್ನೆ ಅರ್ಜುನನು ಏಕಾಂಗನಾಗಿ ಮೂಲೆಗೊತ್ತಿದನಲ್ಲವೆ? ಆ ಗಂಧರ್ವನ ಕೈಯಿಂದ ನಿಮ್ಮ ಮಿತ್ರ ಕರ್ಣನು ಕುರುಸೈನ್ಯಗಳ ಸಹಾಯದಿಂದಲಾದರೂ ನಿಮ್ಮನ್ನು ಉದ್ಧರಿಸಲಾರದಿರಲು, ಅರ್ಜುನನೊಬ್ಬನು ಆ ಗಂಧರ್ವನನ್ನೆ ಬಂದಿಯಾಗಿ ಹಿಡಿದು ನಿಮ್ಮನ್ನು ಸೆರೆಬಿಡಿಸಿದನಲ್ಲವೆ?

'ಒಬ್ಬ ಅರ್ಜುನನನ್ನು ನೀವು ಇದಿರಿಸಲಾರಿರಿ; ಈಗಲಂತೂ ದ್ರುಪದರಾಜನೂ ವಿರಾಟರಾಜನೂ ಪಾಂಡವರ ವಶವರ್ತಿಗಳಾಗಿರುವರು. ಅವರೊಡನೆ ಭಾರತವರ್ಷದೊಳಗಣ ಬೇರೆ ಬೇರೆ ದೇಶಾಧಿಪತಿಗಳೂ ಸೇರಿರುವರು. ಈಗ ಅಂತಹ ಪ್ರಚಂಡಶಕ್ತಿಯನ್ನು ನೀವು ಹೇಗೆ ಮುರಿಯ ಬಹುದು? ವಿಶೇಷವೆಂದರೆ, ಶ್ರೀಕೃಷ್ಣನೆ ಅವರ ಪಕ್ಷದಲ್ಲಿರುವನು. ಅವನು ಧರ್ಮಕ್ಕೂ ಆಶ್ರಯನು. ಶ್ರೀಕೃಷ್ಣನಿರುವಲ್ಲಿ ಧರ್ಮವೂ, ಧರ್ಮವಿರುವಲ್ಲಿ ಜಯವೂ ವಾಸ್ತವವೆಂದು ವೇದವಚನವು. ಹೀಗಾಗಿ,

ಪಾಂಡವರಿಗೆ ಜಯವಾಗುವುದು ನಿಶ್ಚಯವು. ಅದುಕಾರಣ ಯುದ್ಧವನ್ನು ಸಾಧಿಸಿಕೊಳ್ಳಬೇಡಿರೆಂದು ನಿಮಗೆ ಸಾರಿ ಹೇಳುವೆನು. ಪಾಂಡವರ ರಾಜತ್ವವು ಅವರಿಗೆ ಸಲ್ಲಲಿ, ಉಭಯರೂ ಸುಖವಾಗಿ ಸದ್ಭಾವದಿಂದ ಬಾಳಿರಿ.'

ಆದರೆ ಕೇಳುವವರಾರು? ದ್ರೋಣನೂ ಕೃಪನೂ ಭೀಷ್ಮನ ಮಾತುಗಳ ಅಭಿಪ್ರಾಯವನ್ನು ಎಷ್ಟೋ ಬಗೆಯಾಗಿ ಪುಷ್ಟೀಕರಿಸಿದರು. ಆದರೆ ಎಷ್ಟೆಂದರೂ ದುರ್ಯೋಧನನ ಮಾತಿನ ಸ್ವರವೊಂದೇ,—'ಯುದ್ಧದಲ್ಲಲ್ಲದೆ ಸೂಚ್ಯಗ್ರಸ್ಥಾನವನ್ನಾದರೂ ಕೊಡೆನು!' ಯುದ್ಧವೇ ಆಗಬೇಕೆಂದು ಇತ್ತಂಡದಲ್ಲಿಯೂ ನಿಶ್ಚಯವಾಯಿತು.

---

## ೧೦. ಕುರುಕ್ಷೇತ್ರ.

'ಮಹಾಯುದ್ಧವೇ ದಾಯವಾದವನ್ನು ನಿಷ್ಕರ್ಷಿಸಲಿ' ಎಂದು ಸ್ಥಿರವಂತೂ ಆಯಿತು. ಬೇಡಿಕೊಳ್ಳುತಿದ್ದೇ ಇಷ್ಟೊದಿನ ಹೇಡಿಗಳಾಗಿಯೂ ಕ್ಷಾತ್ರಧರ್ಮವನ್ನು ಮರೆತವರಾಗಿಯೂ ಪಾಂಡವರಿಲ್ಲವೆಂದು ತೋರಿಸಿಕೊಡುವುದಕ್ಕೆ, ಯುದ್ಧರಂಗಕ್ಕೆ ಪಾಂಡವರೂ ಪಾಂಡವ ಸಹಾಯಕರೂ ಮೊದಲಾಗಿ ನೆರೆದರು. ಹಗೆಗಳ ದಂಡು ಕುರುಭೂಮಿಗೆ ಬಂದಿಳಿದಿದೆ ಎಂದು ತಿಳಿದೊಡನೆ ದುರ್ಯೋಧನನು ತನ್ನಾಪ್ತಮಂತ್ರಿಗಳನ್ನು ತನ್ನ ಏಕಾಂತಭವನಕ್ಕೆ ಕರೆಯಿಸಿದನು. ಸೂರ್ಯಪುತ್ರನಾದ ಕರ್ಣನು, ಗುರುಪುತ್ರನಾದ ಅಶ್ವತ್ಥಾಮನು, ಶಲ್ಯನು, ದ್ರೋಣಾಚಾರ್ಯನು, ಸೌಬಲನು, ಕೃಪನು ಮೊದಲಾದವರೂ ಅಲ್ಲಿಗೆ ಬಂದು ಅತ್ಯವಸರದಿಂದ ನಡುರಾತ್ರಿಯಲ್ಲಿ ಸಭೆಕರೆಯಿಸಿದ ಕಾರಣವನ್ನು ಹೇಳಬೇಕೆಂದರು. 'ದುರ್ಜನರಾದ ಪಾಂಡವರು ನಂದಗೋಪನ ಮಗನ ಚಾಡಿಯ ಕಪಟತೆಯನ್ನು ತಿಳಿಯದೆ ತಾವೇ ದೊಡ್ಡ ಪರಾಕ್ರಮಶಾಲಿಗಳೆಂದು ಯುದ್ಧಸನ್ನಾಹ ಮಾಡಿ ಕುರುಕ್ಷೇತ್ರಕ್ಕೆ ಸೈನ್ಯಸಮೇತ ಬಂದಿಳಿದಿರುವರು. ಈ ಪಾಪಿಗಳನ್ನು ಕೊಂದು, ಅಪಕೀರ್ತಿ ಗಳಿಸಬೇಕಾಯಿತಲ್ಲ ಎಂಬುದೊಂದೇ ಚಿಂತೆಯು! ಈ ಕಾಡಾಡಿಗಳಿಗೆ ಏನೆನ್ನಲಿ? ಹಳ್ಳೀ ಕುರುಬರ ಸಂತೆಯನ್ನು ಕಟ್ಟಿ

ಕೊಂಡು ನಮ್ಮೊಡನೆ ಯುದ್ಧಮಾಡಿ, ಯುಧಿಷ್ಠಿರನು ಸಾಮ್ರಾಜ್ಯದ ಕಿರೀಟಕ್ಕಾಗಿ ಹಣೆ ಚಾಚಿ ಬಂದಿರುವನಂತೆ!' ಎಂದು ದುರ್ಯೋಧನನೆಂದನು.

ಕೌರವಮಿತ್ರನಾದ ಕರ್ಣನು ಎಲ್ಲರಿಗೂ ಮೊದಲಾಗಿ ಎದ್ದನು. 'ಕೌರವೇಂದ್ರಾ, ನನಗೆ ವೀಳೆಯವನ್ನು ಕೊಡಬೇಕು. ಪಾಂಡವರ ಸೇನಾಸಾಗರವನ್ನು ಕಲಕುವೆನು; ಯುದ್ಧಕ್ಕಾಗಿ ಹದ್ದುಮೀರಿದ ಕುಠಾರರ ತಲೆಗಳನ್ನು ತೇರುಗಳಲ್ಲಿ ರಾಶಿರಾಶಿ ಒಟ್ಟಿ ಕಳುಹುವೆನು; ಇಂತಹರನ್ನು ಕೊಲ್ಲುವುದಕ್ಕೆ ನಿನ್ನ ಊಳಿಗದ ಆಳುಗಳು ಸಾಕಲ್ಲವೆ?' ಎಂದು ಪೌರುಷದಿಂದ ನುಡಿದನು.

ದ್ರೋಣನು ಪಾಂಡವರ ಶಕ್ತಿಯನ್ನು ಅಲ್ಲಗಳೆವ ಕರ್ಣನ ಮಾತುಗಳಿಗೆ ತಲೆದೂಗಿದನು. 'ಎಂತಹ ಮರುಳಿದು! ಅಕಟಾ, ಕೌರವಾನ್ವಯವು ನಿರ್ಮೂಲವಾಗುವ ಉದ್ಯೋಗವಲ್ಲವೆ ಇದು? ಪಾಂಡವರನ್ನು ಅವರ ಬೆನ್ನಿನ ಹಿಂದಕ್ಕೆ ಧಿಕ್ಕರಿಸಿ ಬಗಳುವ ಕರ್ಣನನ್ನು ಕೇಳಿರಿ. ಅಹ! ಇವನು ಎಂದೊ ಪಾಂಡವರನ್ನು ಕೊಂದಿರುವನು! ಇನ್ನು ಯುದ್ಧವೆಲ್ಲಿದೆ? ಗಂಧರ್ವನು ಕೌರವನನ್ನು ಸೆರೆಹಿಡಿದಾಗ ಇವನೇ ಸೆರೆಬಿಡಿಸಿದವನಲ್ಲವೆ? ಲೋಕದಲ್ಲಿ ಸಾಹಸಿಗಳೆಂತೂ ಇಲ್ಲ. ಕೃಷ್ಣನು ಗೋಪಾಲನು; ಪಾಂಡವರು ಅಡವಿಯ ಮೋಹುಕಾರರು. ಅವರ ಸಹಾಯಕ್ಕೆ ಒದಗಿರುವ ರಾಜಪುತ್ರರೆಲ್ಲರೂ ಅದೊಂದು ಹಿಂಡು ಮಾತ್ರವೆ. ವ್ಹ! ಊಳಿಗದ ಆಳುಗಳನ್ನು ಕಳುಹಿ ಯುದ್ಧದಲ್ಲಿ ಗೆದ್ದು ಸುಖದಲ್ಲಿರುವುದೇ ಸುಲಭವಲ್ಲವೆ? ಇನ್ನು ಕರ್ಣನಿಗೆ ವೀಳೆಯವೇತಕ್ಕೆ ಬೇಕು? ಆದರೆ, ಸುಯೋಧನಾ! ಈ ಯುದ್ಧದಿಂದ ಸಾಧಕವೇನೆಂದು ತಿಳಿಯದಾಗಿದೆ. ಅವರ ಬಲವು ಪ್ರಬಲವಾಗಿದೆ. ಭೀಮಾರ್ಜುನರು ಸಾಮಾನ್ಯ ಕಾದಾಳುಗಳಲ್ಲ. ಕೃಷ್ಣನ ತಂತ್ರಶಕ್ತಿಯು ಅವರ ಪಕ್ಷದಲ್ಲಿರುವಾಗ, ಧರ್ಮಬಲವುಳ್ಳ ಪಾಂಡವರು ಸೋತರೆ, ಅದಕ್ಕಿಂತಲೂ ಹೆಚ್ಚಿನ ಆಶ್ಚರ್ಯವು ಲೋಕದಲ್ಲಿದ್ದೀತೆ? ಸಂಧಾನಕ್ಕಾಗಿ ಬಂದ ಕೃಷ್ಣನನ್ನು ನೀನು ಮನ್ನಿಸದಂತೆ ಸಾಧಿಸಿದ ಈ ನುಸಿಗಳ ಮಾತನ್ನು ಕೇಳಿ, ಇಲ್ಲಿಯ ವರೆಗೂ ಬರಬೇಕಾಯಿತಷ್ಟೆ. ಇನ್ನು ಅವರಿಗೆ ಅಸುರಾಂತಕನು ಸಹಾಯಕ್ಕಿರುವ ಹಾಗೆಯೆ, ನೀನು ಗಂಗಾಪುತ್ರನ ಸಹಾಯವನ್ನು ಸಾಧಿಸಿಕೊಂಡರೆ ಮಾತ್ರ, ನೀತಿಗೆ ನೀತಿಯನ್ನು ಇದಿರಿಸಿ, ಕೆಲದಿನ ಯುದ್ಧಕಾಲವನ್ನು ಕಳೆಯಬಹುದು. ಅವರಿವರ

ಮಾತುಗಳಿಗೆ ಬೆಲೆಯಿಲ್ಲ' ಎಂದು ದ್ರೋಣನು ಯಥಾರ್ಥವಾದ ಅಭಿಪ್ರಾಯವನ್ನು ತಿಳುಹಿದನು.

ದುರ್ಯೋಧನನು ಇದಕ್ಕೊಪ್ಪಿದನು. ಭೀಷ್ಮನಿಗೆ ಸೇನಾನಾಯಕತ್ವವನ್ನು ವಹಿಸಿಕೊಟ್ಟು ಪಟ್ಟಕಟ್ಟುವುದಾಗಿ ನಿಶ್ಚಯವಾಯಿತು. ಆಗ, ತನ್ನ ಮಗನನ್ನು ರಾಜಸಭೆಯಲ್ಲಿ ಸಿಂದಿಸಿದರಲ್ಲಾ ಎಂದು ದುಃಖದಿಂದ ಸೂರ್ಯನು ಮುಖವನ್ನು ಮರೆಯಲ್ಲಿರಿಸಿದನೊ ಎಂಬಂತೆ ಕತ್ತಲು ಕವಿಯಿತು.

ಚಿಂತಾಭಾರದಿಂದ ಬಾಡಿದ ಮುಖವುಳ್ಳ ದುರ್ಯೋಧನನು ರಾತ್ರಿಯಲ್ಲಿ ಭೀಷ್ಮನಿರುವಲ್ಲಿಗೆ ತೆರಳಿದನು. 'ಪಿತಾಮಹನೆ! ಏನೆನ್ನಲಿ? ಪಾಂಡವರು ಚಿಕ್ಕದೊಂದು ಸೈನ್ಯದೊಡನೆ ಕುರುಭೂಮಿಗೆ ಬಂದಿಳಿದಿರುವರು. ಪಿಸುಣನಾದ ಹರಿಯು ಅವರೊಡನೆ ಮನಃಕಷಾಯವನ್ನು ಬೆಳೆಸಬೇಕೆಂದೇ ರಾಜ್ಯದಲ್ಲೊಂದಂಶವನ್ನು ಬೇಡಿ ಕಲಹವನ್ನು ಉಂಟುಮಾಡಿರುವನು; ನೀವು ತ್ರಿನೇತ್ರನಿಗೆ ಸಮಾನರಾದವರು. ನಿಮ್ಮನ್ನು ಗೆಲ್ಲುವವರಾರು? ನೋಡಿದಿರಾ! ಆ ಧರ್ಮರಾಯನ ಮರುಳುತನವನ್ನು?' ಎಂದು ದುರ್ಯೋಧನನೆನ್ನಲು, 'ಸರಿ! ಪಾಂಡವರು ಬಂದರೆಂದು ನಿನ್ನವರು ನಿನಗೆ ಸುದ್ದಿಯನ್ನು ತಂದರೇ? ನಿನ್ನವರು ನಿನಗೆ ಯಾವ ಆಲೋಚನೆ ಹೇಳಿದರು? ಕರ್ಣಾದಿನಾಯಕರು ಏನೆಂದು ಭಾಷೆಗೊಟ್ಟರು? ಅದಿರಲಿ, ಅವರು ಬಂದುದರಲ್ಲಿ ಹೆಚ್ಚಿನದೇನು? ಎಷ್ಟು ಕಾಲ ತಾನೆ ಅವರು ನವೆಯಲಿ? ಶ್ರೀಕೃಷ್ಣನು ಈ ಲೋಕಕ್ಕೇ ಗುರುವು. ಅವನಿದಿರಿನಲ್ಲಿ ನನ್ನಂತಹರಿಗೆ ಜಯ ದೊರೆವುದುಂಟೆ? ಮದಾಂಧರಾದವರ ಮಾತು ಕೇಳಿ ಮೋಸಹೋಗದಿರು, ವತ್ಸಾ!' ಎಂದು ಭೀಷ್ಮನು ಬುದ್ಧಿಹೇಳಿದನು.

ದುರ್ಯೋಧನನು, 'ಹೀಗೆ ಮಾತಾಡುವುದೇಕೆ? ನಿಮ್ಮ ಬೆಂಬಲವಿದ್ದರೆ ಗೆಲ್ಲುವವರಾರು? ನಾನು ಯುವಕನೇ ಆದರೂ ನಿಮ್ಮ ಪರಾಕ್ರಮವನ್ನು ಬಲ್ಲವನಲ್ಲವೆ? ಹಗೆಗಳನ್ನು ಕೊಂದು ದಿಗ್ಬಲಿಯನ್ನು ಕೊಟ್ಟು, ನನ್ನ ಹರ್ಷವನ್ನು ಹೆಚ್ಚಿಸಬಾರದೇಕೆ?' ಎನ್ನಲು, ಭೀಷ್ಮನು—'ವತ್ಸಾ, ಅವರಲ್ಲಿ ದೈವಬಲವಿದೆ ನೀವೇ ದೈವಹೀನರಾಗಿರುವಿರಿ. ಅವರೈವರೂ ಧರ್ಮಬಲರು, ಸತ್ಪುರುಷರು, ಶೀಲವಂತರು; ನೀವು ಅಧರ್ಮಿಗಳು. ಅವರ ಪಕ್ಷವಾಗಿ ಜಗತ್ತೆ ಇರುವುದು; ನಿಮ್ಮನ್ನು ಎಲ್ಲರೂ ನಿಂದಿಸು

ತಿರುವರು. ಪರಾಕ್ರಮದಲ್ಲಾದರೂ ಅವರು ನಿಮಗೆ ಐದು ಮಡಿ ಸಾಹಸಿಗಳು; ನೀವು ದುರ್ಬಲರು. ಇನ್ನೇಕೆ ಯುದ್ಧವು?' ಎಂದು ಪುನಃ ಹೇಳಿದನು.

ದುರ್ಯೋಧನನು,

ದಯವನತ್ತಲು ತಿದ್ದಿ, ನಮ್ಮನು
ಭಯ ಮಹಾಬ್ಧಿಯೊಳದ್ದಿ, ಸಮರದ
ಜಯವನವರಿಗೆ ಮಾಡಿ, ನಮ್ಮಭಿಮತವ ಮರುಳ್ಮಾಡಿ ।
ನಯವನೀವೊಯ್ದುವರೆ ನಿಮ್ಮನು
ನಿಯಮಿಸುವರಾರುಂಟು? ಭಾಗ್ಯೋ
ದಯವಿಹೀನರು ನಾವೆನುತ ಕುರುರಾಯ ಬಿಸುಸುಯ್ದ.

'ನಿಮ್ಮ ಪಕ್ಷಪಾತವು ನನಗೆ ತಿಳಿದ ವಿಷಯವೇ. ಅದಕ್ಕಾಗಿ ಅವರನ್ನು ದಯೆಯಿಂದ ಕಾಣುವಿರಿ. ಅವರನ್ನು ಹೊಗಳುವಿರಿ, ನಮಗೆ ಭಯ ತೋರಿಸಿ, ನಮ್ಮ ಅಭಿಮತವೇ ಮರುಳುತನವೆನ್ನುವಿರಿ. ಯುದ್ಧದಲ್ಲಿ ಅವರಿಗೆ ಜಯವು ಲಭಿಸುವಂತೆ ಮಾಡುವಿರಾದರೆ, ನಾವು ಭಾಗ್ಯಹೀನರಲ್ಲವೆ?' ಎಂದು ಕೌರವನು ನಿಟ್ಟುಸಿರಿಟ್ಟನು.

ಭೀಷ್ಮನು, 'ವತ್ಸ, ನಾನು ನನ್ನ ಮನಸ್ಸಿಗೆ ತಕ್ಕಂತೆ ನನ್ನ ಅನುಭವದ ಮಾತುಗಳನ್ನು ತಿಳುಹಿದರೆ ನೀನೊಪ್ಪುವುದಿಲ್ಲವಷ್ಟೆ. ಹೀಗಾದ ಬಳಿಕ, ನಾನಾ ವಿವಾದ ವಿಮರ್ಶೆಗಳೇತಕ್ಕೆ? ನನಗೆ ನೀವಿಬ್ಬರೂ ಸಮಾನರು; ನಾನು ಚಿರಕಾಲವೂ ಹಸ್ತಿನಾಪುರದ ರಾಜನಿಗೆ ಅನುಗತನೆನಿಸಿದ್ದು ರಾಜ್ಯರಕ್ಷಣಕ್ಕಾಗಿ ಪ್ರಾಣವನ್ನೊಡ್ಡುವೆನೆಂದು ಅಂದು ಮಾತೆಗೆ ಮಾತುಕೊಟ್ಟಿರುವೆನು. ಅದುಕಾರಣ, ನಿಮ್ಮ ಪಕ್ಷವು ಅಧರ್ಮದ ಪಕ್ಷವೆಂದು ತಿಳಿದಿರುವೆನಾದರೂ, ಹಸ್ತಿನಾಪುರದ ರಾಜಪಕ್ಷವೆಂದು ನಿಮ್ಮ ಕಡೆಯಲ್ಲಿದ್ದೇ ಯುದ್ಧಮಾಡುವೆನು. ಆದರೆ ಈ ಯುದ್ಧದಲ್ಲಿ ನಿಮಗೆಂದೂ ಜಯ ಉಂಟಾಗದು ಎಂಬುದನ್ನು ನಿಜವೆಂದು ನಂಬು. ಜಯಹೊಂದುವ ಆಸೆಯನ್ನು ತೊರೆದು ಯುದ್ಧಸನ್ನದ್ಧನಾಗು; ನಾನು ಸೇನಾಪತಿಯಾಗಲೊಪ್ಪುತ್ತೇನೆ. ಕ್ಷಾತ್ರಧರ್ಮಕ್ಕನುಸಾರವಾಗಿ ನಾನು ಒಪ್ಪಿಕೊಳ್ಳಬೇಕಾಗಿದೆ. ಆದರೆ ನನ್ನ ಕೆಲವು ನಿಯಮಗಳಿವೆ- ಅನ್ಯಾಯವೆಂದು ತಿಳಿದರೆ ಯುದ್ಧವನ್ನು ಮುಗಿಸುವೆನು; ಅಸ್ತ್ರಹೀನನನ್ನು ಎಂದೂ

ಕಾದುವವನಲ್ಲ. ಶರಣಾಗತನನ್ನು ಎಂದೂ ಕೊಲ್ಲುವವನಲ್ಲ. ಒಬ್ಬನೊಡನೆ ಯುದ್ಧಮಾಡುವಾಗ ಅನ್ಯರನ್ನು ಕಾದುವನಲ್ಲ, ಸಂಕಟದಲ್ಲಿರುವವನನ್ನು ಸಂಹರಿಸೆನು. ಸಮಾನರೊಡನೆ ಯುದ್ಧಗಳು ನಡೆಯಲಿ; ಹೀನನೊಡನೆ ನಾನು ಯುದ್ಧಮಾಡೆನು. ಇದನ್ನು ಎಲ್ಲರೂ ತಿಳಿಯಲಿ!' ಎಂದು ಸಮಾಧಾನವನ್ನು ಹೇಳಿದನು.

ದುರ್ಯೋಧನನು ಸಂತುಷ್ಟನಾಗಿ ಅರಮನೆಗೆ ನಡೆದನು. 'ಪಾಂಡವರು ಈ ಯುದ್ಧದಲ್ಲಿ ಜಯಶಾಲಿಗಳಾಗುವುದು ನಿಜ; ಭಗವಂತನ ಇದಿರಲ್ಲಿ ನಮ್ಮ ಸಾಮರ್ಥ್ಯವೆ? ಆದರೂ ಈ ಮೂರ್ಖನಿಗೇನು ಹೇಳಲಿ? ಸೇನಾಪತಿತ್ವವನ್ನು ಒಪ್ಪಿಕೊಳ್ಳಬೇಕಾಯಿತು! ಇದಿರಾದ ಶತ್ರುಬಲವನ್ನು ಕಾದು, ಪಾಂಡವರನ್ನು ಕಾಯ್ದು, ಈ ದೇಹವನ್ನು ಯುದ್ಧಭೂಮಿಯಲ್ಲಿ ಇಡುವೆನು' ಎಂದು ದೃಢಮಾಡಿಕೊಂಡು ಭೀಷ್ಮನು ಅಂದಿನ ರಾತ್ರಿಯನ್ನು ಕಳೆದನು.

ಮಗನನ್ನು ಮೂದಲಿಸಿದ ಮುದುಕನು ಹಗೆಗಳ ಮೇಲೆ ಹೋಗುವ ಪರಿಯನ್ನು ನೋಡುವೆನೆಂಬ ಕುತೂಹಲದಿಂದ ಸೂರ್ಯನು ಉದಯಕ್ಕೆ ಬಂದನು. ಸೇನಾಧಿಪತ್ಯವು ಭೀಷ್ಮನಿಗೆ ಸಲ್ಲುವ ಕಾರಣ ಆ ಪಟ್ಟಾಭಿಷೇಕವನ್ನು ನೋಡಲು ಸಮಸ್ತರು ಬರಬೇಕಾಗಿ ದುರ್ಯೋಧನನ ಡಂಗುರ! ಅತಿ ಮುಖ್ಯರಾದ ವೀರರುಗಳು ಭೀಷ್ಮನ ಎಡಬಲಭಾಗಗಳಲ್ಲಿ ನಿಂದರು. ಬ್ರಾಹ್ಮಣರು ಒಂದು ಸಿಂಹಾಸನವನ್ನು ವಿರಚಿಸಿ, ಅದನ್ನು ಮೊದಲಾಗಿ ಪೂಜಿಸಿದರು. ಅನಂತರದಲ್ಲಿ ಶಾಸ್ತ್ರಸಮ್ಮತವಾದ ವಿಧಿಯಲ್ಲಿ ಮಂತ್ರೋಚ್ಚಾರಗಳನ್ನು ಮಾಡುತ್ತ, ಆಕಾಶಗಂಗೆಯು ಹಿಮಾಚಲಶಿಖರಕ್ಕಿಳಿದಂತೆ ಪವಿತ್ರ ಉದಕವನ್ನು ಗಂಡಾನೆಯಂತೊಪ್ಪುವ ಭೀಷ್ಮನ ಮಸ್ತಕಕ್ಕೆ ಧಾರೆಗರೆದರು. ರಾಜಕುಲದ ವೀರಪತ್ನಿಯರು ಅವನಿಗೆ ಆರತಿಯೆತ್ತಿದರು. ಪರಿಜನರು ಕಾಣಿಕೆಗಳನ್ನು ನೀಡಿದರು. ಮಹಾಯುದ್ಧದ ಭಾರವನ್ನು ಭೀಷ್ಮನೆ ಹೊತ್ತನು. ಸಮರದ ವೀರಪಟ್ಟವು ಭೀಷ್ಮನದೆಂದ ಮೇಲೆ, ದುರ್ಯೋಧನನು ಹರ್ಷಚಿತ್ತನಾಗಿ,—'ಈ ಗಂಗಾಪುತ್ರನ ಅಂಕೆಯಲ್ಲಿರುವ ನಮ್ಮ ಸೈನ್ಯವು ಮಹಾಕಾಲನಿಗಾಗಲಿ ಕಾಲಂತಕನಿಗಾಗಲಿ ಹೆದರುವುದೆ? ಇನ್ನು ಕುಂತೀಪುತ್ರರಿಗೆ ವನವಾಸವೆ ಗತಿಯಲ್ಲವೆ?' ಎಂದು ಭೀಷ್ಮನನ್ನು ಹೊಗಳಿದನು.

ಆಗ ಅಲ್ಲಿದ್ದ ಕರ್ಣನು, 'ಭೂಪಾಲತಿಲಕ! ಇದೀಗ ಮರಳುತನವಲ್ಲವೆ? ಧರ್ಮಪರಿಣತನಾದ ಈ ಹಳೆಯ ಮನುಷ್ಯನು ನಿಮಗೆ ಪಿತಾಮಹನು! ಇವನೆಲ್ಲಿ, ಕಾಳಗವೆಲ್ಲಿ? ಈ ಪುರಾತನನಿಗೆ ನಿಮ್ಮಿದಿರಲ್ಲಿ ಶ್ಲಾಘನೆಯೇ? ಇವನ ತೊಗಲು ಸಡಿಲಿದೆ, ಗಲ್ಲ ಬತ್ತಿದೆ, ಹೆಗಲು ನಲುಗಿದೆ, ಮೀಸೆ ನರೆತಿದೆ, ಹಲ್ಲುಗಳು ಜಗುಳಿವೆ, ಕಂಗಳು ನಟ್ಟಿವೆ, ಅವಯವಗಳು ನೆಗ್ಗಿವೆ. ಇವನು ಮಾತನಾಡುವಾಗಲೇ ಶಿರಃಕಂಪನವಾಗುವುದು. ಇಂತಹ ಮುಪ್ಪಿನ ಭ್ರಾಂತಿಯಿಂದ ಕಂಗೆಟ್ಟಿರುವ ಇವನೆ ಸೇನಾಧಿಪತಿಯೆಂದು ನಮ್ಮ ಸೇನೆಗಳು ನಗುತ್ತಲಿವೆ. ಅಹಹ, ನಮ್ಮಲ್ಲಿ ಭೀಷ್ಮನಿರುವಂತೆ ಶ್ರೀರಾಮನ ಸೈನ್ಯದಲ್ಲಿ ಜಾಂಬವನಿದ್ದನು. ವೀರರೆಂದರೆ ಇವರಿಬ್ಬರೆ ಸರಿ. ಮಿಕ್ಕವರ ಮಾತಿರುವುದೆ? ಮಹಾರಾಜನೆ, ಇವನನ್ನು ಕೊಲ್ಲಿಸಬೇಕೆಂಬ ಇಚ್ಛೆಯಿದ್ದರೆ ಹಗೆಗಳ ಕೈಗೊಪ್ಪಿಸುವುದೆ? ನಾವಿಲ್ಲವೆ? ನನ್ನ ಧನುಸ್ಸಿನಿಂದಲೆ ಇವನನ್ನು ಕೆಡಬೀಳಿಸಿ ಕೊಲ್ಲುತಿದ್ದಿಲ್ಲವೆ?' ಎಂದು ಭೀಷ್ಮನನ್ನು ತುಚ್ಛೀಕರಿಸಿದನು.

ದ್ರೋಣಾಚಾರ್ಯನು, ಇದನ್ನು ಕೇಳಿ, 'ಎಲಾ! ನಿನ್ನಂತಹರ ಕೈಯಿಂದ ಭೀಷ್ಮರನ್ನು ಇದಿರಾಡಲಾದೀತೆ? ನಿನಗೆ ಯೌವನವು ಉಬ್ಬಿರುವುದೆಂದು ನೀನು ಕೊಬ್ಬಿರುವೆ. ರಾಮಸೈನ್ಯಕ್ಕೆ ಹಾನಿಯೇನೂ ಘಟ್ಟದಂತೆ ಕಾಯ್ದಾತನೆ ಜಾಂಬವನು. ಇವರಿಗೆ ಇಲ್ಲೀಗ ಪಟ್ಟಾಭಿಷೇಕವಾದುದರಲ್ಲಿ ಕುಂದೇನಿದೆ? ನೀನೆಲ್ಲಿ ಅವರಿಗೆ ಸರಿ?' ಎಂದು ಕರ್ಣನನ್ನು ಜರೆದನು.

'ಭೀಷ್ಮನಂತಹ ಮುದಿಯನು ತಪಸ್ಸುಮಾಡಿಕೊಂಡಿರುವುದಕ್ಕೇ ಯೋಗ್ಯನಲ್ಲದೆ, ಯುದ್ಧಕ್ಕೆ ಅವನೆಲ್ಲಿಯವನು? ಇವನು ಯುದ್ಧಮಾಡುತಿರುವಷ್ಟು ಕಾಲ ನಾನು ಧನುಸ್ಸನ್ನೆತ್ತುವುದಿಲ್ಲ. ನಾಚುಗೆ!' ಎಂದು ಕರ್ಣನೆಂದನು. ವಯೋವೃದ್ಧನೂ ಜ್ಞಾನವೃದ್ಧನೂ ಆದ ಭೀಷ್ಮನು ಈ ಉದ್ಧಟತನಕ್ಕೆ ಮದ್ದನ್ನರೆದನು. 'ಎಲಾ ರಾಧೇಯ! ನಿನ್ನ ಕುಲವನ್ನು ನೋಡದೆ, ಇಷ್ಟು ಸಲುಗೆಯಿಂದ ಮೇರೆತಪ್ಪಿ ಮಾತಾಡುವೆಯಾ? ನಿನ್ನ ಒಡೆಯನ ಸಂಪತ್ತಿನ ಬಲದ ಹೆಮ್ಮೆಯೇ? ನಿನ್ನಂತಹರ ಮಾತಂತಿರಲಿ! ದೇವದಾನವರೊಳಗೆ ನನ್ನೊಡನೆ ಯುದ್ಧಕ್ಕೆ ನಿಲುವವನಾವನು? ಬರಲಿ! ಕೃಪಾಚಾರ್ಯ, ಗುರುಪುತ್ರ, ಶಲ್ಯ, ದ್ರೋಣಾಚಾರ್ಯ, ಜಯದ್ರಥ, ದುಶ್ಶಾಸನ, ವಿಕರ್ಣನೆ ಮೊದಲಾದವರು ಕೇಳಲಿ,—ಪ್ರತಿ ದಿನವೂ

ಹತ್ತುಸಾವಿರ ಮುಕುಟವರ್ಧನರ ಶಿರಸ್ಸುಗಳನ್ನು ಯುದ್ಧದಲ್ಲಿ ಹಾರಿಸುವೆನು. ಶ್ರೀಕೃಷ್ಣನು ಮಾಡಿರುವ ಪ್ರತಿಜ್ಞೆಗೆ ವಿರುದ್ಧವಾಗುವ ಹಾಗೆ, ಅವನು ಸುದರ್ಶನವನ್ನು ಧರಿಸುವಂತೆ ಮಾಡುವೆನು. ವಾನರಪತಾಕನಾದ ಅರ್ಜುನನ ರಥವನ್ನು ಹಿಂದೋಡುವಂತೆ ಬಡಿವೆನು; ದೇವದಾನವರಲ್ಲಿ ಯಾರಿಗೂ ಇದು ಅಸಾಧ್ಯವಲ್ಲವೆ? ನಾನು ಅದನ್ನೆ ಸಾಧಿಸುವುದನ್ನು ನೋಡಿರಿ. ಈ ನೊರಜಿನಂತಹ ಕರ್ಣನಿಗಾಗಿ ಆಯುಧಗಳು ಬೇಕೇ?' ಎಂದು ಗರ್ಜಿಸಿದನು. ಸಭಾಮಂಡಲದಲ್ಲೆಲ್ಲ ಕಡಲಮೊರೆಯಂತೆ ಆಶ್ಚರ್ಯಸೂಚಕವಾದ ಘೋಷ ಉಂಟಾಯಿತು. ಭೀಷ್ಮನೆ ಸೇನಾಪತಿಯಾದನೆಂದು ಸೈನ್ಯವು ಆನಂದಧ್ವನಿಯನ್ನು ಮಾಡಿತು.

ಆ ಘೋಷವು ಸಮಸ್ತ ಮಹಾಮಹೀಶ್ವರರ ಸೇನೆಗಳಿಗೂ ಕೇಳಿಸಿತು. ಭೇರಿ, ಮೃದಂಗ, ಕಹಳೆಗಳೂ ಕಳಕಳಿಸಿ ದಿಕ್ಕುಗಳನ್ನು ಮಾತಾಡಿಸಿದುವು. ವಜ್ರಾಯುಧಗಳ ಬಳಗದಂತೆ, ಸೂರ್ಯನ ಪ್ರಭೆಯಂತೆ, ಮಿಂಚಿನ ಕಳೆಯಂತೆ, ಸೂರ್ಯಕಾಂತದ ಛವಿಯಂತೆ ಆಯುಧಕೋಟಿಯು ಜಳಪಿಸಿತು. ದಿಕ್ಕುಗಳಿಗೆಲ್ಲ ದೀವಟಿಗೆ ಹಿಡಿದಂತೆ ಈ ಬೆಳಕು ಹರಿಯಿತು; ಸೇನೆಗಳು ನಡೆವಾಗ ಎದ್ದ ಕಾಲ್ದೂಳು ಸಮುದ್ರದ ನೀರನ್ನು ಬತ್ತಿಸಿ, ನಭೋಮಂಡಲಕ್ಕೆ ನೆಗೆದು, ಗಂಗಾನದಿಯ ನೀರನ್ನು ಮುಕ್ಕುಳಿಸಿ, ಪರ್ವತಗಳನ್ನು ಮುಚ್ಚಿ, ನೇಸರಿನ ಕಣ್ಣುಗಳಲ್ಲಿ ತುಡುಕಿತು. ಆನೆಗಳ ಮದಜಲವು ಸುರಿದು ಎಷ್ಟೋ ಸರೋವರಗಳು ಉಂಟಾದುವು; ಮಹಾರಾಜರುಗಳ ಕಿರೀಟಗಳಲ್ಲಿನ ರತ್ನಗಳ ಪ್ರಭೆಯಿಂದ ಹೊಸ ಚಂದ್ರ ಸೂರ್ಯರು ಸೃಷ್ಟಿಯಾದಂತೆ ತೋರಿತು.

ಈ ರೀತಿಯಾಗಿ ಅಗ್ರಹಾಯನ ಮಾಸದ ಕೃಷ್ಣಪಕ್ಷದ ಪಂಚಮಿತಿಥಿಯಲ್ಲಿ ಮಘಾನಕ್ಷತ್ರದಲ್ಲಿ ಚಂದ್ರನು ರಾಜಿಸುತ್ತಿರಲು, ಕೌರವಪಕ್ಷದ ಹನ್ನೊಂದಕ್ಷೋಹಿಣೀ ಸೈನ್ಯವು ಕುರುಕ್ಷೇತ್ರಕ್ಕೆ ನಡೆದು, ಮೂಡಣ ದಿಕ್ಕನ್ನು ಸೇರಿ ಅಲ್ಲಲ್ಲಿ ಬೀಡುಮಾಡಿಕೊಂಡಿತು. ಸುತ್ತಲೂ ಗುಡಿಗಳೂ ನಡುವೆ ಕೌರವನ ರಾಜಮಂದಿರವೂ ಲೋಹದ ತಡಿಕೆಗಳಿಂದ ರಚಿತವಾಯಿತು. ನಾಲ್ವತ್ತೆಂಟು ಯೋಜನ ವಿಸ್ತಾರವುಳ್ಳ ಆ ಭೂಮಿಯಲ್ಲಿ ಅಲ್ಲಲ್ಲಿ ವಲಯಗಳೂ, ಅಗಳುಗಳೂ, ಮುಳ್ಳುಬೇಲಿಗಳೂ ಹಾಕಲ್ಪಟ್ಟುವು. ಸಮೀಪದಲ್ಲೆ ವೇತ್ರವತಿ ನದಿ. ಇಷ್ಟು ವಿಸ್ತಾರಕ್ಕೆ ಇರುವ ಎಲ್ಲ ಸೈನ್ಯದ

ಅಧಿಕಾರವೂ ರಕ್ಷಣಭಾರವೂ ಭೀಷ್ಮನದು. ಈ ಪ್ರಕಾರದ ವಜ್ರಪಂಜರದಲ್ಲಿ ಕೌರವಸೇನೆಯು ಭೀಷ್ಮನ ಅಪ್ಪಣೆಗೊಳಗಾಗಿ ಯುದ್ಧಸನ್ನದ್ಧವಾಗಿದ್ದಿತು.

---

## ೧೧. ಯುದ್ಧದ ಮುನ್ನುಡಿ

ಕೌರವ ಸೇನೆಯು ಕುರುಭೂಮಿಗೆ ಬಂದಿಳಿದುದನ್ನು ಪಾಂಡವರಿಗೆ ತಿಳಿಸಲು ಉಲೂಕನೆಂಬವನು ಪಾಂಡವರ ಶಿಬಿರಕ್ಕೆ ಬಂದನು. 'ಕೌರವರು ಮಹಾಯುದ್ಧಕ್ಕಾಗಿ ಬಂದಿರುವರು, ನೀವೇಕೆ ವಿಳಂಬಿಸುವಿರಿ? ರಾಜ್ಯಾಭಿಲಾಷೆಯಿಂದ ವ್ಯರ್ಥವಾಗಿ ನೀವು ಯುದ್ಧಕ್ಕೆ ಸಿದ್ಧರಾದಿರಿ. ನಿಮಗೇತಕ್ಕೆ ಈ ಯುದ್ಧವು? ತಾನು ಬೆಂಬಲಕ್ಕಿದ್ದೇನೆಂದು ಕೃಷ್ಣನು ಮಾತಿತ್ತುದಕ್ಕೆ ನಂಬಿ ವ್ಯರ್ಥವಾಗಿ ವಿಡಂಬನೆಗೆ ಒಳಗಾಗಿ ಕೆಟ್ಟಿರಲ್ಲವೆ? ಇನ್ನೇನು ಮಾಡುವಿರಿ? ಯುದ್ಧದಿಂದ ಯಾವ ನೀತಿಯನ್ನಾದರೂ ಅಣಗಿಸಬರುತ್ತಿದೆ? ಸೈನ್ಯಬಲವು ಧರ್ಮಬಲಕ್ಕೆ ಮಿಗಿಲಾದುದು. ಇನ್ನು ಕೌರವರು, ನಿಮ್ಮ ಮಾತಿರಲಿ, ಮಹೇಶ್ವರನಿಗೂ ಬೆದರುವರೆ? ಕೆಟ್ಟಿರಕಟಾ!' ಎಂದು ಉಲೂಕನು ತಿಳುಹಲು, ಭೀಮನು ಮಿತಿಮೀರಿ ಕೆರಳಿ,—'ಎಲಾ! ಈ ನಾಯಿಯ ಬಾಯಿಯನ್ನು ಸೀಳಿರಿ. ನನ್ನ ತೋಳುಗಳು ಅವನ ತಲೆಯನ್ನು ಪುಡಿಗೈಯಲು ಆತುರಗೊಳ್ಳುತ್ತಿವೆ. ಕೌರವರ ಸೇನೆಯು ಮಹಾಸಾಗರದಂತೆ ಕಾಣುತ್ತಿದೆಯೇ? ಅದನ್ನು ಆಪೋಷಣೆ ಮಾಡುವುದಕ್ಕೆ ನಾನು ಸರ್ವದಾ ಸಿದ್ಧನೆ. ಈ ನಾಯಿಯನ್ನು ಇಲ್ಲಿ ಇನ್ನೂ ನಿಲ್ಲಿಸಿ ಬಗುಳಿಸಿ ಕೇಳಬೇಡಿರಿ. ನಿನ್ನ ಒಡೆಯನಿಗೆ ಯಮಸ್ವರೂಪನಾದ ನಾನು ಇಲ್ಲಿದ್ದೇನೆಂದು ಹೋಗಿ ತಿಳಿಸು' ಎಂದನು. ಧರ್ಮಜನು,—'ಮುಂದೆ ಮಾಡಬರುವುದನ್ನು ಈಗ ಆಡಿ ಕೆಡಿಸಲೇತಕ್ಕೆ? ಕೌರವರೇ ಹಾಗೆ ಹೀಗೆ ಮಾಡುತ್ತೇವೆಂದು ಹೇಳಿ ತಮ್ಮ ಪೌರುಷವನ್ನು ಪ್ರಕಟಿಸಲಿ. ನೀತಿಹೀನರಾದವರ ವಿಷಯವಾಗಿ ಬಹಳ ವಿಚಾರಮಾಡಿ ಫಲವೆಲ್ಲಿದೆ? ನಮಗೆ ಈ ಯುದ್ಧದ ಚಿಂತೆಯೇ ಇಲ್ಲ. ನಮ್ಮ ಜೀವನದ ಸಮಸ್ತ ಭಾರವನ್ನೂ ಶ್ರೀಕೃಷ್ಣನ ಮೇಲೆ ಇರಿಸಿರುವೆವು. ಯುದ್ಧದ ಪಾರುಪತ್ಯವನ್ನು ಅವನೇ ಮಾಡುವಾತನು,

ನನುಗೆ ಅದರ ಗೊಡವೆಯೇ ಇಲ್ಲ' ಎಂದು ನಗುತ್ತ ಹೇಳಿದನು. ಉಲೂಕನು ಹಿಂದೆರಳಿದನು,

ಪಾಂಡವಪಕ್ಷದ ಏಳಕ್ಷೌಹಿಣೀ ಸೈನ್ಯವೂ 'ಜಯು'ವೆಂದು ಘೋಷ ವನ್ನು ಮಾಡಿತು. ಧರ್ಮರಾಯನು ಶ್ರೀಕೃಷ್ಣನಿಗೆರಗಿ ಚಿನ್ನದ ರಥವನ್ನು ಏರಿದನು. ಕೂಡಲೆ ಕೋಟಿಕೋಟಿ ನಿಸ್ಸಾಳಗಳು ಒರಲಿದುವು. ಅವನ ಸೋದರರು ಅವನನ್ನು ಪ್ರದಕ್ಷಿಣೆಗೈದು ನಮಿಸಿ, ತಂತಮ್ಮ ರಥಗಳ ನ್ನೇರಿದರು. ರಾಜರುಗಳು ತಂತಮ್ಮ ಸೇನೆಗಳನ್ನು ಮುನ್ನಡೆಸಿದರು. ಮೂಡಣ ಸಾಗರವು ಪಡುವಣ ಕಡಲನ್ನು ಸೇರಲು ಬಂದುದೊ ಎಂಬಂತೆ ಎರಡೂ ಪಕ್ಷಗಳ ಸೇನೆಗಳು ಕುರುಭೂಮಿಯಲ್ಲಿ ಒಂದಕ್ಕೊಂದು ಇದಿ ರಾದುವು. ಪಾಂಡವರ ಸೇನಾನಾಯಕನು ದೃಷ್ಟದ್ಯುಮ್ನನು.

ಆ ಸೇನೆಗಳ ಸಂಭ್ರಮವನ್ನು ಹೇಗೆ ಬಣ್ಣಿಸಬರುವುದು? ರಥ, ತುರಗ, ಕರಿ, ಕಾಲಾಳುಗಳು ಇದಿರಿದಿರಾಗಿ ನಿಂದಾಗ, ಮಹಾವೀರರಲ್ಲಿ ಪ್ರತಿಯೊಬ್ಬರ ಆಸನದ ಬಳಿಯಿಂದ ಬೀಸಲಾದ ಚಾಮರಗಳು ಬಿಳಿ ನೊರೆಯಿಂದೊಪ್ಪುವ ತೆರೆಗಳಂತೆ ಶೋಭಿಸುತಿದ್ದುವು.

ಗಜಗಳ ಗರ್ಜನೆ; ತುರಗಗಳ ಹೇಷಾರವ; ರಥಗಳ ಗಜಬಜ; ಕಾಲಾಳುಗಳ ಬೊಬ್ಬೆ; ಕಹಳೆಗಳ ಕರ್ಕಶಕೂಗು; ಒಡ್ಡ್ಯಾಣಗಳ ಢಣಢಣ; ಇವುಗಳೊಡನೆ ಹೊಗಳುಭಟ್ಟರ ಬಿರುದು ಪ್ರಕಟನದ ಘೋಷ; ಇದಿರು ನಿಂದವರನ್ನು ನಿಂದಿಸುವ ಧ್ವನಿ; ಕುದುರೆಗಳನ್ನು ನಡೆಸುವ ಸೂತರ ಸಂಜ್ಞೆ ಗಳ ಅಬ್ಬರ. ಅಡಾಯುಧಗಳು ಜಳಪಿಸಿದುವು; ಹೊಸ ಮಸೆಯಿಂದೊಪ್ಪುವ ಕರವಾಲಗಳು ಹೊಳೆದುವು, ಖಡ್ಗಧಾರೆಗಳು ಮಿಂಚಿದುವು; ಆಯುಧಗಳ ಪ್ರಕಾಶದಿಂದ ಕುರುಭೂಮಿಯಲ್ಲಿ ನೂರು ಸೂರ್ಯರು ಒಂದೇ ಬಾರಿ ಉದಯಿಸಿದಂತೆ ತೋರಿತು.

ಯಾವ್ಯಾವ ವೀರರು ಎಲ್ಲೆಲ್ಲಿದ್ದರೆಂದು ತಿಳಿಯಲು ದುರ್ಯೋಧನನು ಭೀಷ್ಮನ ಹತ್ತಿರಕ್ಕೆ ಬಂದು ವಿಚಾರಿಸಲು, ಅವನು—"ಮುಗಿಲೊಡ್ಡಿನಲ್ಲಿ ಎಸೆವ ಮಿಂಚಿನಂತೆ ಗಜಬಲದ ಮಧ್ಯದಲ್ಲಿ ತೋರುವ ಆ ವೀರನೆ ದೃಷ್ಟದ್ಯುಮ್ನನು; ಅವನೇ ಪಾಂಡವ ಸೇನೆಯ ನಾಯಕನು; ಅವನ ಕೆಲಬಲಕ್ಕೆ ಪಾಂಚಾಲ ಕುಲದವರು. ಅತ್ತ ವಿರಾಟನು, ಇತ್ತ ದ್ರುಪದನು; ಮುಂಗುಡಿಯ ನಾಯಕರು, ಎರಡಕ್ಷೌಹಿಣೀ ಸೈನ್ಯವು ಇವರ ಅಂಕೆ

ಯಲ್ಲಿರುವುದು. ಅದರಿಂದಾಚೆಗೆ ಕುಂತೀಭೋಜನೂ ಕೈಕಯನೃಪಾಲನೂ ಇರುವರು; ಇವರು ಎರಡಕ್ಷೌಹಿಣೀ ಸೇನಾಧ್ಯಕ್ಷರು; ಅವರ ಹತ್ತಿರದಲ್ಲಿ ಪಾಂಡ್ಯ ಶಿಖಂಡಿ ಸೋಮಕರು ಒಂದೇ ಅಕ್ಷೌಹಿಣೀ ಸೇನೆಗೆ ಅಧಿಪತಿಗಳಾಗಿ ನಿಂದಿರುವರು. ಅಲ್ಲಿಯೆ ಕುಂತೀಕುಮಾರಕರು, ಸಮೀಪದಲ್ಲಿಯೆ ದ್ರೌಪದೀಸುತರು; ಅವರೆಲ್ಲರಿಗಿದಿರಾಗಿ ಸಿಡಿಲಿನ ಹೊದರೆದ್ದಂತೆ ನಿಂದವನು ಭೀಮಪುತ್ರನಾಗಿರುವ ಘಟೋತ್ಕಚನು. ತಾಮಸಿಗಳಾಗಿ ಕುಂಭಕರ್ಣರಂತೆ ಕಾಣುವ ಒಂದು ಕೋಟಿ ಕಾಮರೂಪಿಗಳು ಅವನ ಸಂಗಾತಿಗಳು. ಅವನ ಬಳಿಯಲ್ಲಿ 'ರಿಪುಕುಮಾರಕನಿವಹದಾವಾನಲ' ನೆಂದು ಬಿರುದುಳ್ಳ ಅರ್ಜುನಪುತ್ರನಾದ ಅಭಿಮನ್ಯುವಿರುವನು. ಅವನ ಒತ್ತಿನಲ್ಲಿ ಸಾತ್ಯಕಿಯೆ ಮೊದಲಾದ ನಾಯಕರಿರುವರು; ಇವರು ಒಂದಕ್ಷೌಹಿಣೀ ಸೇನೆ ಬಳಸಿ ನಿಂದಿರುವರು. ಪ್ರಲಯ ಮೃತ್ಯುಕೋಟಿಯ ಸಮೂಹದಂತೆ ತೋರುವ ಅತಿಬಲದ ಸೈನ್ಯದೊಡನೆ ಮತ್ತಗಜದಂತೆ ಭೀಮಸೇನನು ನಿಂದಿಹನು. ಸುತ್ತಲೂ ಚತುರಂಗಬಲವೆರಸಿ ನಿಂದಿಹನೇ ಧರ್ಮರಾಯನು. ಆ ಬಳಿಕ ಅರ್ಜುನನ ರಥದಲ್ಲಿ ಸಾರಥಿಯಾಗಿ, ಯಾವನ ಮೈಯರೋಮದ ಕುಳಿಗಳಲ್ಲಿ ಬ್ರಹ್ಮಾಂಡಕೋಟಿಗಳ ಸುಳಿವಿದೆಯೊ, ಅವನೇ ವೇದಗಳಿಗೂ ಅಗೋಚರನಾದ ಶ್ರೀಕೃಷ್ಣನು ಇರುವನು.

ತಿಳಿಯಲೊಬ್ಬನ ಮೈಯ ರೋಮದ
ಕುಳಿಯಲಬುಜಭವಾಂಡ ಕೋಟಿಯ
ಸುಳಿವು ಗಡ! ಶ್ರುತಿನಿಕರವೊರಲಿದರೊಳಗುದೋರ ಗಡ! ॥
ಹಲವು ಮಾತೇನ್? ಆತನೀತನ
ಬಳಿಯ ಬಂಡಿಯ ಬೋವನಾಗಿಯೆ
ಸುಳಿವ; ಈತನೆ ನೋಡು ಮಗನೇ ವೀರನಾರಾಯಣ.

ಹನುಮಕೇತನನಾಗಿ ಅಸ್ತ್ರಗಳನ್ನು ಸಜ್ಜುಗೊಳಿಸಿಟ್ಟೇ ಮುಂದರಿಯುವವನಾಗಿ, ಜಯಲಕ್ಷ್ಮಿಯು ಒಲಿದು ಬರುವಂತೆ ಸಿಂಗಾರದಿಂದ ತೋರುವವನೆ ಅರ್ಜುನನು. ಇನ್ನೇನು ವಿವರಿಸಲೂ ಸಾಧ್ಯವಿಲ್ಲ. ಮುಂದೇನಾಗುವುದೊ ಅದನ್ನು ಶ್ರೀಕೃಷ್ಣನೆ ಬಲ್ಲನು! ಅವರ ಸೈನ್ಯವು ಏಳಕ್ಷೌಹಿಣಿಯಾಗಿಯೂ ನಮ್ಮ ಸೇನೆಯೂ ಹನ್ನೊಂದಕ್ಷೌಹಿಣಿಯಾಗಿಯೂ

ಇರುವುದಲ್ಲದೆ, ಸಹಾಯಕ್ಕಾಗಿ ನೆರೆದ ಸೇನಾಸಮೂಹವು ಹನ್ನೊಂದು ನೂರಕ್ಷೋಹಿಣೀ ಸೇನೆಯಾಗಿದೆ. ಇಷ್ಟನ್ನೂ ವಿನಾಶಗೊಳಿಸುವುದಕ್ಕೆ ನನಗೆ ಒಂದು ದಿನವೂ, ದ್ರೋಣಾಚಾರ್ಯರಿಗೆ ಮೂರು ದಿನಗಳೂ, ಕರ್ಣನಿಗೆ ಐದು ದಿನಗಳೂ, ಗುರುಪುತ್ರನಾದ ಅಶ್ವತ್ಥಾಮನಿಗೆ ಒಂದೇ ನಿಮಿಷವೂ, ಅರ್ಜುನನಿಗೆ ಅರ್ಧನಿಮಿಷ ಮಾತ್ರವೂ ಬೇಕಾಗುವುದು'' ಎಂದನು.

ಗುರುಪುತ್ರನು ನಿಮಿಷಮಾತ್ರದಲ್ಲಿ ಈ ಸೇನಾಬಲವನ್ನೆಲ್ಲ ನಿಗ್ರಹಿಸುವೆನೆಂದ ಮಾತ್ರದಲ್ಲೆ ದುರ್ಯೋಧನನು ಸಂತೋಷದಿಂದ ಉಬ್ಬಿ ಬ್ರಹ್ಮಾಂಡದ ಶಿಖರಕ್ಕೇರಿದನಾದರೂ, ಅರ್ಜುನನು ಅರೆನಿಮಿಷದಲ್ಲಿ ಇದನ್ನೆಲ್ಲ ವಿನಾಶಗೊಳಿಸುವನೆಂದೊಡನೆಯೆ ರಸಾತಲಕ್ಕೆ ಅಪ್ಪಳಿಸಿದಂತೆ ಕುಸಿದು ಪ್ರಲಾಪಿಸಿದನು. ಭೀಷ್ಮನು ಅವನನ್ನು ಸಮಾಧಾನಗೊಳಿಸುವುದಕ್ಕಾಗಿ "ಅರ್ಜುನನು ಇಂತಹ ಪರಾಕ್ರಮಶಾಲಿಯಾಗಿರುವನಾದರೂ, ಹತ್ತು ದಿನಗಳ ತನಕ ಈ ಯುದ್ಧಭಾರವನ್ನು ನಾನು ವಹಿಸುವೆನು. ನಾನು ಅರ್ಜುನನನ್ನು ಕಾದಾಡುತ್ತ, ಪ್ರತಿದಿನವೂ ಹತ್ತುಸಾವಿರ ರಥಿಕರನ್ನು ವಿನಾಶಗೊಳಿಸುವೆನು. ಹತ್ತು ದಿನಗಳ ವರೆಗೆ ನೀನು ನಿಶ್ಚಿಂತನಾಗಿರು'' ಎಂದು ಭರವಸೆ ಕೊಟ್ಟನು. ದುರ್ಯೋಧನನು ಆಗ ಮಹದಾನಂದವನ್ನು ಹೊಂದಿದನು. "ಪಿತಾಮಹನ ಮಾತು ವೇದವಾಕ್ಯವಲ್ಲವೆ? ಉಳಿದ ಕೌರವವೀರರೆಲ್ಲರೂ ಪ್ರತಿದಿನ ಭೀಷ್ಮನು ಕೊಲ್ಲುವ ಸೈನ್ಯಸಂಖ್ಯೆಯ ಅರ್ಧದಷ್ಟು ಕೊಲ್ಲುವರಾದರೆ, ಹತ್ತು ದಿನಗಳಲ್ಲಿ ಪಾಂಡವಸೈನ್ಯವು ಎಲ್ಲಿ ತಾನೆ ಉಳಿಯುವುದು? ಭೀಷ್ಮನೆ ನನಗೆ ಭರವಸೆ, ಭೀಷ್ಮನು ಪ್ರತಿಕೂಲನಾಗಿದ್ದರೆ ನಾನೆಲ್ಲಿ ಯುದ್ಧಪ್ರಸ್ತಾಪವನ್ನು ಎತ್ತುತ್ತಿದ್ದೆನು? ಇನ್ನು ನನಗೆ ಜಯವು ನಿಶ್ಚಯವು'' ಎಂದು ತನ್ನನ್ನು ತಾನೆ ದುರ್ಯೋಧನನು ಸಂತವಿಸಿಕೊಂಡನು.

ಅತ್ತ ಸೇನಾಮಧ್ಯದಿಂದ ಧರ್ಮರಾಯನು ಅಸ್ತ್ರಶೂನ್ಯನಾಗಿ ಪಾದಚಾರಿಯಾಗಿ ಬಂದು, ಭೀಷ್ಮನ ಕಾಲಿಗೆರಗಿ,—"ಪಿತಾಮಹನೆ! ಯುದ್ಧಕ್ಕಂತೂ ನಿಂದಿರುವೆನು. ನಮಗೆ ಇನ್ನು ಗತಿಯೇನು? ನಮಗೇನೆಂದು ಅನುಜ್ಞೆಮಾಡುವಿರಿ? ಕೌರವನು ನಮ್ಮನ್ನು ಬಹಳವಾಗಿ ಅವಮಾನಿಸಿದರೂ ನಾವು ನಮ್ಮ ಸತ್ಯಭಾಷೆಯನ್ನು ನೀವು ಮೆಚ್ಚುವ ತೆರದಲ್ಲಿ ಕಾಯ್ದುಕೊಂಡೆವು. ಇನ್ನು ನಮ್ಮ ತಲೆಗಳನ್ನು ಕಾಯುವಿರಾದರೆ ಮಾತ್ರ ನಾವು ಇಲ್ಲಿರಬಹುದಲ್ಲದೆ, ನಮಗೇತಕ್ಕೆ ನಿಮಗೆ ವಿಮುಖವಾಗಿ ಕಾದಾಡ

ಬೇಕಾಗಿದೆ'' ಎಂದು ಕರುಣಸ್ವರದಿಂದ ಬೇಡಿಕೊಂಡನು. ಭೀಷ್ಮನು ಧರ್ಮರಾಯನನ್ನೆತ್ತಿ—"ವತ್ಸಾ, ಮಾಡುವುದೇನು? ನಾನು ಪರರ ಆಳಾಗಿರುವೆನು. ಪರಸೇವೆಯಿಂದ ಹಗುರನಾದ ನನ್ನನ್ನು ನೀನು ಮಾತಾಡಿಸುವೆಯೇಕೆ? ಹಣವುಳ್ಳವನಿಗೆ ಹಿರಿಯರೆಂದಿಲ್ಲ; ಗೌರವವುಳ್ಳವ ರೆಂದಿಲ್ಲ, ಸುಜನರೆಂದಿಲ್ಲ-ಎಲ್ಲರನ್ನೂ ಸೇವಕರಂತೆ ನಿಯಮಿಸಲು ಬರುತ್ತಿದೆ. ಮತ್ತೊಬ್ಬರ ಚರಣಸೇವಕನಾದವನಲ್ಲಿ ಗುಣವಿದ್ದರೇನು? ಅವನ ಗುಣಗಳ ನ್ನಾಗಲಿ ಗೌರವವನ್ನಾಗಲಿ ಯಾರೆಣಿಸುವರು? ದಾಸ್ಯವೃತ್ತಿಯಿಂದ ಇರುವಾತನು, ಅವನು ಯಾರೇ ಇರಲಿ, ನಾನೇ ಆದರೂ, ಪುರುಷಾಧಮ ನಲ್ಲವೆ? ಕೌರವನ ಹಣವೆಂಬುದು ಹುರಿಹಗ್ಗದಂತೆ ನನ್ನನ್ನು ಬಂಧಿಸಿರುವುದು, ನಾನು ಮಾಡುವುದೇನು?'' ಎಂದನು. ಧರ್ಮರಾಯನು ಮತ್ತಷ್ಟು ಬಾಗಿ, "ಉಭಯಕುಲಗಳಿಗೂ ಮಾನನಿಧಿಯಾದ ಪಿತಾಮಹನು ಮುನಿದರೆ ನನಗೆ ಆಸೆಯೆಲ್ಲಿದೆ?'' ಎಂದು ಅಳುತಳುತ ಎನ್ನಲು,—ಭೀಷ್ಮನು "ನನ್ನ ದೇಹವು ಕೌರವರಿಗೆ ಅಧೀನವಾಗಿದೆ; ನನ್ನ ಜೀವವು ಮಾತ್ರ ನನ್ನ ವಶವಾಗಿದೆ. ಆದುದರಿಂದ ಯುದ್ಧವಿಷಯವಾಗಿ ಚಿಂತಿಸದಿರು. ಇಚ್ಛಾ ಮರಣಿಯಾಗಿರುವ ನಾನು ಅವಸಾನ ಹೊಂದುವ ಕಾಲಕ್ಕೆ ಸರಿಯಾಗಿ ನೀನು ಬಂದರೆ ಮುಂದೆ ಮಾಡತಕ್ಕುದನ್ನು ತಿಳುಹುವೆನು. ಧರ್ಮ ಪುತ್ರನಾದ ನೀನು ಶತಭೀಷ್ಮರನ್ನೂ ಜಯಿಸುವೆ. ಇನ್ನಿಲ್ಲಿರದೆ ತೆರಳುವ ನಾಗು! ನಮ್ಮ ಆಶೀರ್ವಾದಬಲದಿಂದಲ್ಲ, ನಿಮ್ಮ ಧರ್ಮಬಲದಿಂದಲೇ, ವಿಜಯಹೊಂದುವಿರಿ!'' ಎಂದು ಆಶೀರ್ವದಿಸಿ ಕಳುಹಿಕೊಟ್ಟನು. ಅದೇ ಮಹಾಪ್ರಸಾದವೆಂದು ಭೀಷ್ಮನಿಗೆರಗಿ, ಧರ್ಮರಾಯನು ಅಲ್ಲಿಂದ ದ್ರೋಣ ಗುರುವಿರುವಲ್ಲಿಗೆ ನಡೆತಂದನು.

ಯುದ್ಧಗುರುವಿಗೆ ಸಾಷ್ಟಾಂಗ ಪ್ರಣಾಮವನ್ನು ಮಾಡಿ ಧರ್ಮ ರಾಯನು ಕೈಮುಗಿದು ಮೌನವಾಗಿ ನಿಂತುಕೊಂಡಿರಲು, ಗುರುಡಿಯಾ ಚಾರ್ಯನು, "ಬಹಳ ದಿನಗಳ ಮೇಲೆ ಬಂದೆ; ಈಗಲಾದರೂ ಯುದ್ಧದ ಸಮಯ; ಏನು ನಿಮಿತ್ತವಾಗಿ ಬಂದೆ?'' ಎಂದು ಕೇಳಲು, ಧರ್ಮರಾಯನು, 'ನೀವೇ ನನಗೆ ದೇವರು, ನನಗೆ ಗುರು, ತಾತನು; ಮಹಾಯುದ್ಧದಲ್ಲಿ ನಮ್ಮಲ್ಲಿ ದಯೆಯಿಟ್ಟು, ಕಾಪಾಡುವ ಭಾರವು ನಿಮ್ಮದು' ಎಂದು ಹೇಳಿಕೊಂಡು ನಮಸ್ಕರಿಸಿದನು. ದ್ರೋಣನು—'ರಾಜನೆ, ಹಣಕ್ಕೆಲ್ಲರೂ

ದಾಸರು, ಹಣವೇ ಗುಲಾಮರನ್ನು ಒದಗಿಸಿಕೊಳ್ಳುವುದು. ಕೌರವರ ಸಂಪತ್ತು, ನಮ್ಮನ್ನು ಕಿಂಕರರನ್ನಾಗಿ ಮಾಡಿತು. ರಾಜ್ಯೈಶ್ವರ್ಯಕ್ಕೆ ಕೈಯೊಡ್ಡಿ ನಾವು ಪರಸೇವಕರಾದೆವು. ನಿಮಗಾದರೊ ತ್ರಿಲೋಕನಾಥನೆ ದಾಸನಾಗಿರುವನು. ಆದರೂ ಕೇಳು; ಯುದ್ಧಕಾಲದಲ್ಲಿ ಅಪ್ರಿಯವಾದ ಮಾತನ್ನು ಕೇಳಿದರೆ, ನಾನು ದೇಹತ್ಯಾಗ ಮಾಡುವೆನು" ಎಂದು ತಿಳಿಸಿದನು.

ಅಲ್ಲಿಂದ ಧರ್ಮರಾಯನು ಹೊರಟು ಕೃಪಾಚಾರ್ಯರಿರುವಲ್ಲಿಗೆ ತೆರಳಿದನು. ಅವನೂ ಪಾಂಡವರನ್ನು ಕೊಲ್ಲುವುದಿಲ್ಲವೆಂದು ಭರವಸೆ ಕೊಟ್ಟನು. ಬಳಿಕ ಶಲ್ಯನನ್ನು ಕಂಡು ಅದೇ ರೀತಿ ಬಿನ್ನವಿಸಲು, ಅವನು ಸೂರ್ಯಪುತ್ರನಾದ ಕರ್ಣನ ತೇಜಸ್ಸನ್ನು ತಾನು ಕುಂದಿಸುವೆನೆಂದು ಭಾಷೆಕೊಟ್ಟನು.

ಹೀಗೆ ಮುಖ್ಯರಾದ ನಾಲ್ವರಿಂದ ಅಭಯ ಪಡೆದು, ಉಭಯ ಸೇನೆಗಳ ಮಧ್ಯದಲ್ಲಿ ಧರ್ಮರಾಯನು ನಿಂತುಕೊಂಡು,–"ಈ ಸೈನ್ಯಗಳಲ್ಲಿ ಜೀವಿತರಾಗಿರಬೇಕೆಂಬ ಆಸೆಯು ಯಾರಲ್ಲಿರುವುದೊ ಅವರು ಭಗವಾನ್ ಶ್ರೀಕೃಷ್ಣನ ಆಶ್ರಯವನ್ನು ಪಡೆಯಲಿ!" ಎಂದು ಕೂಗಿ ಹೇಳಿದನು. ಆಗ ಕೌರವರೊಳಗೊಬ್ಬನಾದ ಯುಯುತ್ಸುವು, ಕೌರವಸೇನೆಯನ್ನು ತ್ಯಜಿಸಿ, ಧರ್ಮರಾಯನಿಗೆ ಎರಗಿ,—"ನಾನು ಕೌರವಾನುಜನಾದರೂ ನನಗೆ ಅಭಯವನ್ನು ಪಾಲಿಸಬೇಕು. ಹಿಂದೆ, ರಾವಣಸೋದರನಾದ ವಿಭೀಷಣನು ಶ್ರೀರಾಮನ ಕಾಲ್ಗೆರಗಿ ಬದುಕಿಕೊಂಡನಲ್ಲವೆ? ಅವನಂತೆ ನನ್ನನ್ನು ಪಾಂಡವರು ಕಾಪಾಡಬೇಕು" ಎಂದು ಬೇಡಿದನು; ಆಗ ಧರ್ಮರಾಯನು "ವತ್ಸಾ, ನನಗೆ ಭೀಮಾರ್ಜುನರು ಹೇಗೆ ಪ್ರೀತಿಯ ಸೋದರರೊ ಅವರಂತೆಯೆ ನಿನ್ನನ್ನು ಮನೋಭೇದವಿಲ್ಲದೆ ಕಾಣುವೆನು. ಬಾ" ಎಂದು ಅವನನ್ನು ತಕ್ಕೈಸಿ ಕರೆದುಕೊಂಡು ತನ್ನ ರಥದ ಕಡೆಗೆ ಮರಳಿದನು. ರಥವನ್ನೇರಿ, ಅನಂತವಿಜಯವೆಂಬುವ ತನ್ನ ಶಂಖವನ್ನು ಧರ್ಮರಾಯನು ಊದಿದನು. ಕೂಡಲೆ ಭೂಮಿಯೊಡೆದಂತೆ ಶಂಖಗಳ ಗರ್ಜನೆಯಾಯಿತು.

ಶ್ರೀಕೃಷ್ಣನು ಆಗಲೆ ಪಾಂಚಜನ್ಯವನ್ನು ಮೊಳಗಿ, ಅರ್ಜುನನ ರಥದ ಕುದುರೆಗಳ ವಾಘೆಗಳನ್ನು ಸಡಿಲಿಸಿ ಚಪ್ಪರಿಸಿದನು. ಕೂಡಲೆ ರಥಿಕರೆಲ್ಲರೂ ಮುಂದರಿಸಿದರು. ಕುಣಿಯುತ್ತ ನಡೆವ ಕುದುರೆಗಳ

ಖುರಪುಟಗಳ ಧ್ವನಿಯೂ, ಮೂಗುಗಳಿಂದ ಹೊರಡುವ ಹೂಂಕಾರವೂ, ಕೋಲಗಂಟೆಗಳ ಘಣಘಣವೆಂಬ ಘನವಾದ ಶಬ್ದವೂ ದಿಕ್ಕುಗಳನ್ನು ತುಂಬಿದುವು. ಅರ್ಜುನನ ರಥವನ್ನು ಶ್ರೀಕೃಷ್ಣನು ಉಭಯಸೇನೆಗಳ ನಡುವೆ ನಿಲ್ಲಿಸಿ, "ಪಾರ್ಥಾ, ಅತ್ತ ನೋಡು, ಈ ಸೈನ್ಯಸಾಗರದ ಮಧ್ಯದಲ್ಲಿ ದುರಂತ ಪರಾಕ್ರಮಶಾಲಿಯಾಗಿ, ಪರಶುರಾಮನೊಡನೆಯೂ ಕಾದಿದವನೂ, ಅಗತ್ಯವಿದ್ದರೆ ಪರಮೇಶ್ವರನನ್ನು ಕಾದಲು ಸಿದ್ಧನಿರುವವನೂ, ತುದಿವೆರಳಲ್ಲಿ ಬಿಲ್ಲಿಗೇರಿಸಿದ ಅಂಬನ್ನು ಹಿಡಿದವನಾಗಿ ಸನ್ನದ್ಧನಾಗಿರುವವನೂ ಭೀಷ್ಮನು! ಆ ಹೊಂದೇರಿನಲ್ಲಿ ಮುಸೆಗಣೆಯು ಬತ್ತಳಿಕೆಯೊಡನೊಪ್ಪುವ ಕಸ್ತೂರಿ ತಿಲಕವನ್ನು ಇಟ್ಟ ಮೊಗವುಳ್ಳವನೆ ಬಿಲ್ಲಜಾಣ ದ್ರೋಣನು! ಅವನ ಬಳಿಯಲ್ಲಿ ಕರ್ಣಾಯತಾಸ್ತ್ರರಾಗಿರುವ ಹತ್ತು ಸಾವಿರಮುಕುಟವರ್ಧನರಿರುವರು. ಅಲ್ಲೆ ಸಾಯಲಂಜದ ವೀರರ ನಡುವೆ ಶಲ್ಯನು! ಒಂದು ಅಕ್ಷೌಹಿಣೀ ಸೈನ್ಯದಧಿಪತಿಯಾಗಿ ಕೆಂಪು ಕಣ್ಣುಗಳುಳ್ಳ ಮದ್ರೇಶ್ವರನನ್ನು ನೋಡಿದೆಯಾ? ನೀಲಕಂಠಸಮಾನ ಪರಾಕ್ರಮವುಳ್ಳ ಬಿಗಿದ ಹುಬ್ಬಿನ ಅಶ್ವತ್ಥಾಮನನ್ನು ನೋಡು. ಕೃಪ, ಗೌತಮ, ವಿಂಧ್ಯ ಮೊದಲಾದವರೊಂದೊಂದು ಅಕ್ಷೌಹಿಣೀ ಸೇನೆಯೊಡನೆ ಅತ್ತ ನಿಂದಿರುವರು. ಅರಿರಾಯಮರ್ದನನೆಂಬುವ ಬಿರುದನ್ನು ಪಂಡಿತ ನಾಯಕರು ಹಾಡುತ್ತಿರುವಾಗ ಯಾವನು ತನ್ನ ಬೆರಳಲ್ಲಿ ಬಿಲ್ಲನ್ನು ತಿರುಗಿಸುತ್ತ ನಿಂದಿರುವನೊ, ಅವನೇ ಕರ್ಣನು! ಹಾವಿನ ಹಳವಿಗೆಯ ಹೊಂದೇರಿನಲ್ಲಿರುವವನೆ ದುರ್ಯೋಧನನು! ಅಲ್ಲೇ ಕೋಪಿಸಿದ ಸರ್ಪಗಳ ಹಿಂಡಿನಂತೆಯೂ ಹಸಿದ ಸಿಂಹಗಳ ಗುಂಪಿನಂತೆಯೂ ಪ್ರಲಯರುದ್ರನ ಬಳಗದಂತೆಯೂ ದುರ್ಯೋಧನನ ಸೋದರರು ನಿಂದಿರುವರು. ಅತ್ತ ಆ ಕುದುರೆ ಸವಾರರ ಮಧ್ಯದಲ್ಲಿರುವವನು ಜಯದ್ರಥನು. ಬ್ರಹ್ಮನು ಮಹಾಪರ್ವತಗಳಿಂದ ಗಾತ್ರವನ್ನೂ, ಸಿಡಿಲಿನಿಂದ ಸತ್ವವನ್ನೂ, ಮೇಘಗಳಿಂದ ಧ್ವನಿಯನ್ನೂ ಕೂಡಿಸಿ ಯಾವನನ್ನು ಸೃಷ್ಟಿಸಿದನೆನ್ನಬಹುದೋ ಅಂತಹ ಭಗದತ್ತನೇ ಆನೆಗಳ ನಡುವೆ ಮದ್ದಾನೆಯಂತೆ ತೋರುವನಲ್ಲವೆ? ಅಭಿಮನ್ಯುವಿನಂತೆ ಕಾಣುವ ಆ ವೀರನೇ ವೃಷಕೇತುವು!" ಎಂದು ವಿವರಿಸಿ ಪರಿಚಯ ಹೇಳುತ್ತಿರಲು,—ಒಂದು ಕಡೆ ವಾದ್ಯರವವೂ ಮತ್ತೊಂದು ಕಡೆ ದೂಳಿಯೂ ಎದ್ದು ದಿಕ್ತಟವನ್ನು ತುಂಬಿದುವು.

"ಅರ್ಜುನಾ! ಈಗಲೊಮ್ಮೆ ನಿನ್ನ ಮಹಾ ಧನುಸ್ಸನ್ನು ತೂಗಿ

ಮಾತಾಡಿಸು! ಇಂತಹ ಮಹಾಯುದ್ಧದಲ್ಲಿ ವೀರನೆನಿಸಲು ಯೋಗ್ಯನಾದವನು ನೀನಲ್ಲದೆ ಮತ್ತಾರು?'' ಎಂದು ಕೃಷ್ಣನು ಅರ್ಜುನನಿಗೆ ಹೇಳಲು; ಅವನು ತನ್ನಿದಿರಲ್ಲಿ ಗುರುಹಿರಿಯರು ಮಿತ್ರಸೋದರರು ಬಂಧುಬಾಂಧವರುಗಳನ್ನು ಕಂಡನಾದುದರಿಂದ, ಕಾಯಸುಖಕ್ಕಾಗಿ ಒಡಹುಟ್ಟಿದವರನ್ನು ಕೊಲ್ಲುವ ಈ ಉದ್ಯೋಗವು ತನಗೆ ಯೋಗ್ಯವಲ್ಲವೆಂದು ಸುಮ್ಮನಾದನು.

"ಕೃಷ್ಣನೆ! ಇವರೆಲ್ಲರೂ ನನ್ನವರಲ್ಲವೆ? ನೀನು ನನಗೆ ಯುದ್ಧ ಮಾಡೆಂದು ತೋರಿಸಿಕೊಟ್ಟೆಯಲ್ಲವೆ? ನೀನು ಮದಾಂಧನೆ, ಬೋಧಕನೆ, ವಂಚಕನೆ, ಘಾತುಕನೆ? ಧನುಸ್ಸನ್ನು ತೂಗುವ ಬದಲಾಗಿ ಪರಿತಾಪದಿಂದ ನನ್ನ ತಲೆಯು ತೂಗುತ್ತಿದೆ. ನೀನೆಂದುದನ್ನು ತಿಳಿಯಲು ನಾನು ಅಸಮರ್ಥನಾಗಿರಬಹುದಾದರೂ, ಕುಲದ ಕೊಲೆಗೆ ಕೈಯಿಕ್ಕುವುದು ಕಾಕುತನವಲ್ಲವೆ? ಇಂದೋ ನಾಳಿಗೊ ಸಾಯುವ ಈ ಒಡಲಿನ ಸುಖಕ್ಕಾಗಿ ಯುದ್ಧವನ್ನು ಮಾಡಬೇಕೆನ್ನುವೆಯಾ? ನನ್ನಿಂದಾಗದು.

ಎಡಹಿದರೆ, ರುಜೆಯಾದಿಯಾಸ
ತ್ತಡಸಿದರೆ, ಮೇಣ್ ಆವ ತೆರದಿಂ
ದೊಡಲುವಿಡಿದರೆ, ಮರಣ ತಪ್ಪದು ಸುರರಿಗೊಳಗಾಗಿ ।
ಕೆಡುವ ಕಾಯವ ನಂಬಿ, ಬಂಧುಗ
ಳೊಡನೆ ವೈರವ ಮಸೆದು, ನರಕಕೆ
ನಡೆವನೇ ತಾನೆನುತ ರಥದಲಿ ಬಿಲ್ಲನಿಳುಹಿದನು.
ಹೊಳೆದು ಹೋಹೈಶ್ವರ್ಯರಭಸಕೆ
ತಲೆಯ ಮಾರಿ, ಅಧರ್ಮಕೋಟಿಯ
ಗಳಿಸಿ, ಬಳಿಕಾ ಫಲವನಲಸದೆ ಭವಭವಂಗಳಲೀ ।
ತೊಳಲಿ ಬಳಲುವ ಜೀವಭಾವದ
ಉಳಿವದಾವುದು? ಲಾಗು! ಮೂಢರ
ಬಳಕೆಗಾವಂಜುವೆವು. ಸಂಗ್ರಾಮಕೆ ನಮೋ ಎಂದ.

ಆದರೆ ಸಿಟ್ಟಾಗದಿರು'' ಎಂದು ಅರ್ಜುನನು ಕಂಪಿಸುತ್ತ, ಬಿಲ್ಲನ್ನು ಕೆಳಗಿರಿಸಿ, ತಾನೂ ರಥದಲ್ಲಿ ಒರಗಿ ಮೌನ ಧರಿಸಿದನು; ಶ್ರೀಕೃಷ್ಣನು ಈ ಮೂಢತನವನ್ನು ತಿಳಿದು ನಕ್ಕನು.

---

## ೧೨ ಕರ್ಮರಹಸ್ಯ

**ಕೃಷ್ಣ,**—ಧನಂಜಯನೆ! ಯುದ್ಧಕ್ಕೆ ವಿಮುಖನಾದೆಯೇಕೆ? ನಿನ್ನ ಶೌರ್ಯಕ್ಕೆ ಇದು ಕುಂದಲ್ಲವೆ? ತ್ರಿಜಗಚ್ಚಾಪಟವುಲ್ಲನೆನಿಸುವ ನೀನು ಈ ರೀತಿ ಮಾಡಿದರೆ, ನಿನ್ನ ಗೌರವವು ಎಲ್ಲಿ ಉಳಿಯಬಹುದು? ಕ್ಷಾತ್ರ ಧರ್ಮವನ್ನು ಭಾವಿಸದೆ, ಚಂದ್ರವಂಶದ ಶೀಲವನ್ನೆಣಿಸದೆ, ನಿಮ್ಮ ಹಿತ ವನ್ನೂ ಬಗೆಯದೆ, ಯುದ್ಧಕ್ಕಾಗಿ ಬಂದು ಈಗ ಉಪೇಕ್ಷಿಸುವುದೆ? ವೀರರಾದವರು ಇದೊಂದು ವಿಚಿತ್ರವೆಂದು ಭಾವಿಸರೆ? ಮೈಯಲ್ಲಿ ಬಾಣದ ಗಾಯವಿದೆಯೆ? ಹಣೆಯಲ್ಲಿ ಕತ್ತಿಯು ಮುರಿದುಳಿದಿದೆಯೆ? ಒಂದೇ ತಟಕು ರಕ್ತವಾದರೂ ನಿನ್ನಿಂದ ಹರಿದಿದೆಯೆ? ಇದಿಷ್ಟರಲ್ಲಿ ಧನುಸ್ಸನ್ನು ಕೆಳಗಿರಿಸಿದ ನಿನಗೆ ಎಣೆಯಾರು? ಹೆಂಗುಸರ ಮುಂದೆ ಅಸ್ತ್ರಶಸ್ತ್ರಗಳಲ್ಲಿ ನಿಮ್ಮ ಪ್ರವೀಣತೆಯನ್ನು ಹೊಗಳಿಕೊಳ್ಳುವಿರಿ; 'ಯಾವ ವೀರನು ತಾನೆ ನನಗೆ ಸರಿ?' ಎನ್ನುವಿರಿ; ಆದರೆ ಕುಂತೀಪುತ್ರಾ, ಚತು ರಂಗಬಲದ ಇದಿರಲ್ಲಿ ಯಾವನು ಮೋರೆ ತಿರುಹನೊ ಅವನೆ ವೀರ ನಲ್ಲವೆ? ಬಂಧುಹನನವೆಂದು ಹಂಬಲಿಸಿ ಯುದ್ಧದಿಂದ ಹಿಂಜರಿದರೆ, ಕ್ಷತ್ರಿ ಯನು ನರಕಕ್ಕೆ ಹೋಗುವನಲ್ಲವೆ? ಫಲ್ಗುಣನೆ, ಹದಿಮೂರು ವರುಷವೂ ನಿಮಗೆ ಅರಣ್ಯವಾಸವನ್ನು ಒದಗಿಸಿಕೊಟ್ಟ ಈ ಕೌರವನಲ್ಲಿ ಸಾಮ್ರಾಜ್ಯದ ಅರ್ಧಭಾಗವನ್ನು ಬೇಡುವುದಕ್ಕೆ ನನ್ನನ್ನು ಕಳುಹಿಸಿಕೊಟ್ಟೆಂದು, ನನಗೆಷ್ಟು ಅವಮಾನವನ್ನು ಅವನುಂಟುಮಾಡಿದನು!—ಈಗ ಇದನ್ನಾರು ಎಣಿಸುವರು? ಉತ್ತರಕುಮಾರನು 'ಪಲಾಯನ ಪಂಡಿತ'ನೆಂದು ಅವನನ್ನು ಹಿಯ್ಯಾಳಿಸಿ, ಅವನ ಕಥೆಯನ್ನು ನಮಗೆ ಹೇಳುವ ನೀನು, ಈಗ ಯುದ್ಧವಿಮುಖನಾಗಿ ಎಂತಹ ನಿಂದೆಗೆ ಒಳಗಾಗುವೆ, ನೋಡಿದೆಯಾ! ಹೀಗೆ ಯುದ್ಧಮಾಡಿ ಹಾಗೆ ರಾಜ್ಯಸೆಳೆಯಬೇಕೆಂದು ಹೇಳಿದ ನಿನ್ನ ಲವಲವಿಕೆಯು, ಈಗ ತಾನೆ ಎಲ್ಲಿ ಮರೆಯಾಗಿದೆ?

**ಅರ್ಜುನ,**—ನನ್ನ ಪರಾಕ್ರಮವನ್ನು ನೋಡಬೇಕಾದರೆ ಹಗೆಗಳ ಮುಂದೆ ನನ್ನನ್ನು ನಿಲ್ಲಿಸಿರಿ; ಅವರನ್ನು ವಿನಾಶಗೊಳಿಸಲು ಹಿಂದೆಗೆದರೆ ನಾನು ನಿಮ್ಮ ಮೈದುನನಲ್ಲ. ಆದರೆ ಭೀಷ್ಮನನ್ನೂ ಗುರು ಗುರುಸುತ ಕೃಪಾಚಾರ್ಯರನ್ನೂ ಹೇಗೆ ತಾನೆ ನೋಯಿಸಲಿ? ಮಿಂಚಿ ಮಾಯು

ವಾಗುವ ಸಂಪತ್ತಿಗಾಗಿ ಆತ್ಮನಾಶವನ್ನೂ ಮಾಡಿಕೊಂಡು ದುಷ್ಕರ್ಮಗಳಿಗಾಗಿ ನರಕವಾಸವನ್ನು ಜನ್ಮಾಂತರಗಳಲ್ಲೂ ಅನುಭವಿಸುವಂತೆ ಮಾಡುವಂತಹ ಈ ಯುದ್ಧಕ್ಕೆ ನಮಸ್ಕಾರವು! ಕುಲಧ್ವಂಸವನ್ನು ಮಾಡಿ ಗುರು ಬಂಧು ಸೋದರರನ್ನು ಕೊಂದು ಪಡೆವಂತಹ ರಾಜ್ಯವನ್ನು ಅನುಭವಿಸುವುದೆಂದರೆ, ಅದು ಅವರ ನೆತ್ತರನ್ನು ಉಂಡಂತೆಯೆ ಅಲ್ಲವೆ? ಅಂತಹ ಸೌಭಾಗ್ಯವು ನನಗೆ ಬೇಡವಾಗಿದೆ.

**ಕೃಷ್ಣ,**—ಮೂಢನೆ,—ನೀನು ಯಾರನ್ನು .ಕೊಲ್ಲುವೆಯೆನ್ನುವೆ? ನಿನ್ನಿಂದ ಸಾವರಾರು? ದೇಹಧಾರಿಯಾದ ಆತ್ಮನನ್ನು ವಿನಾಶಗೊಳಿಸುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ದೇಹವು ಪಂಚಭೂತಮಯವಾಗಿದೆ. ಅದೀಗ ತೋರಿ ಕ್ಷಣದಲ್ಲಿ ಮಾಯವಾಗುವ ಅನಿತ್ಯವಸ್ತುವು. ಇದೇ ನಿಜವೆಂದು ದೇಹವೆಂಬ ದೊಡ್ಡ ಸುಳ್ಳನ್ನು ನಂಬುವವರೇ ಮೂರ್ಖರು. ನಿತ್ಯನಾದ ಆತ್ಮನು ಅಳಿವನೆ, ಉದಯಿಸುವನೆ, ಅಗ್ಗಳಿಸುವನೆ, ಅಡಗುವನೆ? ಅಳಿವ ದೇಹದ ಬಳಿಯ ಸಾಕ್ಷಿರೂಪನೆ ಆತ್ಮನಲ್ಲವೆ? ನಿನ್ನಿಂದ ಆತ್ಮನು ಸಾವನೆಂದಾಗಲಿ, ನಿನ್ನ ಬಾಣದಿಂದ ನೋಯುವನೆಂದಾಗಲಿ, ಸುಮ್ಮನೆ ಅಹಂಕಾರದಿಂದ ಭಾವಿಸದಿರು. ಬಾಣವನ್ನು ಗಗನಕ್ಕಾದರೂ ಹೂಡಿದರೆ ಅದು ಗಗನವನ್ನು ಭೇದಿಸಬಲ್ಲುದೇ? ಧರ್ಮಕರ್ಮಗಳೆರಡೂ ಆತ್ಮನಿಗೆ ತಟ್ಟವು. ಅವನು ಗಗನಕ್ಕೂ ಸೂಕ್ಷ್ಮನಾಗಿರುವಾಗ ನಿನ್ನ ಬಾಣವೆಲ್ಲಿ ತಾನೆ ಅವನನ್ನು ತಟ್ಟುವುದು? ಈ ವೃಥಾಹಂಕಾರವನ್ನು ಬಿಟ್ಟು ಯುದ್ಧಮಾಡು.

**ಅರ್ಜುನ,**—ಮುರಮರ್ದನನೆ! ಬಂಧುಗಳನ್ನು ಅರ್ಜುನನು ಕೊಂದನೆಂದು ಜಗತ್ತು ನನ್ನನ್ನು ಮೂದಲಿಸದೆ? ಈ ಅಪವಾದಕ್ಕೇನು ಗತಿ? ಇಹದಲ್ಲಿ ಅಪವಾದವೂ ಪರದಲ್ಲಿ ಲೋಪವೂ ನನಗೆ ಉಂಟಾಗದೆ?

**ಕೃಷ್ಣ,**—ಅರ್ಜುನಾ, ಸೂರ್ಯಕಿರಣಗಳು ಚಾಂಡಾಲನ ಮೇಲೆ ಹರಿಯಲು ಅವುಗಳಿಗೆ ಹೊಲೆತನವಿರುವುದೆ? 'ನಾನು ಕೊಂದೆನು, ನನಗೆ ಪಾತಕವಾಯಿತು' ಎಂದು ಯಾರು ನಂಬಿ ಮರುಗುವನೊ ಅವನು, ಕರ್ಮಬಂಧನಕ್ಕೊಳಪಡುವನು. ಯಾವನು ನಿರ್ಲೇಪಿಯಾಗಿದ್ದು, ಕರ್ಮವನ್ನು ಮಾಡುವನೊ, ಯಾವನು ಮಮಕಾರ—ಅಹಂಕಾರಗಳಿಗೆ ಒಳಪಡನೊ ಅವನೆ ಮುಕ್ತನು. ಅವನಿಗೆ ಪಾಪದ ಲೇಪವಿಲ್ಲ.

**ಅರ್ಜುನ,**—ಹರಿಯೆ! ಸಮಸ್ತ ವಿಜ್ಞಾನದ ದೃಷ್ಟಿಯಲ್ಲಾದರೂ,

ಅಹಿಂಸೆಯೇ ಪರಮಧರ್ಮವೆಂಬುವ ವಾಕ್ಯವೆ ಸಾರೋದ್ಧಾರವಲ್ಲವೆ? ಹೀಗಿರುತ್ತ ಬಂಧುಹತ್ಯ ಮಾಡಿದವನಿಗೆ ನೂರೊಂದು ತಲಾಂತರಗಳ ತನಕ ರೌರವವು ತಪ್ಪಲಾರದಲ್ಲವೆ?

**ಕೃಷ್ಣ,**—ಆ ತತ್ವದ ಮರ್ಮವೇ ಬೇರೆ. ಆತ್ಮನೂ ಪರಮಾತ್ಮನೂ ಒಂದೇ ಪ್ರಕಾರವೆಂದು ನಂಬದವನು ಜೀವಹಿಂಸೆಯನ್ನು ಮಾಡುವನು. ಪಂಚಭೂತಾತ್ಮಕವಾದ ಸೃಷ್ಟಿಯಿದು. ಜೀವದ ಭ್ರಾಂತಿಯನ್ನು ಯಾವನು ಬಿಡುವನೊ ಅವನು ಕೊಂದರೂ ಸಾಯನು. ಕರ್ಮವು ಈ ದೇಹವನ್ನು ಹೂಡುವುದು, ಸಲಹುವುದು, ಕಳಚುವುದು. ನಿರ್ಮಲತೆಯಿಂದ ನಿರಹಂಕಾರದಿಂದ ಯಾವನು ಕರ್ಮಗಳನ್ನು ಮಾಡುವನೊ ಅವನು ಕರ್ಮಫಲದಿಂದ ಬಾಹಿರನು. ಇದು ಸುಕೃತ, ಇದು ದುಷ್ಕೃತವೆಂದು ಭಾವಿಸಿ ಮೋಸಹೋಗದೆ, ಕರ್ತೃವೂ ಭೋಕ್ತೃವೂ ಆತ್ಮನಲ್ಲವೆಂದು ತಿಳಿ. ತನಗೆ ಪಿತ್ತದ ಕುತ್ತಹಿಡಿದರೆ, ಲೋಕವೇ ತಿರುಗುತ್ತದೆಂಬ ಭ್ರಮೆಯಾಗುವುದು; ಅಜ್ಞಾನವು ತಲೆತಿರುಗಿಸುವ ಪಿತ್ತವು. ಅರ್ಜುನಾ! ಚರಾಚರವಾದ ಈ ಜಗತ್ತುಗಳೆಲ್ಲವೂ ನನ್ನ ಲೀಲಾಮಂತ್ರದಿಂದ ತೋರಿ ಅಡಗುವುವು. ಯಾವ ವಸ್ತುವನ್ನಾದರೂ ನೀನು ವಿಚಾರಕ್ಕೊಳಪಡಿಸಿದರೆ, ಅದು ನಾನೇ ಎಂದು ಕೊನೆಗೆ ತಿಳಿಯುವೆ. ಜಗತ್ತಿನಲ್ಲಿ ಚರಿಸುವವನೂ ನಾನೇ, ಅದೇ ನನ್ನ ಮಾಯೆಯು. ನಾನು ಸುಳಿಯಿಸಿದರೆ ಜಗತ್ತು ಸುಳಿವುದು, ಹಿಡಿದರೆ ಅಡಗುವುದು. ಆದುದರಿಂದ ಎಲ್ಲವೂ ನಾನೇ ಆಗಿರುವ ಕಾರಣ, ಗರ್ವವನ್ನು ಬಿಟ್ಟು ಎದ್ದೇಳು. ಧನುಸ್ಸನ್ನು ಎತ್ತಿಕೊ.

ಇಷ್ಟನ್ನು ಶ್ರೀಕೃಷ್ಣನು ತಿಳುಹಿದರೂ ಅರ್ಜುನನ ಬುದ್ಧಿಯು ಮತ್ತೂ ಜಡವಾಗಿರಲು, ಅವನು,—"ದೇವಾ! ನಾನು ಇನ್ನೂ ನನ್ನ ಮನೋವಿಕಾರವನ್ನು ಬಿಡಲಿಲ್ಲೆಂದು ದೂರದಿರಿ, ಸಿಟ್ಟಾಗದಿರಿ, ನನ್ನ ಬಿನ್ನಹವನ್ನು ಲಾಲಿಸಿರಿ; ಜಗದ್ಭರಿತರಾದ ನಿಮ್ಮ ಆ ಪರಮಪುರುಷ ಸ್ವರೂಪವನ್ನು ನನಗೆ ತೋರಿಸುವ ಅನುಗ್ರಹವಾಗಲಿ! ಈ ಸಕಲ ಚರಾಚರವಾದ ಜಗತ್ತು ನಾನೆ, ಎಂದಿರಷ್ಟೆ! ಎಲ್ಲಿ? ಅದನ್ನು ನೋಡೋಣ. ಅದನ್ನು ಪ್ರತ್ಯಕ್ಷವಾಗಿ ಕಾಣಲಾರೆನಾದರೆ, ನಾನು ನಿಮ್ಮ ತತ್ವವನ್ನು ಹೇಗೆ ತಿಳಿದುಕೊಳ್ಳಲಿ? ನಾನು ನಿಮ್ಮ ದಾಸನು. ಕೋಮಲವಾದ ಆ ನಿಮ್ಮ ವಿಲಾಸಮೂರ್ತಿಯನ್ನು ಪ್ರಕಟಿಸಬಾರದೆ?" ಎಂದು ಬೇಡಿಕೊಂಡನು.

ಶ್ರೀಕೃಷ್ಣನು ಆಗಲೆ ಅನ್ಯಾದೃಶವಾದ ತನ್ನ ವಿರಾಟ್‌ಸ್ವರೂಪವನ್ನು ತೋರಿಸಿದನು. ಅಹ!

ಬಿಳಿದು ಕರಿದೆಂಬಾರು ಬಣ್ಣದ
ಹೊಲಬ ಹೊದ್ದದ ಸೂರ್ಯಕೋಟಿಯು
ಹೊಳೆವ ನಖದೀಧಿತಿಯು ಹೋಲದ ನಿಜದ ಹೊಸ ಪರಿಯ ।
ಅಳವಿನಳತೆಯು ಜನನವಾರ್ತೆಯ
ಸುಳಿವು ಸೋಂಕದ ಸಕಲಲೋಕ
ಪ್ರಳಯಕಾರಣ ತೆಗೆದನಗ್ಗದ ವಿಶ್ವರೂಪವನು.

ಸೂರ್ಯಕೋಟಿಯು ಹೊಳಪುಳ್ಳ ಆ ಮೂರ್ತಿಯನ್ನು ಕಂಡ ಅರ್ಜುನನೇ ಧನ್ಯನು. ಲೋಕಪ್ರಳಯಕಾರಣನಾದ ಕೃಷ್ಣನ ಆ ವಿಶ್ವರೂಪವನ್ನು ಅರ್ಜುನನು ಕಣ್ಣಾರೆ ಕಂಡನೆಂದರೆ, ಅವನೆ ಅರೂಪನು ರೂಪವನ್ನು ತಳೆವಂತೆ ಮಾಡಿದನೆಂದಾಯಿತಲ್ಲವೆ? ಅವನ ಕಣ್ಣುಗಳಿಗೆ ಹಬ್ಬವಾಯಿತು; ಮನವು ತುಂಬಿ ಉಕ್ಕೇರಿತು; ನಾಲಗೆ ಮೂಲವನ್ನು ಸೇರಿತು. ಅವನ ಅಹಂಕಾರವು ಅಡಗಿತು. "ಇವನೇ ವಿರಾಟ್‌ಸ್ವರೂಪನು. ಇವನನ್ನು ನಾನು 'ಭಾವಾ—ಭಾವಜೀ' ಎಂದು ಕರೆದೆನಲ್ಲ! ನನ್ನ ಸಲುಗೆಯೆಷ್ಟಾಗಿದ್ದಿತು!

ಪರುಷ ಕಲ್ಲೆಂದಿಡಿಕಿ, ಸುರತರು
ಮರನು ತೆಗೆಯೆಂದಮರ ಧೇನುವ
ಪರರ ಮನೆಯಲಿ ಮಾರಿ, ಚಿಂತಾಮಣಿಯ ಕೈದುಡುಕಿ ।
ಹರಳು ಟಿಕ್ಕೆಯದೆಂಬ ಪಾಪಿಗೆ
ಪರಮಗುರು ನಾನಾದೆನೈ, ಮುರ-
ಹರನ ಮೈದುನನೆಂದು ಗರ್ವಿಸಿ ಕೆಟ್ಟೆ ನಾನೆಂದ.

ಪರುಷವನ್ನು ಕಲ್ಲೆಂದು ಭಾವಿಸಿದೆನು. ಕಾಮಧೇನುವನ್ನು ಮಾರಿ, ಚಿಂತಾಮಣಿಯನ್ನು ಟಿಕ್ಕೆ ಎಂದು ಎಣಿಸಿದ ಭ್ರಾಂತನಾದೆನಲ್ಲ! ಕೃಷ್ಣನೆ ಮೈದುನನೆಂದು ಭಾವಿಸಿದ ನನ್ನ ಸಲುಗೆಯೇ ನನ್ನನ್ನು ಮೋಸಗೊಳಿಸಿತು. ಎರೆಹುಳುವೊಂದು ಮಹಾಪ್ರಾಣಿಯೆ? ಮಿಂಚುಹುಳುವು ಕೋಟಿಸೂರ್ಯ ಪ್ರಕಾಶದ ಇದಿರಿನಲ್ಲಿ ಎಲ್ಲಿ ನಿಲ್ಲುವುದು? ಅಧಮನರಪ್ರಾಣಿಯಾದ ನಾನೆಲ್ಲಿ, ಈ ಪರಮ ತತ್ವಮೂರ್ತಿಯೆಲ್ಲಿ? ನಾನು ಭೂಪಾಲಕನಂತೆ, ಈತನೆ ನನಗೆ ಸಾರಥಿಯಂತೆ! ಅಹಹ! ಏನು ವಿಚಿತ್ರವಿದು!"

ಹಸುಳೆಗಮರಾಚಲದ ಹೊರೆ ಸೈ—
ರಿಸುವುದೇ? ಮರಿಹುಲ್ಲೆ ಸಿಂಹದ
ಮಸಕಕಿದಿರೇ? ಎಳೆಲತೆಯು ಕುಡಿ ಮಾಳಿಗೆಗೆ ತೊಲೆಯೆ? ।
ಸಸಿದರಳೆ ಸಿಡಿಲೆರಗಿದರೆ ಜೀ—
ವಿಸುವುದೇ? ನಿಮ್ಮಡಿಯು ವಿಶ್ವ—
ಪ್ರಸರರೂಪಿಂಗಾನು ಲಕ್ಷ್ಯವೆ, ದೇವ, ಹೇಳೆಂದ.

ಎಂದು ಆಗಾಗ ಗದ್ಗದ ಸ್ವರದಿಂದ ಎನ್ನುತ್ತ, ಹಂಬಲಿಸುತ್ತ, ಆನಂದದಿಂದ ನಲಿವುತ್ತ, ಭಯದಿಂದ ನಡುಗುತ್ತ, ಕೊನೆಗೆ ಅವನ ಕಾಲಿಗೆರಗಿದನು. "ಅನಂತವೇದಗಳೂ ಯಾವನ ಗುಣಗಳನ್ನು ಬಣ್ಣಿಸಿ ಮೂಗಾದುವೊ ಅಂತಹ ಮೂರ್ತಿಯನ್ನೆ ಪ್ರತ್ಯಕ್ಷವಾಗಿ ಇನ್ನು ನನ್ನ ಕಣ್ಣುಗಳು ನೋಡಲಾರವಾಗಿವೆ.

ಅಳಕನಿಚಯದ ಕುಂಭಿನೊಸಲಿನ
ತಳಿತೆವೆಯ ನಿಡುಹುಬ್ಬುಗಳ ಕೋ—
ಮಲ ಸುಮುಕ್ತಾಫಲಕೆ ಸೆಣಸುವ ದಂತಪಂಕ್ತಿಗಳಾ ।
ಲಲಿತ ಚುಬುಕದ ಚಾರುತರ ಮಂ—
ಡಲದ ಸುಳಿನಾಭಿಯ ಸುವೃತ್ತದ
ವಿಲಸಿತೋರುದ್ವಯದ ಮುನ್ನಿನ ರೂಪು ತೋರೆಂದ.

ಯೌವನದ ಮೊಗವು, ಮುಗುಳುನಗು, ಮಿಂಚುವ ನೊಸಲು, ಎಸಳಂತಿರುವ ಕಣ್ಣುಗಳು, ಹೊಳೆವ ಗಲ್ಲಗಳು, ಮಕರಕುಂಡಲಗಳುಳ್ಳ ಕಿವಿಗಳು, ಕೌಸ್ತುಭಮಣಿಹಾರವು ತೂಗುವ ವಕ್ಷವು, ನಿಡಿದಾಗಿರುವ ತೋಳುಗಳು, ಕೋಮಲವಾದ ವಲಯವು, ಪೀತಾಂಬರದ ತೊಡಿಗೆಯು—ಇವಿಷ್ಟೂ ಇದ್ದ ಕೃಷ್ಣನ ಆ ಸುಪರಿಚಿತರೂಪವನ್ನು ಇನ್ನು ತೋರಬೇಕು" ಎಂದು ಕೋರಿದನು.

ಆ ವಿಶ್ವರೂಪದಲ್ಲಿ ರುದ್ರರು ಮರುತ್ತುಗಳು ಜಗತ್ತುಗಳು ಸುರರು ಮೊದಲಾದವರನ್ನು ಗಣನೆ ಮಾಡುವವರು ಯಾರು? ಇಡೀ ವಿಶ್ವವೇ ಭಗವಂತನ ಮಾಯೆಯೆಂದೂ; ಅವನ ಇಚ್ಛೆಯಂತೆ ಅದು ಅವನಲ್ಲಿ ಲೀನವಾಗುವುದು, ಇಲ್ಲವೆ, ಪ್ರತ್ಯೇಕಗೊಂಡು ಪ್ರಕಟಗೊಳ್ಳುವುದು ಎಂದೂ; ವಿಶ್ವದಲ್ಲಿನ ಕರ್ಮಗಳೆಲ್ಲವೂ ವಿಶ್ವಕರ್ಮನವೇ ಎಂದೂ ತಿಳಿದ ಬಳಿಕ, ಕೌರವರಷ್ಟು ಮಂದಿಯೂ ತನ್ನ ಅಣ್ಣತಮ್ಮಂದಿರೂ, ಬಂಧುಬಾಂಧವರೂ,

ಮೊದಲಾಗಿ ಎಲ್ಲರೂ ಆ ವಿಶ್ವರೂಪನಲ್ಲಿ ಅಡಗಿದ್ದುದನ್ನು ತಿಳಿದ ಬಳಿಕ, ಅರ್ಜುನನಲ್ಲಿದ್ದ ಮೋಹಾಂಧಕಾರವು ತೊಲಗಿತು. ಇನ್ನು ನೀವೆಂದಂತೆ ಮಾಡಲು ಸಿದ್ಧನಿರುವೆನೆಂದು ಅರ್ಜುನನು ಹೇಳುತಿದ್ದಂತೆಯೆ, ಭಗವಂತನು ತನ್ನ ಹಿಂದಣ ಕೃಷ್ಣರೂಪವನ್ನೇ ತಳೆದು ವಾಘೆಗಳನ್ನು ಸೆಳೆದು, ಕುದುರೆಗಳನ್ನು ನಡೆಯಿಸಿ, "ಅರ್ಜುನಾ ಧನುಸ್ಸನ್ನೆತ್ತಿಕೊ!" ಎಂದನು. ಭೂಭಾರ ಪರಿಹಾರಕ್ಕಾಗಿ ಪಾಂಡವರೆ ತನ್ನ ಪ್ರಾಣಗಳೆಂದು ಅರ್ಜುನನ ಸಾರಥಿಯಾದ ಭಗವಂತನ ಮಹಿಮೆಯನ್ನು ಹೇಗೆ ಕೊಂಡಾಡಬಹುದು?

ಮೋಹವಿಗೆ, 'ಪಾಂಡವ ಮಮ ಪ್ರಾ—
ಣಾಹಿ' ಎಂಬೀ ಬಿರುದು ಸಲಹಲು,
ಗಾಹಿನಲಿ ಮೇದಿನಿಯ ತಿಣ್ಣವ ತಿದ್ದಲೋಸುಗವೇ, ॥
ಆಹವದಲರ್ಜುನನ ರಥದಲಿ
ವಾಹಕನು ತಾನಾಗಿ ಶರಣ ।
ಸ್ನೇಹ ಸಂಸಾರಾನುರಾಗನು ಸುಳಿಸಿದನು ರಥವ.

---

## ೧೩. ಯುದ್ಧದ ಮೊದಲನೆ ದಿನ.

ಅರ್ಜುನನು ಪುನಃ ಧನುರ್ಧಾರಿಯಾಗಲು, ಅವನ ರಥವು ಮುನ್ನಡೆಯಿತು. ಮಿಕ್ಕ ಪಾಂಡವ ವೀರರೆಲ್ಲರೂ ತಮ್ಮ ರಥಗಳನ್ನು ಮುನ್ನಡೆಸಿದರು. ಕರ್ಣನು ಗಜಬಜಿಸಿದನು; ದುರ್ಯೋಧನನು ಬಿಲ್ಲನ್ನೆತ್ತಿಕೊಂಡನು; ಕೌರವ ಸೋದರರೂ ಧನುಸ್ಸಿಗೆ ಕೈಯಿಕ್ಕಿದರು. ಸುಧರ್ಮ, ಶಲ್ಯ, ದ್ರೋಣ, ದ್ರೋಣಪುತ್ರ, ಹೀಗೆ ಕೌರವಪಕ್ಷದವರೆಲ್ಲರೂ ಸನ್ನದ್ಧರಾದರು. ಶಕುನಿಯು ಸಹದೇವನಿಗೂ, ದುಶ್ಯಾಸನನು ಸಾತ್ಯಕಿಗೂ, ಶಲ್ಯನು ನಕುಲನಿಗೂ, ಸೈಂಧವನು ಕುಂತೀಭೋಜನಿಗೂ ಇದಿರಾಗಿ ನಿಂದರು. ದ್ರುಪದನು ದ್ರೋಣನನ್ನು ಬಾಣಗಳಿಂದ ನೋಯಿಸಿದನು; ದ್ರುಪದಪುತ್ರನು ಭೀಷ್ಮನನ್ನು ಸೆಣಸಿದನು; ಅಭಿಮನ್ಯುವು ಲಕ್ಷ್ಮಣಕುಮಾರನನ್ನು ಮೂದಲಿಸಿದನು. ಆಗ ತಾನೆ ಭೀಮನು ಕೌರವರೆಲ್ಲರನ್ನು ಯುದ್ಧಕ್ಕೆ ಕರೆದನು. ಅವನ ಮಗನಾದ ಘಟೋತ್ಕಚನು ಭಗದತ್ತನಲ್ಲಿ ಕಾಳಗಕ್ಕಾರಂಭಿಸಿದನು;

ಆನೆಗಳನ್ನು ಕೊಲ್ಲುವುದೇ ಮುಖ್ಯೋದ್ಯೋಗವಾದ ಭೀಮನು, ಕೌರವರೊಬ್ಬರೂ ಮುಂದರಿಯದಂತೆ ತಡೆದು, 'ರಾಜ್ಯದ ಮೇಲೆಯೆ ಆಸೆಹಿಡಿದಿರುವ ಆ ದುರ್ಯೋಧನನನ್ನು ಇತ್ತಕರೆಯಿರಿ'ಂದು ತನ್ನ ಗದೆಯನ್ನೆತ್ತಿ ಕೂಗಿದನು. ಅವನ ಬೆಂಬಳಿಯಲ್ಲಿ ಸಾತ್ಯಕಿ, ನಕುಲ, ದ್ರುಪದಪುತ್ರರು ನಿಂದು ಕಾದುತಿರಲು ನಕುಲನೂ ಅಭಿಮನ್ಯುವೂ ದುರ್ಯೋಧನನನ್ನು ಇದಿರು ತರುವುದಕ್ಕಾಗಿ ಮಿಕ್ಕವರನ್ನು ಕೊಂದುದರಿಂದ, ಗಿರಿಗಳಂತೆ ಆನೆಗಳ ಹಿಂಡುಗಳು ಬಿದ್ದು ರಥಗಳ ಕುದುರೆ ಶವಗಳ ರಾಶಿಯಲ್ಲಿ ಹೂತು, ಭೀಮನಿಗೇ ಮುನ್ನಡೆಯಲು ದಾರಿ ಸಿಗದಾಯಿತು. ಭೀಮನು ಅಲ್ಲಿಂದಲೆ, "ಓಹೋ! ಹೆಂಡಿರ ಪ್ರೀತಿಗಾಗಿ ಮರುಳಾಗಿರುವವರು ಹಿಂದಕ್ಕೆ ಸರಿಯಿರಿ! ಕೌರವರನ್ನು ಬತ್ತಿಸಲು ಬಂದಿರುವೆನು! ಮುಂದಕ್ಕೆ ಬಂದರೆ ಸಾಯುವಿರಿ!" ಎಂದು ಬೊಬ್ಬಿರಿದನು. ದುರ್ಯೋಧನನು "ಯಾರವನು ಹಾಗೆನ್ನುವವನು? ಮಾತಿನ ಪರಾಕ್ರಮದಿಂದಲೆ ನಮ್ಮನ್ನು ನಡುಗಿಸಲು ಬಂದಿರುವ ಇವ ನಾರು? ಮೊಗ ನೋಡೋಣ!" ಎಂದು ಬೆದರದೆ ಮುಂದಕ್ಕೆ ಬಂದನು. ಅವನ ಎಡಬಲಕ್ಕೂ ಕೌರವಪಕ್ಷದ ಪ್ರಮುಖರೆಲ್ಲರೂ ಬಂದು ನಿಂದರು. ದುರ್ಯೋಧನನು "ಅಂದು ನಿಮ್ಮ ಹೆಂಡತಿಯನ್ನು ಗೆದ್ದುಕೊಂಡ ನಾನು ಇಂದು ಜಯಲಕ್ಷ್ಮಿಗಾಗಿ ಬಂದಿರುವೆನು. ನೀನೇಕೆ ರಾಜ್ಯಕ್ಕಾಗಿ ಬಂದಿರುವೆ? ಜೀವದಾಸೆ ಇದ್ದರೆ ಹಿಂದಿರುಗು" ಎಂದು ಭೀಮನಿಗೆ ಕೂಗಲು, ಅವನು—"ದುಶ್ಶಾಸನನ ರಕ್ತವನ್ನು ಕುಡಿದು, ನಿನ್ನ ತೊಡೆಗಳನ್ನು ಒಡೆದು, ಈ ರಾಜ್ಯವನ್ನು ಗೆದ್ದುಕೊಳ್ಳಲು ಬಂದ ನಾನು, ದ್ರೌಪದಿಯು ನನಗೆ ಹೆಂಡತಿಯಾಗಿರುವಂತೆ ರಾಜ್ಯಲಕ್ಷ್ಮಿಯೂ ನನ್ನವಳೇ ಸರಿ ಎಂದು ನಿನಗೆ ತೋರಿಸುವೆನು. ಬಾ!" ಎಂದು ಉತ್ತರ ಕೇಳುತ್ತಲೇ ಕೌರವಪಕ್ಷದವರಲ್ಲಿ ದಿಗ್ಭ್ರಮೆಯುಂಟಾಗುವ ಹಾಗೆ ಭಯಂಕರವಾಗಿ ಕಾದಾಡಲು, ದುರ್ಯೋಧನನೊಬ್ಬನನ್ನೆ ಅಲ್ಲಿ ಬಿಟ್ಟು, ಆ ಸೈನಿಕರು ಸಿಕ್ಕಿದ ಕಡೆಗೆ ಪಲಾಯನ ಮಾಡಿದರು. ದುರ್ಯೋಧನನು ಇನ್ನು ಮೋಸ ಹೋಗುವನೆಂದು ತಿಳಿದು, ಭೀಷ್ಮನು ಅವನಿದ್ದಲ್ಲಿಗೆ ತನ್ನ ರಥವನ್ನು ನಡೆಸಿದನು. ಭೀಮನು "ಪಿತಾಮಹನೆ, ನೀವು ನನಗಿದಿರಾಗಿ ಬರುವ ಅನುಗ್ರಹವನ್ನು ತೋರಿಸಿದ ಬಳಿಕ, ನಾನೇತಕ್ಕೆ ಯುದ್ಧಮಾಡದಿರಬೇಕು?" ಎಂದು ಬಾಣಗಳನ್ನು ಎಸೆಯಲು ಸಿದ್ಧನಾಗಲು, ಭೀಷ್ಮನು ಅವನ

ಧನುಸ್ಸನ್ನು ಕತ್ತರಿಸಿ ಅವನನ್ನು ನೋಯಿಸಿದನು. ಆಗಲೇ ಪಾಂಚಾಲರೂ ವೈರಾಟರೂ ಅಲ್ಲಿಗೆ ನೆರೆದು ಬಂದು ಭೀಷ್ಮನನ್ನು ಇದಿರಿಸಿದರು. ಅವರ ವಿನಾಶವನ್ನು ಭೀಷ್ಮನು ಸಾಧಿಸುವನೆಂದು ಅರ್ಜುನಸಾರಥಿಯಾದ ಕೃಷ್ಣನು ತಿಳಿದು, ತನ್ನ ಕುದುರೆಗಳನ್ನು ಅತ್ತ ತಿರುಗಿಸಿದನು. ಅವನು ಬರು ವುದರೊಳಗೆ ಭೀಷ್ಮನು ಎಂಟೇ ಬಾಣಗಳಲ್ಲಿ ಭೀಮನನ್ನು ಸೋಲಿಸಿದನು.

ಆಗ, ಅರ್ಜುನನು ಭೀಷ್ಮನಿಗಿದಿರಾಗಿ ಬಂದು, ಎರಡು ಬಾಣಗಳನ್ನು ಅವನ ಚರಣಗಳ ಕಡೆಗೆ ಎಸೆದು ವಂದಿಸಲು, ಭೀಷ್ಮನು ಅವನನ್ನು ಆಶೀರ್ವದಿಸಿದನು. "ವತ್ಸ, ಯಾವನಿಗೆ ಭಗವಂತನೆ ಸಾರಥಿಯಾಗಿರು ವನೊ ಆವನನ್ನು ಪರಾಜಯಗೊಳಿಸುವವರಾರು?" ಎಂದನು. ಬಳಿಕ, ಭೀಷ್ಮಾರ್ಜುನರೊಳಗೆ ಮಹಾಯುದ್ಧವು ಪ್ರಾರಂಭವಾಯಿತು.

ಅತ್ತ ಧರ್ಮರಾಯನನ್ನು ಶಲ್ಯನು ಇದಿರಾಗಿ ವಿರಥನನ್ನಾಗಿ ಮಾಡಿದನು. ಆಗ ಶಲ್ಯನನ್ನು ಕಾದಾಡಲು ಉತ್ತರನು ಇದಿರಾದನು. ಶಲ್ಯನು 'ಅಹ್ಹಾ! ಗೋಗ್ರಹಣಕಾಲದಲ್ಲಿ ಧುರದಿಶಾಪಟನೆನಿಸಿದ ಮಹಾ ವೀರನೆ!' ಎಂದು ಉತ್ತರನನ್ನು ಮೂದಲಿಸಲು, ಅವನು ಶಲ್ಯನ ಧನುಸ್ಸನ್ನು ತುಂಡುಮಾಡಿದನು; ಅದಕ್ಕಾಗಿ ಶಲ್ಯನು ಮಹಾಸ್ತ್ರವೊಂದನ್ನು ಅಭಿ ಮಂತ್ರಿಸಿ, ಉತ್ತರನಿಗೆ ಎಸೆಯಲು, ಅವನು ಪ್ರಾಣತ್ಯಾಗವನ್ನು ಮಾಡಿ ವೀರಸ್ವರ್ಗವನ್ನು ಸೇರಿದನು. ಅದುವರೆಗೂ ಭೀಷ್ಮಾರ್ಜುನರೊಳಗೆ ಮಹಾಯುದ್ಧವು ನಡೆಯುತ್ತಲೇ ಇದ್ದಿತಾದರೂ, ಭೀಷ್ಮನಿಗಾಗಲಿ ಅರ್ಜುನ ನಿಗಾಗಲಿ ನಿಶ್ಚಿತವಾದ ಜಯವು ದೊರೆತಿರಲಿಲ್ಲ. ಉತ್ತರನು ಮಡಿದನೆಂದು ಆ ಕಡೆಗೆ ಅರ್ಜುನನು ಮುಹೂರ್ತ ಮಾತ್ರ ಕಣ್ತಿರುಗಿಸಿ, ಪುನಃ ಭೀಷ್ಮನ ಕಡೆಗೆ ಬಾಣ ತಿರುಗಿಸುವುದರೊಳಗೆ,—ಭೀಷ್ಮನು ತನ್ನ ಪ್ರತಿಜ್ಞೆಯಂತೆ ಹತ್ತು ಸಾವಿರ ರಥಿಕರನ್ನು ಕೊಂದಿಕ್ಕಿದನು. ಅಷ್ಟರಲ್ಲಿ ಅಸ್ತಮಾನಕಾಲ ವಾಗಲು ಯುದ್ಧಾಭಿನಯಕ್ಕೆ ತಡೆಯಾಯಿತು. ಇತ್ತಂಡಗಳು ಪಾಳೆಯಗಳ ಕಡೆಗೆ ತೆರಳಿದುವು.

## ೧೪. ಪಕ್ಷ ಪಾಂಡವರಲ್ಲಿ!

ಯುದ್ಧವು ಅಂದಿಗೆ ಮುಗಿಯಿತಾದರೂ, ಯುದ್ಧರಂಗದಲ್ಲಿ ಶಾಂತತೆ ಇರಲಿಲ್ಲ. ಮೃತ್ಯುವಿಗೆ ಅಂದು ಭಾಗ್ಯೋದಯುವಲ್ಲವೇ? ಯಮನು ಸಂತುಷ್ಟನಾದನು; ಜಂಬುಕಗಳ ಸಮೂಹವು ಶವಗಳಿಗೆ ಮುತ್ತಿಗೆ ಹಾಕಲು ನೆರೆದು ಬಂದಿತು; ಶಾಕಿನೀಡಾಕಿನಿಗಳಿಗೆ ಉತ್ತರೋತ್ತರವಾಯಿತು. ಕರುಳುಗಳನ್ನು ಹೊರಕ್ಕೆಳೆದು ಚಪ್ಪರಿಸಿ ಕುಣಿದು ತೇಗುವುದೂ, ಕಪಾಲ ಪಾತ್ರೆಗಳಲ್ಲಿ ರಕ್ತವನ್ನು ಹಿಂಡಿ ಕುಡಿದು ಕೊಂಕಾಗಿ ಕುಣಿವುದೂ, ಮೊದಲಾಗಿಯಲ್ಲದೆ, ಕೌರವಪಾಂಡವರು ಇಂತಹದೊಂದು ಯುದ್ಧವನ್ನೊಡ್ಡಿದರೆಂದು ಅವರನ್ನು ಹೊಗಳುತ್ತ ಹಾಡುವುದೂ ಪಿಶಾಚಿಗಳ ಉದ್ಯೋಗವಾಯಿತು. ಕಣ್ಣಾಲಿಗಳನ್ನೆ ಕೀಳುವ ಕಾಗೆಗಳೂ, ಹಿಮ್ಮಡಿಯ ನರಗಳನ್ನೆ ಕಚ್ಚಿ ಸೆಳೆವ ನರಿಗಳೂ, ಮಾಂಸಖಂಡಗಳನ್ನು ಮೆಲ್ಲಲು ಬರುತಿದ್ದ ಗೂಗೆಗಳೂ, ರಕ್ತಕುಡಿದು ಓಕುಳಿಯಾಡುವ ಬೇತಾಳರೂ ಒಬ್ಬರನ್ನೊಬ್ಬರು ಕರೆದು ಕೂಗುತಿದ್ದರು. ತೆಳ್ಳನೆ ತೊಗಲುಗಳ ಸೀರೆಗಳನ್ನುಟ್ಟು, ಎಳೆಕರುಳುಗಳ ಮಾಲೆಗಳನ್ನು ಧರಿಸಿ, ಮಿದುಳಿನ ಕಜ್ಜಾಯಗಳನ್ನು ಉಂಡು ಪೂತನಿಗಳು ಮೆರೆದರು. ಅತ್ತ ಪಾಳೆಯಗಳಲ್ಲಾದರೂ ಸೀಸಕಗಳನ್ನು ಬಲಿಸಿ, ಕವಚಗಳನ್ನು ಹೊಲಿಸಿ, ಕಳಚಿದ ಆಯುಧಗಳಿಗೆ ಕೀಲ್ಗಳನ್ನು ಸಿಲ್ಕಿಸಿ, ಈಟಿಗಳಿಗೆ ಕಾವುತೊಡಿಸಿ, ನಿದ್ರೆಯಿಲ್ಲದೆ ಎರಡೂ ಪಾಳೆಯಗಳೂ ಯುದ್ಧೋದ್ಯೋಗವನ್ನೆ ಮಾಡುತಿದ್ದುವು. ಸೈನಿಕರಲ್ಲಿ ಆಹತರಾದವರ ಹರಿದ ಕೊರಳನ್ನು ಬಿಗಿದರು; ಭುಜದಲ್ಲಿ ಮುರಿದ ಬಾಣಗಳನ್ನು ಕಿತ್ತರು; ಹೊಟ್ಟೆ ಹರಿದು ಹೊರಬಿದ್ದ ಕರುಳುಗಳನ್ನು ಒಳಗೊತ್ತಿ ಹೊಲಿದರು. ಹಾಗೆಯೆ ಆನೆ ಕುದುರೆಗಳಲ್ಲಿ ಗಾಯವೊಡೆದುವುಗಳಿಗೆ ಯೋಗ್ಯವಾದ ಔಷಧೋಪಚಾರಗಳನ್ನು ಮಾಡಿದರು. ಗಾಯಗಳನ್ನೆಲ್ಲ ಕಟ್ಟುವವರು ಕೆಲವರು; ತುಪ್ಪಗಳನ್ನು ಸವರುವವರು ಕೆಲವರು; ಮಂತ್ರೋದಕಗಳನ್ನು ಮಂತ್ರಿಸಿ ಕೊಡುವವರು ಕೆಲವರು; ಔಷಧಗಳನ್ನು ಅರೆದುಕೊಡುವವರು ಕೆಲವರು; ಹೀಗೆಲ್ಲರೂ ಅಂದಿನ ರಾತ್ರಿಯಲ್ಲಿ ಹಗಲನಲ್ಲಾದ ಹಾವಳಿಯ ಪರಿಹಾರವನ್ನು ಮಾಡಿದರು.

ಸೂರ್ಯನೊಡನೆ ಪುನಃ ಸೇನೆಗಳೂ ಉದಯಗೊಂಡುವು. ಸರಿ,

ಯುದ್ಧ ಬಿಗಿಯಿತು. ಭೀಷ್ಮನ ಬಾಣಗಳು ಪ್ರಲಯಾಗ್ನಿಯಂತೆ ಪಾಂಡವ ದಳವನ್ನು ಸುಟ್ಟುರುಹಿದವು. ಪಾಂಡವಪಕ್ಷವನ್ನು ಆಗ ಭೀಮನು ಕಾಪಾಡುತಿದ್ದನು. ಬಾಣವೃಷ್ಟಿಯು ಕತ್ತಲಲ್ಲಿ ಅವನು ದಾರಿ ತೋರ ದಾದನು.

ಕಡಿತಲೆಯು ಮಿಂಚುಗಳ, ಹೊಯ್ಲಿನ
ಸಿಡಿಲುಗಳ, ರಕ್ತಪ್ರವಾಹದ
ಕಡುಮಳೆಯು, ನೃತ್ಯದ ಕಬಂಧದ ಸೋಗೆನವಿಲುಗಳ
ಬಿಡುಮಿದುಳ ಹೊರಳಿಗಳ, ಹಂಸೆಯು
ನಡಹುಗಳ ನರಖಂಡದಲಿ ಹೆಣ
ನಡವಿತಳಿತಿಳೆ ಮೆರೆದುದೈ ಸಂಗ್ರಾಮಕಾರ್ಗಾಲ.

ಅರ್ಜುನನು ಭೀಷ್ಮನಿಗೆ ಇದಿರಾದರೆ ಕೌರವಬಲವನ್ನು ವಿನಾಶ ಗೊಳಿಸಲಾಗುವುದಿಲ್ಲವೆಂದು ತಿಳಿದು, ಕೃಷ್ಣನು ಅವನ ರಥವನ್ನು ಅತ್ತ ನಡೆಸಿರಲಿಲ್ಲ. ಸಾತ್ಯಕಿಯು ಬೇಗನೆ ಮುಂದಕ್ಕೆ ಬಂದು ಭೀಷ್ಮನೊಡನೆ ಯುದ್ಧ ಮಾಡಿ ಅವನ ಸಾರಥಿಯನ್ನು ನೋಯಿಸಿದನು. ಅತ್ತ ದ್ರೋಣಾಚಾರ್ಯರೊಡನೆ ಯುದ್ಧ ಮಾಡುವುದಕ್ಕಾಗಿ ಕೃಷ್ಣನು ವಿರಾಟ ಪುತ್ರನಾದ ಶಂಖನೆಂಬವನನ್ನು ಕಳುಹಲು, ಆ ಬಾಲಕನು ಪದೇ ಪದೇ ಆಚಾರ್ಯರ ಕೈಯ ಬಿಲ್ಲನ್ನು ಕಡಿದುಹಾಕುತಿದ್ದನು. ಅದೇ ಕಾಲಕ್ಕೆ ಸರಿಯಾಗಿ ಅರ್ಜುನನ ರಥವು ಭೀಷ್ಮನಿದಿರಿಗೆ ಬರಲು, ಭೀಷ್ಮಾರ್ಜುನ ರೊಳಗೆ ಭಯಂಕರವಾದ ಯುದ್ಧವು ನಡೆಯಿತು. ಆ ಯುದ್ಧದಲ್ಲಿ ಇಬ್ಬರೂ ಏಕಪ್ರಕಾರವಾಗಿ ಕಾದಾಡುತ್ತಿರಲು, ಭೀಷ್ಮನು ಅರ್ಜುನ ನೊಬ್ಬನೊಡನಲ್ಲದೆ ಇತರ ಯಾರೊಡನಾದರೂ ಕಾದಾಡಲಾರದಾದನು. ಅದನ್ನು ತಿಳಿದು ಲಜ್ಜಾಕ್ರಾಂತನಾದ ಗರುಡಿಯಾಚಾರ್ಯನು ಭಯಂಕರ ಕೋಪದಿಂದ ಆ ಬಾಲಕನ ಮೇಲೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಇಷ್ಟು ವಿಶೇಷವಾದ ಅಸ್ತ್ರಪ್ರಯೋಗವಾದುದಕ್ಕೆ ನೊಂದ ಅರ್ಜುನನು ಒಂದು ಮುಹೂರ್ತಕ್ಕಾಗಿ ದ್ರೋಣಾಚಾರ್ಯರಿರುವ ಕಡೆಗೆ ಲಕ್ಷ್ಯವಿಡ ಬೇಕಾಯಿತು. ಅದೇ ಮುಹೂರ್ತದೊಳಗೆ ಶಂಖನು ಮಡಿದನು. ಇತ್ತ ಭೀಷ್ಮನೂ ತನ್ನ ಪ್ರತಿಜ್ಞೆಯಂತೆ ಅಂದಿನ ಕಾದಾಟದಲ್ಲಿ ಹತ್ತು ಸಾವಿರ ರಥಿಕರನ್ನು ಸಂಹಾರಮಾಡಿದನು.

ಮೂರನೆ ದಿನದ ಯುದ್ಧವು ಮತ್ತಷ್ಟು ಭಯಂಕರವಾಗಿದ್ದಿತು. ಹಗಲಿನೊಡೆಯನು ತನ್ನ ಒಡ್ಡೋಲಗಕ್ಕೆ ಬಂದನೆಂದು ಪಾಠಕರು ಘೋಷ ಮಾಡಿದರೋ ಎಂಬಂತೆ, ಸೂರ್ಯೋದಯವಾಗುತ್ತಲೆ ಎರಡೂ ಸೇನೆಗಳು ಕೋಲಾಹಲದಿಂದ ಒಂದನ್ನೊಂದು ಇದಿರಾದುವು. ಭೀಷ್ಮನು ಗರುಡ ವ್ಯೂಹವನ್ನು ರಚಿಸಿದನು. ಕೌರವಸೇನೆಯು ಗರುಡಪಕ್ಷಿಯ ಆಕಾರದಂತೆ ಪಸರಿಸಿಕೊಂಡು ನಿಂತು, ಯುದ್ಧಸನ್ನದ್ಧವಾಯಿತು. ಅದರ ಮುಂದಾಗಿ ಭೀಷ್ಮನು ನಿಂತನು. ಆ ಆಕಾರದ ಕೊಕ್ಕು ರೆಕ್ಕೆ ಬಾಲಗಳ ಪ್ರದೇಶದಲ್ಲಿ ಮಹಾರಥಿಕರು ನಿಂತರು. ಅವರು ಕಟ್ಟಿದ ಮೇರೆಯೊಳಗೆ ಸೇನೆಯು ನಿಂತಿತು. ಅರ್ಜುನನೂ ಅದಕ್ಕೆ ಇದಿರಾಗಿ ಅರ್ಧಚಂದ್ರವ್ಯೂಹವನ್ನು ರಚಿಸಿದನು. ಅದರ ಮುಂಭಾಗದಲ್ಲಿ ಅವನೇ ನಿಂತನು. ಅನಂತರ ತಂಬಟೆಗಳೂ ಕೊಂಬುಗಳೂ ಕೂಗಲು ಯುದ್ಧಕ್ಕೆ ಪ್ರಾರಂಭವಾಯಿತು.

'ಭೀಮ-ಸಾತ್ಯಕಿಯರು ಈಗ ತಾನೇ ಯುದ್ಧಕ್ಕೆ ಬರುವರಿದ್ದರೆ ಬರಲಿ!' ಎಂದು ಸಮರಥವನ್ನು ಕೂಡಿಸಿಕೊಂಡು ಬಿಲ್ಲನ್ನು ಹೂಡಿಸಿ ಹಿಡಿದು, ಕನಕತಾಳಧ್ವಜನಾದಾ ಭೀಷ್ಮನು ಕಾಲಯಮನಂತೆ ಬಾಣಗಳಿಂದ ಮಾರುತಿಯನ್ನು ನೋಯಿಸಿ, ಕೆಲಬಲದ ಅರಸುಗಳ ಪರಾಕ್ರಮವು ಮಾಸುವ ರೀತಿಯಲ್ಲಿ ಕಣ್ಣುಗಳಿಂದ ಕಿಡಿಗಳನ್ನು ಸೂಸುತ್ತ,ಮಹೋಗ್ರಧೀರ ನಾಗಿ ಮುಂದೊತ್ತಿ ಬರಲು 'ಹಳೆಬರು ಎಳೆಯರೊಡನೆ ಯುದ್ಧ ಮಾಡುವ್ರು ದುಂಟೆ?' ಎನ್ನುತ್ತ ಔಡುಕಚ್ಚಿ, ಅರ್ಜುನನು ಅವನಿಗೆ ಇದಿರಾಗಿ ನಿಂದು, ನೆಲ ವಾವುದು, ಗಗನವಾವುದು, ದಿಕ್ಕಾವುದು ಎಂಬುದೊಂದೂ ತಿಳಿಯಬಾರದ ರೀತಿಯಲ್ಲಿ ಪ್ರಚಂಡವಾಗಿ ಬಾಣಗಳ ಮಳೆ ಸುರಿದನು. 'ಎಲೆ ಪಾರ್ಥನೆ, ತ್ರಿಲೋಕನಾಥನಿಗೂ ನೀನಲ್ಲವೆ ಯುದ್ಧದಲ್ಲಿ ಮಿಗಿಲಾದವನಂತೆ?' ಎನ್ನುತ್ತ ಭೀಷ್ಮನು ಅರ್ಜುನನ ಕೈಯ ಬಿಲ್ಲನ್ನೆ ಕತ್ತರಿಸಲು, ಕೃಷ್ಣನಿಗೆ ಬೆರಗುಂಟಾ ಯಿತು. ದುರ್ಯೋಧನಾದಿಗಳೂ ಆಗಲೆ ಮುಂದರಿಸಿ, ನಾಲ್ದಿಕ್ಕುಗಳಿಂದಲೂ ಅವನ ಮೇಲೆ ಅಯುತಾಯುತ ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸಿದರು. ಅರ್ಜುನನ ಕುದುರೆಗಳು ಕಾಲ್ಗೆಟ್ಟುವು; ಕೃಷ್ಣನ ಹೃದಯವೂ ಚಂಚಲ ವಾಯಿತು. ಬಾವುಟದ ಹನುಮನೂ ಚಡಪಡಿಸಿದನು; ನಾಯಕರೂ ಹೆದರಿದರು; ಪಾಂಡವ ಪರಾಕ್ರಮವು ಬತ್ತಿತು; ಪಾಂಡವ ಪಕ್ಷಪಾತಿ

ಗಳಾಗಿ ತಾವು ಅಲ್ಲಿದ್ದುದು ಅನ್ಯಾಯವಾಯಿತೆಂದು ವಿಮಾನದ ಮೇಲೆ ನಿಂದು ಯುದ್ಧವನ್ನು ನೋಡುತಲಿದ್ದ ದೇವತೆಗಳು ನಿಟ್ಟುಸಿರಿಟ್ಟರು.

ಆಗಲೆ, ಬಿಲ್ಲುಗಾರರಿಗೆ ಗುರುವಾದ ಪಾರ್ಥನು, ಅವರಷ್ಟು ಮಂದಿಯ ಬಾಣಗಳನ್ನು ಕಡಿದು, ಕೃಪಾಚಾರ್ಯರನ್ನೊಂದು ಬಾಣದಿಂದ ನೋಯಿಸಿ, ಗುರುಪುತ್ರನ ರಥವು ಹೊರಳಿ ಬೀಳುವಂತೆ ಬಡೆದು, ಶಲ್ಯನು ಮೂರ್ಛೆಹೋಗುವಂತೆಯೂ ದುರ್ಯೋಧನನ ಗಾತ್ರವಾದ ದೇಹದಲ್ಲಿ ಬಾಣಗಳು ನಾಟುವಂತೆಯೂ ಯುದ್ಧವನ್ನು ಮಾಡಲು, ಶಲ್ಯನ ದುಸ್ಥಿತಿಯನ್ನೂ ದುಶ್ಶಾಸನನು ರಕ್ತಕಾರಿದುದನ್ನೂ, ಗುರುಸುತನು ದಿಗ್ಭ್ರಮೆ ಹೊಂದಿದನ್ನೂ ಭೀಷ್ಮನು ತಿಳಿದು ಕೆರಳಿದನು. ಅವನ ಮೈಯಲ್ಲಿ ಕೆಂಪೇರಿತು; ರೋಷಾಗ್ನಿಯ ವಿಷಮಜ್ವಾಲೆಗಳು ಅವನ ಮೊಗದಿಂದ ಹೊರಸೂಸಿದುವು. ಅವನ ನಿಟ್ಟುಸಿರಿನಲ್ಲಿ ಹೊಗೆ ಹೊರಡಿತು; ಅರ್ಜುನನನ್ನು ಈಗಲೆ ಕೊಲ್ಲಬೇಕಾಯಿತೆಂದು ದಿವ್ಯಾಸ್ತ್ರಗಳನ್ನು ಹೂಡಿದನು. ಅರ್ಜುನನು ಪ್ರತಿಯಾಗಿ ಬಾಣಗಳನ್ನು ಎಸೆಯುತ್ತಿರಲು, ಶ್ರೀಕೃಷ್ಣನು ಅವನ ರಥವನ್ನು ಅತಿ ವೇಗವಾಗಿ ರಣರಂಗದ ಪ್ರತಿಯೊಂದೂ ಕಡೆಗೆ ಓಡಿಸಿ, ಸೈನ್ಯ ಸಂಹಾರವನ್ನು ಮಾಡುತಲಿದ್ದುದರಿಂದ ಭೀಷ್ಮನಿಗೆ ಹತ್ತೂ ಕಡೆ ಒಂದೇ ಕಾಲದಲ್ಲಿ ಸೈನ್ಯರಕ್ಷಣೆಯನ್ನು ಮಾಡುವ ಅವಸರವುಂಟಾಯಿತು. ಕೌರವ ಸೇನೆಯು ಸಿಕ್ಕಿದ ದಾರಿ ಹಿಡಿದು ಪಲಾಯನ ಮಾಡಿತು.

ದುರ್ಯೋಧನನು ಭೀತಿಗ್ರಸ್ತನಾದನು. ಭೀಷ್ಮದ್ರೋಣರಿಬ್ಬರೂ ಪಾಂಡವಪಕ್ಷಪಾತಿಗಳಾಗಿರುವುದರಿಂದಲೆ ಪಾಂಡವಬಲವು ಇನ್ನೂ ತೇಜೋಭಂಗಹೊಂದಿಲ್ಲವೆಂದು ಅವನ ಅಭಿಪ್ರಾಯವು. ಪಾಂಡವರ ಮೇಲೆ ಎಷ್ಟೆಂದರೂ ಅಜ್ಜಯ್ಯನು ಮಮತೆ ತೋರಿಸುವನಲ್ಲವೆ? ಭೀಷ್ಮನೆ ಇದಿರಾದ ಬಳಿಕ, ಪಾಂಡವರು ಕಾದಾಡುತ್ತ ಇನ್ನೂ ಬದುಕಿರಬಹುದೆ? ಭೀಷ್ಮನು ಜೀವಿಸಿರುವಾಗ ಕೌರವಸೇನೆಗಳು ದೆಸೆಗೆಟ್ಟು ಓಡುತ್ತಿರುವುದೂ ಸಂಭವವೆ? 'ಪಾಂಡವರ ಪ್ರಾರ್ಥನೆಯಂತೆ ಈ ರೀತಿ ಅರ್ಥಕ್ಕರ್ಥ ಕಾದುವುದೇ?' ಎಂದು ಅವನು ಭೀಷ್ಮನಲ್ಲಿ ಸಂಶಯವನ್ನು ತೋರಿದನು.

ಭೀಷ್ಮನು ಈ ಮಾತುಗಳನ್ನು ಕೇಳಿ ಕರಾಳನಾದನು! ಬೇಕಾದಷ್ಟು ಹಿತೋಪದೇಶವನ್ನು ಹೇಳಿದನು. 'ನನ್ನ ಮಾತುಗಳನ್ನು ಒಲ್ಲದೆ ಇತರರ

ಮಂತ್ರಾಲೋಚನಗಳೆ ವಿಶೇಷವಾದುದೆಂದು ನಂಬಿದೆಯಲ್ಲವೆ? ಇಂದ್ರನೆ ದೇವತೆಗಳೊಡನೆ ಬಂದು ಅರ್ಜುನನೊಡನೆ ಈಗ ಹೆಣಗಬಹುದಾದರೂ, ಅವನಿಗೆ ಜಯವೆಂದೂ ಲಭಿಸುವಂತಿಲ್ಲ. ಪಾಂಡವರ ಪರಾಕ್ರಮದ ಪ್ರಾಬಲ್ಯವನ್ನು ನಿವಾರಿಸುವುದಕ್ಕೆ ಈ ವೃದ್ಧಾಪ್ಯದಲ್ಲಾದರೂ ನಾನು ಯಥಾಶಕ್ತಿಯಾಗಿ ಯುದ್ಧಮಾಡುತ್ತಿರುವೆನು. ನೀನು ರಾಜನೆನಿಸಿಕೊಂಡಿರುವೆಯಾದರೂ ನಿನ್ನ ಸೈನ್ಯವನ್ನು ಕಾಪಾಡಲಾರದೆ ಬಳಲಿರುವೆ; ಆದರೂ ನಾನು ಮುದುಕನೆಂದು ತಿಳಿದೂ, ಬೇಕೆಂದೇ ನನ್ನೊಡನೆ ಛಲಮಾಡುವೆ ಏತಕ್ಕೆ?' ಎಂದು ಭೀಷ್ಮನು ಹೇಳುತ್ತ, ತನ್ನ ಧನುಸ್ಸಿನ ಹಗ್ಗವನ್ನೆಳೆದು ಠೇಂಕಾರವನ್ನು ಮಾಡಿದನು! ಅದಾಗಲೆ ಅರ್ಜುನನೊಡನೆ ಯುದ್ಧಾರಂಭದ ಸೂಚನೆ. ಭೀಷ್ಮನ ಧನುಸ್ಸನ್ನೂ ಧ್ವಜವನ್ನೂ ಅರ್ಜುನನು ಕತ್ತರಿಸಿದನು. ಭೀಷ್ಮನು ಅದಕ್ಕೆ ಪ್ರತಿಯಾಗಿ ಕೃಷ್ಣಾರ್ಜುನರಿಬ್ಬರ ದೇಹಗಳೊಳಗೂ ಬಾಣಗಳನ್ನು ನುಗ್ಗಿಸಿದನು. ಬೆವರನ್ನು ಪೂಸುವುದಕ್ಕೆ ಅವಕಾಶವಿಲ್ಲದಿರಲು, ಅದನ್ನು ಅಳಸದೆ ಉಪಾಯವೂ ಇಲ್ಲದಿರಲು, ಅರ್ಜುನನು ಹಣೆಯನ್ನು ಒರಸಿಕೊಳ್ಳಲು ಕೆಲವು ಕ್ಷಣ ಕೈಯನ್ನೆತ್ತಿ ಯುದ್ಧಮಾಡಲಾರದಾದನು. ಅಷ್ಟೇ ಅವಧಿಯೊಳಗಾಗಿ ಭೀಷ್ಮನು ತನ್ನ ಪ್ರತಿಜ್ಞೆಯಂತೆ, ಪಾಂಡವ ಸೈನ್ಯದೊಳಗಣ ಹತ್ತುಸಾವಿರ ರಥಿಕರನ್ನು ವೀರಸ್ವರ್ಗಕ್ಕೆ ಕಳುಹಿಸಿದನು. ಅಂದಿನ ದಿನವೂ ಜಯಾಪಜಯಗಳು ನಿಶ್ಚಿತವಾಗದೆ ಮುಗಿಯಿತು.

ಐದನೆ ದಿನ ಕೌರವರು ಸಮುದ್ರವ್ಯೂಹವನ್ನು ರಚಿಸಿದರು. ಪಾಂಡವರು ಅದನ್ನು ಕಾದಾಡಲು ಶೃಂಗಟವೆಂಬ ಪದ್ಧತಿಯ ವ್ಯೂಹವನ್ನು ರಚಿಸಿದರು. ಮಹಾಯುದ್ಧವಾಗಲು, ಅರ್ಜುನನು ವ್ಯೂಹಮಧ್ಯವನ್ನು ಭೇದಿಸಿದನು. ಭೀಷ್ಮನು ಪಾಂಡವಸೇನೆಯನ್ನು ಭೇದಿಸಿದನು. ಅರ್ಜುನನು ತನ್ನ ಸೇನೆಯನ್ನು ರಕ್ಷಿಸುವುದಕ್ಕಾಗಿ ಭೀಷ್ಮನಿಗೆ ಇದಿರಾದನು. ಅವರಿಬ್ಬರೂ ಹೋರಾಡುತ್ತಿರುವಾಗಲೆ, ಭೀಮಸೇನನು ಕೌರವಸೈನ್ಯದಲ್ಲಿ ಅಸಂಖ್ಯಾತ ಮಂದಿಯನ್ನು ಧ್ವಂಸಗೊಳಿಸಿ, ಹಾಹಾಕಾರವನ್ನೆಬ್ಬಿಸಿದನು. ಭೀಷ್ಮನು ಪುನಃ ಕೃಷ್ಣನ ಮೈಯನ್ನು ಬಾಣಗಳಿಂದ ನೋಯಿಸಿದನು. ಕೃಷ್ಣನಿಗಾದ ಸಂಕಟವನ್ನು ನೋಡಲು ಅರ್ಜುನನು ಮುಹೂರ್ತ ಮಾತ್ರ ಆ ಕಡೆಗೆ ಕಣ್ಣು ತಿರುಗಿಸಲು, ಅದೇ ಸಮಯದಲ್ಲಿ ಭೀಷ್ಮನೂ ಹತ್ತು

ಸಾವಿರ ರಥಿಕರನ್ನು ಕೊಂದು ತನ್ನ ಪ್ರತಿಜ್ಞೆಯನ್ನು ಪೂರಯಿಸಿದನು. ಅಂದಿನ ಯುದ್ಧವೂ ಹಗಲೂ ಅಲ್ಲಿಗೆ ಕೊನೆಗೊಂಡುವು.

ಅಂದೇ ರಾತ್ರಿಯಲ್ಲಿ ಕರ್ಣನು ಭೀಷ್ಮನನ್ನು ದೂರಿ ದುರ್ಯೋಧನನನ್ನು ಉತ್ತೇಜನಗೊಳಿಸಿದನು. ದುರ್ಯೋಧನನು ಈ ಮಾತುಗಳಿಗೆ ಕಿವಿಗೊಟ್ಟ ಕಾರಣ, ಪುನಃ ಭೀಷ್ಮನನ್ನು ಶಿಬಿರದಲ್ಲಿ ಕಂಡು, 'ಪಾಂಡವರನ್ನು ವಿನಾಶಗೊಳಿಸುವೆನೆಂದು ಅಂದು ಭಾಷೆ ಕೊಟ್ಟಿರಿ. ಈಗ ಪಾಂಡವ ಸ್ನೇಹವು ನಿಮ್ಮಲ್ಲಿ ನಾಟಿರುವ ಕಾರಣ, ನೀವು ಮಾಡಿದ ಪ್ರತಿಜ್ಞೆಯನ್ನು ನೀವೇ ಮುರಿಯುವಿರಂತೆ! ನಮ್ಮ ಸೇನಾಪತಿಗಳಾಗಿದ್ದು ನಮ್ಮ ಉಪಕಾರವನ್ನು ಸಾಧಿಸದೆ ನಮಗೆ ವಿನಾಶವನ್ನೆ ಅನುಕೂಲಿಸುತ್ತಿರುವುದು ಸರಿಯೆ? ಕರ್ಣನನ್ನು ಸೇನಾಪತಿಯಾಗಿ ನಾನು ನಿಯಮಿಸಿದ್ದರೆ ಪಾಂಡವರು ಇಷ್ಟರಲ್ಲಿ ನಿರ್ನಾಮರಾಗುತ್ತಿದ್ದರು' ಎಂದು ದೂರಿದನು.

ಭೀಷ್ಮನು ನಸುನಕ್ಕನು. "ಪಾಂಡವರನ್ನು ಗೆಲ್ಲುವುದು ಕರ್ಣನಿಗೆಲ್ಲಿ ಸಾಧ್ಯವಾಗಬಹುದು? ಅಂದು ಚಿತ್ರಸೇನಗಂಧರ್ವನ ಕೈಯಲ್ಲಿಯೂ, ಪುನಃ ಉತ್ತರಗೋಗ್ರಹಣ ಯುದ್ಧಕಾಲದಲ್ಲೂ ಕೌರವರೆಲ್ಲರೂ ಸೆರೆಯಾದಾಗ, ಕರ್ಣನ ಸಾಹಸದ ಪರಿಚಯವು ಯಥೇಷ್ಟವಾಗಿ ದೊರೆತುದಲ್ಲವೆ? ಅರ್ಜುನನ ಪರಾಕ್ರಮವನ್ನು ನೀನರಿಯೆಯಾ? ಯಾವನು ಇಂದ್ರನನ್ನೇ ಜಯಿಸಿ ಖಾಂಡವವನವನ್ನೇ ಸುಟ್ಟುರುಹಿದನೊ, ಯಾವನು ನಿವಾತಕವಚರು ಕಾಲಕೇಯರು ಮೊದಲಾದ ದೈತ್ಯರನ್ನು ಸಂಹರಿಸಿ ದೇವತೆಗಳ ಸಂಕಟ ಪರಿಹಾರವನ್ನು ಮಾಡಿದನೊ, ಅಂತಹನನ್ನು ವಿನಾಶಗೊಳಿಸುವುದು ಯಾರಿಗೆ ಸಾಧ್ಯವು? ಅದೂ ಅಲ್ಲದೆ ಭಗವಂತನಾಗಿರುವ ಶ್ರೀ ಹರಿಯೆ ಸಾರಥಿಯಾಗಿ ಅವನನ್ನು ಕಾಪಾಡುತ್ತಿರುವನು! ಅರ್ಜುನನು ಮೊದಲೆ ರಣಭಯಂಕರನು, ಅವನಿಗೆ ರಾಜಕುಲವೆಲ್ಲ ಸಾಹಾಯ್ಯಕವಾಗಿದೆ; ಪಾಂಚಾಲರು ಅವನ ಎಡಬಲಕ್ಕೂ ಸಿದ್ಧರೇ; ಪೂರ್ಣಬ್ರಹ್ಮಸನಾತನನಾದವನೂ ತ್ರಿಭುವನ ಕರ್ತನೂ ಆಗಿರುವ ಹರಿಯೇ ಅವನ ಸಾರಥಿ; ನಾರಾಯಣನೆ ಯಾರನ್ನು ಕಾಯುತ್ತಿರುವನೊ ಅವನನ್ನು ವಿನಾಶಗೊಳಿಸುವುದು ಯಾರಿಗೆ ತಾನೆ ಸಾಧ್ಯವು? ಶ್ರೀಕೃಷ್ಣನು ಅವರ ರಕ್ಷಣೆಯ ಭಾರವನ್ನು ವಹಿಸಿಕೊಂಡಿಲ್ಲದಿದ್ದಲ್ಲಿ, ಪಾಂಡವರನ್ನು ಸೈನ್ಯಸಮೇತವಾಗಿ ಎಂದೋ ನಿಪಾತಗೊಳಿಸುತ್ತಿದ್ದೆನು" ಎಂದು ದುರ್ಯೋಧನನಿಗೆ ವಿವರಿಸಿದನು.

ಈ ಸಲ ದುರ್ಯೋಧನನು ನಸುನಕ್ಕನು. 'ಆ ಕೃಷ್ಣನನ್ನು ಭಗವಂತನೆಂದೇ ಭಾವಿಸಿ ಈ ರೀತಿ ನಿಮಗೆ ನೀವೇ ದುರ್ಬಲರಾಗುತ್ತಿದ್ದೀರಿ. ನಿಮ್ಮ ಕೈಯಿಂದ ಪಾಂಡವರನ್ನು ಕಾಪಾಡುವುದು ಕೃಷ್ಣನಿಗೆ ಹೇಗೆ ಸಾಧ್ಯವಾದೀತು? ನೀವು ಇಚ್ಛಿಸಿದರೆ ಪಾಂಡವರನ್ನು ಸುಲಭವಾಗಿ ವಿನಾಶಗೊಳಿಸಬಹುದು' ಎಂದು ದುರ್ಯೋಧನನೆಂದನು.

ಭೀಷ್ಮನು 'ಹಾಗೇ ಆಗಲಿ. ಸಸೈನ್ಯರಾದ ಪಾಂಡವರ ಸಂಹಾರ ವನ್ನು ನಾಳೆಗೆ ಸಾಧ್ಯವಿದ್ದಷ್ಟು ಪ್ರಯತ್ನಿಸುವೆನು' ಎನ್ನಲು, ದುರ್ಯೋಧ ನನು ಮಹದಾನಂದದಿಂದ ತನ್ನ ಶಿಬಿರಕ್ಕೆ ಮರಳಿದನು.

---

## ೧೫. ಪ್ರತಿಜ್ಞಾಭಂಗ

ಕುರುಕ್ಷೇತ್ರದಲ್ಲಾದ ಮಹಾಯುದ್ಧವು ಐದು ದಿನ ಒಂದು ರೀತಿಯಾಗಿ ಕಳೆಯಿತು. ಆರನೆಯ ದಿನ ಭೀಷ್ಮನು ಹೋರಾಡಿದಂತೆ ಅದು ವರೆಗೆ ಅವನು ಎಂದೂ ಕಾದುದಿಲ್ಲ. ಭೀಷ್ಮನು ಎಂದಿನಂತೆ ತನ್ನ ಅನುದಿನದ ಪ್ರತಿಜ್ಞೆಯನ್ನು ಪೂರಯಿಸಲಾರದಷ್ಟು ಏಕಾಗ್ರತೆಯಿಂದ ತನ್ನೊಡನೆಯೆ ಕಾದುವ ಹಾಗೆ ಅರ್ಜುನನು ಸಾಧಿಸಿದನು. ಭೀಷ್ಮನು ನುಸುಳಿದಲ್ಲಿಯೆ ಅರ್ಜುನನ ರಥವು! ಅವನು ಜಾರಿದರೂ ಅಡಗಿದರೂ ಉರುಬಿದರೂ ಔಂಕಿದರೂ ಹಿಂಗಿದರೂ, ಅವನ ಇದಿರಿಗೇ ಕೃಷ್ಣನು ಅರ್ಜುನನ ರಥವನ್ನು ಓಡಿಸಿ ತಂದು ನಿಲ್ಲಿಸುವನು. ಇದು ಒಂದು ಬಗೆಯ ಅಕ್ಷಯಯುದ್ಧ ವೆಂದಾಯಿತು. ದುರ್ಯೋಧನನು ಪಾಂಡವವಿನಾಶದ ಆಕಾಂಕ್ಷೆ ಯಿಂದಲೂ, ಭೀಷ್ಮನು ಹಿಂದಣ ರಾತ್ರಿಯಲ್ಲಿ ಹೇಳಿದ ಮಾತಿನ ಭರವಸೆ ಯಿಂದಲೂ, ಅರ್ಜುನನು ಸೋತುದನ್ನು ಕಾಣಲಾರದೆ ನಿರಾಶನಾಗಿ ಭೀಷ್ಮನ ಬಳಿಗೆ ಬಂದು, ಆ ಮಾತಿನ ನೆನಪು ಹುಟ್ಟಿಸಿದನು. ಆಗ ಭೀಷ್ಮನು ನಾರಾಯಣಾಸ್ತ್ರವನ್ನು ಧನುಸ್ಸಿಗೆ ಹೂಡಿದನು.

ಶ್ರೀಕೃಷ್ಣನು ಇದನ್ನು ನೋಡಿ, 'ಅರ್ಜುನಾ, ಇನ್ನು ಕಾದುವವ ರಿಲ್ಲ! ನೀನು ಅಸ್ತ್ರತ್ಯಾಗವನ್ನು ಮಾಡಿ, ಬೆನ್ನು ತಿರುಗಿಸಿ ಕುಳಿತಿರು.' ಎಂದು ಎಚ್ಚರಿಸಿ, ಎಲ್ಲ ಪಾಂಡವಸೈನ್ಯಗಳೂ ತಿಳಿದುಕೊಳ್ಳುವ ಹಾಗೆ,

ಎಲ್ಲರೂ ಅಸ್ತ್ರತ್ಯಾಗವನ್ನು ಮಾಡಿ ಬೆನ್ನು ತಿರುಗಿಸಿ ನಿಲ್ಲುವಂತೆ ಆಜ್ಞೆಯನ್ನು ಭಯಂಕರವಾಗಿ ಗರ್ಜಿಸಿ ತಿಳುಹಿದನು. ಎಲ್ಲರೂ ಕೃಷ್ಣನ ಮಾತಿನಂತೆ ಮಾಡಿದರು. ಭೀಮನು ಮಾತ್ರ ಅಸ್ತ್ರತ್ಯಾಗಮಾಡನು. ಜೀವವಿರುವಷ್ಟು ಕಾಲ ತಾನು ಅಸ್ತ್ರತ್ಯಾಗ ಮಾಡುವುದಿಲ್ಲವೆಂದೇ ಅವನ ಮಾತು; ಪ್ರಾಣವಾದರೂ ಹೋಗಲಿ, ರಣರಂಗಕ್ಕೆ ಬೆನ್ನು ತೋರಿಸುವುದಿಲ್ಲವೆಂದೇ ಅವನ ಪಣವು.

ಭೀಷ್ಮನ ನಾರಾಯಣಾಸ್ತ್ರವು ಪಾಂಡವಪಕ್ಷದಲ್ಲಿ ಮತ್ತೊಬ್ಬ ಅಸ್ತ್ರಧಾರಿಯನ್ನು ಇದಿರು ಕಾಣದೆ, ಕೇವಲವಾಗಿ ಭೀಮನ ಮೇಲೆಯೆ ಲಕ್ಷ್ಯವಿಟ್ಟು ಎರಗಲು ಹಾಯ್ದು ಬರುತಿದ್ದಿತು. ಆಗ ಭಗವಂತನಾದ ಶ್ರೀಕೃಷ್ಣನು ಅರ್ಜುನನ ರಥದಿಂದ ಕೆಳಕ್ಕಿಳಿದುಕೊಂಡು, ತನ್ನ ಬೆನ್ನು ಭಾಗವನ್ನು ಆ ಅಸ್ತ್ರಕ್ಕೆ ತೋರಿಸಿ, ತನ್ನ ದೇಹದಿಂದ ಭೀಮನನ್ನು ಅಡಗಿಸಿಟ್ಟನು. ಆಗ ಅಸ್ತ್ರಧಾರಿಗಳಾರನ್ನೂ ಕಾಣಲಾರದೆ ಬಾಣವು ವಿಫಲವಾಯಿತು. ಆ ಅಸ್ತ್ರದಿಂದ ತೇಜಸ್ಸೊಂದು ಶ್ರೀಕೃಷ್ಣನಲ್ಲಿ ಪ್ರವೇಶಿಸಿ ಅಲ್ಲೇ ಲೀನವಾಯಿತು! ತನ್ನ ತೇಜಸ್ಸನ್ನು ತಾನೆ ಸೆಳೆದುಕೊಂಡು, ಹರಿಯು ಭೀಮನನ್ನು ಆ ಅಸ್ತ್ರದ ಬಾಧೆಯಿಂದ ಕಾಪಾಡಿದನು.

ಈ ರೀತಿಯಾಗಿ ತನ್ನ ಭಕ್ತನನ್ನು ಶ್ರೀಕೃಷ್ಣನು ಕಾಪಾಡಿದನೆಂದು ಭೀಷ್ಮನು ತಿಳಿದು ಭಕ್ತಿಯಿಂದ ಗದ್ಗದಿತವಾದ ಸ್ವರದಲ್ಲಿ ಆತನ ಸ್ತೋತ್ರವನ್ನು ಮಾಡಿದನು. ಅರ್ಜುನನು ಪುನಃ ಗಾಂಡೀವ ಧನುಸ್ಸನ್ನೆತ್ತಿಕೊಂಡು ಭೀಷ್ಮನ ಮೇಲೆ ಬಾಣಗಳನ್ನು ಸುರಿಸಲು, ಭೀಷ್ಮನು ಆ ಬಾಣಗಳನ್ನು ಕತ್ತರಿಸಿ ಅರ್ಜುನನ ರೋಮಕೂಪಗಳಿಗೊಂದೊಂದರಂತೆ ಬಾಣಗಳನ್ನು ಎಸೆದನು. ಅರ್ಜುನನು ಈ ಬಾಣಕೋಟಿಯನ್ನು ತನ್ನ ಮೈಯಿಂದ ಕೀಳುತ್ತಿರುವುದರೊಳಗೆ, ಭೀಷ್ಮನು ಯಥಾರೀತಿಯಲ್ಲಿ ಪಾಂಡವಪಕ್ಷದ ಹತ್ತು ಸಾವಿರ ರಥಿಕರನ್ನು ಕೊಂದನು. ಸೂರ್ಯಾಸ್ತವಾಯಿತು.

ಏಳನೆ ದಿನದ ಯುದ್ಧದಲ್ಲಿಯೂ ತನ್ನ ಪ್ರತಿಜ್ಞೆಯನ್ನು ಪಾಲಿಸುವುದು ಭೀಷ್ಮನಿಗೆ ಮಹಾಕಷ್ಟವಾಯಿತು. ಭೀಮನೆ ಮೊದಲಾದ ಪಾಂಡವಭಟರು ಕುರುಸೈನ್ಯವನ್ನು ಧ್ವಂಸಗೊಳಿಸಿದರು. ದುರ್ಯೋಧನನ ಮನೋದುಃಖಕ್ಕೆ ಮಿತಿಯಿಲ್ಲವಾಯಿತು. 'ಪೃಥ್ವಿಯಲ್ಲಿನ ಕ್ಷತ್ರಿಯಸಂಹಾರವನ್ನು ಮಾಡುವುದಕ್ಕಾಗಿಯೆ ಪ್ರತಿಜ್ಞಾಬದ್ಧನಾದ ಪರಶುರಾಮನ ಬಾಣಗಳು

ನಿಮ್ಮ ಸಾಹಸದ ಇದಿರಲ್ಲಿ ವ್ಯರ್ಥವಾದುವು. ಅಂತಹ ದುರ್ಜಯನಾದ ಭೀಷ್ಮನು, ಮುಹೂರ್ತದಲ್ಲಿ ಮೂರು ಲೋಕಗಳನ್ನು ಜಯಿಸ ಬಲ್ಲನು. ಆದರೆ ಪಾಂಡವರೊಡನೆ ಎಂಟು ದಿನ ಯುದ್ಧ ಮಾಡಿಯೂ, ಆ ಪಾಂಡವರೈದೂ ಮಂದಿ ಪರಾಜಿತರಾಗದೆ ಇನ್ನೂ ಶಿಬಿರಕ್ಕೆ ಮರಳು ತಿರುವರಲ್ಲ! ಇದರ ಅರ್ಥವೇನು?' ಎಂದು ಅವನು ಭೀಷ್ಮನನ್ನು ವಿಚಾರಿಸಿ, ಇಂತಹ ಅಪ್ರತಿಮವೀರನಿಂದ ಪಾಂಡವರನ್ನು ಸೋಲಿಸಲಾಗಲಿಲ್ಲೆಂಬ ಯಶಸ್ಸು ನಾಳಿನಿಂದ ಭೀಷ್ಮನಿಗೆ ತಟ್ಟುವುದೆಂದೂ ಸೂಚಿಸಿದನು.

ಭೀಷ್ಮನು ಈ ಮಾತಿಗೆ ಕೆರಳಲೂ ಇಲ್ಲ, ನಗಲೂ ಇಲ್ಲ. ಮೂರ್ಖನ ಮಾತಿಗೆ ಏನೆನ್ನುವನು? ಅವನು ಚಿಂತಾಮಗ್ನನಾದನು. ತನ್ನ ಬತ್ತಲಿಕೆಯಿಂದ ಐದು ಬಾಣಗಳನ್ನೆತ್ತಿ ದುರ್ಯೋಧನನಿಗೆ ತೋರಿಸಿ,—"ಇವನ್ನು 'ಮಹಾಕಾಲ'ವೆಂದು ಕರೆವರು; ಇಂದ್ರನು ವಜ್ರಾಘಾತವನ್ನು ಮಾಡಿದರೂ ಇವುಗಳನ್ನು ನಿವಾರಿಸಲಾರನು. ಪಾಂಡವರನ್ನು ಇವು ಗಳಿಂದ ನಾಳಿನ ಯುದ್ಧದಲ್ಲಿ ಸಂಹಾರಗೈವೆನು. ಆದರೆ ಭಗವಂತನು ಮಾತ್ರ ವಿರೋಧನಾಗಬಾರದು; ನೋಡುವೆ" ಎಂದು ಭರವಸೆಕೊಟ್ಟನು. ಭೀಷ್ಮನು ನಾಳಿನ ಯುದ್ಧದಲ್ಲಿ ಶಿಬಿರಕ್ಕೆ ಮರಳುವ ಮೊದಲು, ಶ್ರೀಕೃಷ್ಣ ನೊಬ್ಬನು ತಡೆಯದೆ ಇರುವನಾದರೆ, ಪಾಂಡವರ ಧ್ವಂಸವು ಆಗಿಯೇ ಮುಗಿವುದು ಎಂದು ಅರಿತುಕೊಂಡ ದುರ್ಯೋಧನನು ಅತ್ಯಾನಂದವನ್ನು ತಳೆದು, ದೂರದಲ್ಲಿದ್ದ ತನ್ನ ಶಿಬಿರವನ್ನು ಯುದ್ಧಕ್ಷೇತ್ರದಲ್ಲಿಯೆ ವಿರಚಿಸಿ ಕೊಂಡನು. ಭೀಷ್ಮನು ಆ ಬಾಣಗಳನ್ನು ಹತ್ತಿರವಿಟ್ಟುಕೊಂಡೇ ಆ ರಾತ್ರಿಯನ್ನು ಯುದ್ಧರಂಗದಲ್ಲಿ ಕಳೆದನು.

ಈ ವೃತ್ತಾಂತವನ್ನು ಗುಪ್ತಚಾರರು ಶ್ರೀಕೃಷ್ಣನಿಗೆ ತಿಳುಹಿದರು. ಪಾಂಡವರು ಇದನ್ನು ಕೇಳಿ ನಿರುತ್ಸಾಹಿಗಳಾದರು. ಅವರು ಶ್ರೀಕೃಷ್ಣ ನೊಬ್ಬನೆ ತಮಗೆ ಆಶ್ರಯನೆಂದು ಅವನನ್ನು ಮರೆಹೊಕ್ಕರು. ಶ್ರೀಕೃಷ್ಣನು ಅವರಿಗೆ ಅಭಯವನ್ನು ಕೊಟ್ಟು, ಅರ್ಜುನನೊಡನೆ ಶಿಬಿರದಿಂದ ಹೊರ ಬಿದ್ದನು. ಅರ್ಜುನನಿಗೆ ಏನನ್ನೊ ಕಲಿಸಿಕೊಟ್ಟು ಅವನನ್ನು ದುರ್ಯೋಧನ ನಿರುವಲ್ಲಿಗೆ ಕಳುಹಿದನು. ದುರ್ಯೋಧನನು ಆಗ ಅಂತಃಪುರದಲ್ಲಿದ್ದನು. ಅರ್ಜುನನು ತನ್ನಲ್ಲಿಗೆ ಹಠಾತ್ತಾಗಿ ಬಂದುದನ್ನು ನೋಡಿ ಚಕಿತನಾದನು. ಅವನನ್ನು ಯಥೋಚಿತವಾಗಿ ಕುಳ್ಳಿರಿಸಿ ಅವನ ಆಗಮನದ ಕಾರಣವನ್ನು

ವಿಚಾರಿಸಿದನು. ಅರ್ಜುನನು, 'ಮಹಾರಾಜನೆ! ಚಿತ್ರಸೇನ ಗಂಧರ್ವನಿಂದ ನಿಮ್ಮೆಲ್ಲರನ್ನು ತಪ್ಪಿಸಿ ತಂದಂದು, ನೀನು ನನಗೊಂದು ವರವನ್ನು ಕೊಟ್ಟಿ ದಿಲ್ಲವೆ? ಆ ವರವನ್ನು ಇಂದು ನಾನು ಪಡೆಯಲು ಬಂದಿರುವೆನು. ನಿನ್ನ ತಲೆಯ ಮುಕುಟವನ್ನು ನನಗೆ ಈ ಮುಹೂರ್ತಮಾತ್ರಕ್ಕಾಗಿ ಕೊಡ ಬೇಕು; ಇದೇ ಆ ವರವು' ಎಂದು ಹೇಳಿಕೊಳ್ಳಲು, ದುರ್ಯೋಧನನು ವಿಳಂಬವನ್ನೇನೂ ಮಾಡದೆ, ಕೂಡಲೆ ತನ್ನ ತಲೆಯಿಂದ ಮುಕುಟವನ್ನೆತ್ತಿ ಅವನಿಗೆ ಕೊಟ್ಟನು. ಅರ್ಜುನನು ಅಲ್ಲಿಂದ ದುರ್ಯೋಧನನ ಮುಕುಟ ವನ್ನು ತಾನೆ ಧರಿಸಿಕೊಂಡು ಭೀಷ್ಮನ ಶಿಬಿರಕ್ಕೆ ತೆರಳಿದನು. ಅರ್ಜುನನನ್ನು ದುರ್ಯೋಧನನೆಂದು ಭಾವಿಸಿ, ಅಷ್ಟು ರಾತ್ರಿ ಹೊತ್ತಿಗೆ ಶಿಬಿರದೊಳಕ್ಕೆ ಬರಲು ಕಾರಣವೇನೆಂದು ಭೀಷ್ಮನು ಅವನನ್ನು ವಿಚಾರಿಸಿದನು. ಆಗ ಅರ್ಜುನನು ತನಗೆ ಆ ಮಹಾಕಾಲಶರವನ್ನು ಕೊಟ್ಟಲ್ಲಿ, ತಾನೇ ಪಾಂಡವ ರನ್ನು ವಿನಾಶಗೊಳಿಸುವೆನು ಎಂದನು. ಭೀಷ್ಮನು ಕೂಡಲೆ ತನ್ನ ಕೈಯ ಲ್ಲಿದ್ದ ಆ ಐದೂ ಶರಗಳನ್ನು ದುರ್ಯೋಧನವೇಷಧಾರಿಯಾದ ಅರ್ಜುನನ ಕೈಗೊಪ್ಪಿಸಿಕೊಟ್ಟು 'ನಾನು ಪಾಂಡವವಧೆಯ ಅಪಯಶದಿಂದ ಇಂದಿಗೆ ಮುಕ್ತನಾದೆನು. ನೀನೆ ಸುಖವಾಗಿ ಪಾಂಡವರನ್ನು ಕೊಲ್ಲಬಹುದು.' ಎಂದನು. ಅರ್ಜುನನು ಆ ಶರಗಳನ್ನು ಹಿಡಿದುಕೊಂಡು ಪಾಂಡವ ಪಾಳೆಯಕ್ಕೆ ಮರಳಿದನು. ಮರಳುವಾಗ, ದುರ್ಯೋಧನನ ಮುಕುಟವನ್ನು ಅವನಿಗೆ ಮರಳಿ ಕೊಡಲು ಮರೆಯಲಿಲ್ಲ.

ಅತ್ತ ಶ್ರೀಕೃಷ್ಣನು ಭೀಷ್ಮನ ಶಿಬಿರವನ್ನು ಹೊಕ್ಕನು. ಭೀಷ್ಮನಿಗೆ ಆಗಲೆ ಸಂದೇಹವುಂಟಾಯಿತು. ಶ್ರೀಕೃಷ್ಣನು ಎಲ್ಲವನ್ನೂ ವಿವರಿಸಲು, ಭೀಷ್ಮನು,—'ನನ್ನ ಪ್ರತಿಜ್ಞೆಯನ್ನು ಹೇಗೆ ಭಂಗಗೊಳಿಸಿ, ಪಾಂಡವರನ್ನು ಕಾಪಾಡಿದೆಯೊ, ಹಾಗೆಯೆ ನಾಳಿನ ಯುದ್ಧದಲ್ಲಿ ನಿನ್ನ ಪ್ರತಿಜ್ಞೆಯನ್ನೂ ಭಂಗಗೊಳಿಸುವೆನು' ಎಂದನು. ಶ್ರೀಕೃಷ್ಣನು ಅಲ್ಲಿಂದ ನಗುತ್ತ ಮರಳಿ ದನು; ಭೀಷ್ಮನು ಭಕ್ತಬಂಧುವಾದ ಭಗವಂತನ ಲೀಲಾವಿನೋದವನ್ನು ಎಣಿಸಿ ಎಣಿಸಿ, ಮನಸ್ಸಿನಲ್ಲೆ ಆನಂದವನ್ನು ಅನುಭವಿಸಿದನು.

# ೧೬. ಸು-ದರ್ಶನ.

ಎಂಟನೆ ದಿನ ಯುದ್ಧಾರಂಭದಲ್ಲಿಯೆ ಭೀಷ್ಮನು ಅರ್ಜುನನನ್ನು ಕಂಡು 'ಶ್ರೀಕೃಷ್ಣನ ತಂತ್ರವನ್ನು ಅನುಸರಿಸಿ, ನಿನ್ನೆಯ ದಿನ ನನ್ನ ಪ್ರತಿಜ್ಞೆಯನ್ನು ಭಂಗಗೊಳಿಸಿದೆಯಲ್ಲವೆ? ಇಂದು ನಿನ್ನ ಸಾರಥಿಯನ್ನು ಕಾಪಾಡುವ ಭಾರವು ನಿನ್ನದು. ಅವನು ಕುರುಕ್ಷೇತ್ರದ ಯುದ್ಧ ಕಾಲದಲ್ಲಿ ಅಸ್ತ್ರಧಾರಣೆಯನ್ನು ಮಾಡುವುದಿಲ್ಲೆಂದು ಮಾತುಕೊಟ್ಟಿರುವನು. ಅವನ ಆ ಪ್ರತಿಜ್ಞೆಯನ್ನು ಇಂದು ನಾನು ಮುರಿಯುವೆನು, ಅವನು ಅಸ್ತ್ರವನ್ನು ಹಿಡಿಯದೆ ಇದ್ದಲ್ಲಿ, ನಾನು ಯುದ್ಧವನ್ನು ತಡೆಯೆನು. ಹಾಗೆ ನಾನು ಮಾಡಲಾರದೆ ಹೋದೆನಾದರೆ, ನಾನು ಶಾಂತನುಪುತ್ರನಾದ ಭೀಷ್ಮನೆ ಅಲ್ಲ' ಎಂದು ಸಾರಿಹೇಳಿದನು.

ಅದಾದ ಬಳಿಕ ಭೀಷ್ಮನು ಭೀಮವೇಗದಿಂದ ಪಾಂಡವ ಸೈನ್ಯವನ್ನು ಸಂಹಾರಮಾಡುತ್ತ ಬಂದನು. ತನ್ನ ಸೇನೆಯನ್ನು ಕಾಪಾಡುವುದು ಅರ್ಜುನನಿಗೆ ಅತಿ ಕಷ್ಟವಾಯಿತು. ಭೀಷ್ಮನ ಯುದ್ಧದಿಂದ ಅರ್ಜುನನು ಶ್ರಾಂತನಾದನು. ಪಾಂಡವಸೈನ್ಯವು ವಿಪನ್ನವಾಯಿತು. ಅರ್ಜುನನ ಸಾಮರ್ಥ್ಯವು ಕುಂದುತ್ತ ಬಂದಿತು. ದುರ್ಬಲನಾದ ಅರ್ಜುನನು ಕಾಪಾಡಲಾರದೆ ಸೈನ್ಯವೆಲ್ಲ ಧ್ವಂಸವಾಗುತ್ತ ಬಂದಿತು. ಈ ದುರವಸ್ಥೆಯನ್ನು ಕಂಡು ಶ್ರೀಕೃಷ್ಣನು ವಿಚಲಿತನಾದನು. 'ಪಾಂಡವರನ್ನೂ ಅವರ ಸೈನ್ಯಗಳನ್ನೂ ಹೇಗೆ ಸಂರಕ್ಷಿಸಲಿ?' ಎಂದೇ ಅವನ ಚಿಂತೆಯು. ಅವನು ಚಿಂತಾಮಗ್ನನಾದ ಕಾಲಕ್ಕೆ ಸರಿಯಾಗಿ ಭೀಷ್ಮನ ಬಾಣಗಳು ಶ್ರೀಕೃಷ್ಣನನ್ನೂ ಅರ್ಜುನನನ್ನೂ ಗಾಯಪಡಿಸಿದುವು. ಅರ್ಜುನನನ್ನು ಮುಂದಕ್ಕೆ ಬಾರದಂತೆ ತಡೆಯಬೇಕಾದರೆ, ಅವನ ಸಾರಥಿಯಾದ ಶ್ರೀಕೃಷ್ಣನನ್ನು ತಡೆಯುವುದೊಂದೇ ಉಪಾಯವು. ಆದುದರಿಂದಲೇ ಅರ್ಜುನನ ರಥದ ಕುದುರೆಗಳ ಸರಪಣಿಗಳನ್ನು ಕಡಿದು, ಭೀಷ್ಮನ ಬಾಣಗಳು ಶ್ರೀಕೃಷ್ಣನ ಮೇಲೆಯೆ ಹಾಯ್ದುವು. ಭೀಷ್ಮನ ರಥವು ಮತ್ತೂ ಮತ್ತೂ ಮುಂದರಿಸಿ, ಶ್ರೀಕೃಷ್ಣನಿಗೆ ತೀರ ಸಮೀಪವಾಗಿ ಬರುತ್ತಿರಲು, ಪಿತಾಮಹನು ಸಿಲ್ಕಿಕೊಂಡನೆಂದು ಕೌರವರು ಚೀರಿದರು. ಭೀಷ್ಮನ ಹತ್ತು ಬಾಣಗಳು ಶ್ರೀಕೃಷ್ಣನ ಸುಕೋಮಲವಾದ ದೇಹವನ್ನು ಹೊಕ್ಕುವು.

ಮತ್ತೊಂದು ಪರಶುರಾಮದತ್ತವಾದ ಬಾಣದಿಂದ ಭೀಷ್ಮನು ಶ್ರೀಕೃಷ್ಣನ ನೊಸಲನ್ನೂ ಗಾಯಪಡಿಸಿದನು. ಕೆಂಪು ಗರಿಯ ಮರಿದುಂಬಿಗಳು ತಾವರೆಯನ್ನು ಮುತ್ತಿದಂತೆ, ಭೀಷ್ಮನ ಬಾಣಗಳು ಶ್ರೀಕೃಷ್ಣನ ಮಂಗಲ ಮುಖವನ್ನು ಮುಚ್ಚಿದುವು. ಶ್ರೀಕೃಷ್ಣನು ಬಾಣಗಳನ್ನು ಒಂದೊಂದಾಗಿ ಕಿತ್ತು, ತನ್ನ ರಕ್ತದಿಂದ ತನ್ನನ್ನು ಮಿಾಯಿಸಿಕೊಂಡನು.

ಇನ್ನು ತಡೆಯಲಾರದೆ, ಶ್ರೀಕೃಷ್ಣನು ಸಿಟ್ಟಿನಿಂದ ಸಿಡಿದು, ಕಣ್ಣುಗಳು ಕೆಂಪೇರಿ, ಮೈನಡುಗುತ್ತ, ಹುಬ್ಬುಗಳು ಗಂಟಿಕ್ಕಲು, ಮುಖ ಬಾಡಿರಲು, ಭಕ್ತರನ್ನು ಕಾಯಬೇಕೆಂಬಾತುರವೂ ಚಂಚಲವಾಗಿ, ಕೈಯಲ್ಲಿ ಹಿಡಿದಿದ್ದ ಕುದುರೆಗಳ ವಾಘೆಗಳನ್ನು ಬಿಸುಟು,—'ಈ ಪ್ರಪಂಚವೆಲ್ಲವೂ ಸುಟ್ಟು ಕೆಂಡವಾಗಲಿ! ಸುರರ ಹೆಂಡಿರ ಕಿವಿಯೋಲೆಗಳೂ ಕಳಚಿ ಬೀಳಲಿ! ಮೇರುವು ಮುರಿದು, ಭೂಮಂಡಲವು ಪಾತಾಳಕ್ಕೆ ಕುಸಿದು ಬೀಳಲಿ! ಮಹಾಮಹಾ ದಾನವವೀರರಾದರೂ ಕೆಡಿಸಲಾರದ ನನ್ನ ಪೌರುಷವು ಅಪಯಶಸ್ಸನ್ನು ಹೊಂದುವುದನ್ನು ನಾನು ಎಂದೂ ಸಹಿಸಲಾರೆನು. ಜಾಗ್ರತೆ! ನನ್ನ ಪ್ರತಿಜ್ಞಾಭಂಗವನ್ನು ಮಾಡಲು ಉದ್ಯುಕ್ತನಾಗದಿರು!' ಎಂದು ಭೀಷ್ಮನನ್ನು ಎಚ್ಚರಿಸಿದನು.

ವಿಶ್ವವು ಪ್ರಳಯವನ್ನು ಹೊಂದುವ ಕಾಲದಲ್ಲಿ ಯಾವನು ಮಹಾ ರುದ್ರನಾಗಿ ತೋರುವನೊ ಅವನೆ ತಾನೆಂದೂ, ಹರಿಹರಭೇದವೇನೂ ಇಲ್ಲವೆಂದೂ ಪ್ರಕಟಮಾಡುವುದಕ್ಕೆ ಅದೇ ವೇಳೆಯೆಂದು ತಿಳಿದು, ಶ್ರೀಕೃಷ್ಣನು ರುದ್ರಾವತಾರವನ್ನು ತಳೆದು, ಮೊಗದಿಂದ ರೋಷದ ಕಿಡಿಗಳನ್ನು ಹಾರಿಸಿದನು. ಆಗ ಭೂಮಿಯೆಲ್ಲಿ, ಕುಲಗಿರಿಗಳೆಲ್ಲಿ, ದಿಶಾಗಜಗಳೆಲ್ಲಿ, ಸುರರೆಲ್ಲಿ, ಹರನೆಲ್ಲಿ, ಚತುರ್ಮುಖನೆಲ್ಲಿ? 'ಅಹಹ, ಸಲಹುವಾತನೆ ಕೊಲಲುದ್ಯುಕ್ತನಾದರೆ, ಕಾವರಾರೆ'ಂದು ಅಸುರರು ಬೊಬ್ಬಿಟ್ಟರು. 'ಬ್ರಹ್ಮಾಂಡವು ತಾವರೆ ಎಸಲ ಮೇಲೆ ನಿಂದ ನೀರು ಹನಿಯಂತೆ ಉರುಳಿ ಬೀಳುವುದಲ್ಲ!' ಎಂದು ಬ್ರಹ್ಮನು ಬೆದರಿ ನಡುಗಿದನು.

ಶ್ರೀಕೃಷ್ಣನು ಕಣ್ಗಳನ್ನರಳಿಸಿ ತನ್ನ ಚಕ್ರಾಯುಧದ ಕಡೆಗೆ ನೋಡಿದನು.

ಮುರಮಥನ ಕೆಲ್ಲೈಸಿ ನೋಡಿದ
ನುರುಭಯಂಕರ ಚಕ್ರವನು, ದು—
ರ್ಧರುಷಧಾರಾಲೂಯಮಾನ ನಿಶಾಟ ಚಕ್ರವನು ।
ತರಳತರಣೀಚಕ್ರವನು, ಸಂ—
ಗರವಿನಿರ್ಜಿತಚಕ್ರವನು, ಭಯ
ಭರಿತನಿರ್ಜರಚಕ್ರವನು, ಕಡುಕೋಪ ಕಿಡಿಯಿಡಲೂ ॥

ಅದೆಷ್ಟು ಭಯಂಕರವು! ಅದರ ಧಾರೆಗಳ ಹೊಳಪಿಗೆ ಸೂರ್ಯನೂ ಕುರುಡುಗಟ್ಟಿದನು; ಅದರಲ್ಲಿ ನಾನಾ ದೈತ್ಯರುಗಳ ನರಸೆರೆಗಳೂ ಮಾಂಸಪಿಂಡಗಳೂ ಸಿಲ್ಕಿಕೊಂಡಿದ್ದುವು, ಅದರ ಮೊನೆಗಳು ವಕ್ರವಾಗಿದ್ದು, ಅವುಗಳಲ್ಲಿ ತೊಗಲನೂಲುಗಳು ಹತ್ತಿಕೊಂಡಿದ್ದುವು. ಶ್ರೀಕೃಷ್ಣನ ದೃಷ್ಟಿಯು ಅದರ ಮೇಲೆ ಬಿದ್ದೊಡನೆಯೆ, ಅದರ ತೇಜಸ್ಸು ಲವಲವಿಕೆಯಿಂದ ಮತ್ತಷ್ಟು ಹೆಚ್ಚಿತು. ಅದರಿಂದ ಹೊರಟ ಮಿಂಚು ಬಳ್ಳಿಗಳು ಶತಸಾವಿರ ಸೂರ್ಯರ ತೇಜಸ್ಸನ್ನೂ ಕುಂದಿಸುವಂತಿದ್ದುವು. ಸುರನರೋರಗರೊಳಗೆ ಯಾರು ತಾನೆ ಆ ಚಕ್ರವನ್ನು ಕಣ್ಣಿಟ್ಟು ನೋಡಲಾಪರು? ಅದರ ಬೇಗೆಗೆ ಚತುಸ್ಸಾಗರಗಳೂ ಬತ್ತಿದುದರಿಂದ, ಅವುಗಳ ತಳದ ಮಳಲೆಲ್ಲ ಹುರಿತು ಮಾಣಿಕದಂತೆ ಕೆಂಪೇರಿತು. ಅರ್ಜುನನ ರಥದ ಕುದುರೆಗಳು ಬೆಚ್ಚಿದುವು; ಅರ್ಜುನನು ಉರಿವ ಚಂದ್ರನಂತಾಗಿ ಬಿಳುಪೇರಿದನು; ಲೋಕಗಳೆಲ್ಲವೂ ಕರಗಿಕೊರಗಿದುವು; ದೇವತೆಗಳು 'ಅದೇ ಶಿವನ ಹಣೆಗಣ್ಣಿನ ಅಗ್ನಿ'ಯೆಂದರು.

ಶ್ರೀಕೃಷ್ಣನು ಸುದರ್ಶನವನ್ನು ಕೈಯಲ್ಲಿ ಧರಿಸಿದವನಾಗಿ, ಕುದುರೆಗಳ ವಾಘೆಗಳನ್ನು ಬಿಸುಟು, ಅರ್ಜುನನನ್ನು ಅಲ್ಲೇ ಬಿಟ್ಟು, ರಥದಿಂದ ಕೆಳಕ್ಕೆ ದುಮ್ಮಿಕ್ಕಿದನು. ಸುತ್ತಲಿದ್ದವರು ಶಾಂತನಾಗೆಂದು ತಡೆದರೆ, ಅವರನ್ನು ಕೆಡೆಬೀಳಿಸಿದನು. ಕೌರವಪಕ್ಷವನ್ನೆಲ್ಲ ತಾನೆ ಸುಟ್ಟು, ಭಸ್ಮವನ್ನಾಗಿ ಮಾಡುವೆನೆಂದೂ ಭೀಷ್ಮನನ್ನು ಕತ್ತರಿಸಿ ಭೂತಗಳಿಗೆ ಬಲಿಯುಣಿಸುವೆನೆಂದೂ ಬೊಬ್ಬಿರಿದನು. 'ಶಿವ ಶಿವಾ!' ಎಂದು ಸೇನೆಗಳ ಅದೊಂದು ಮಹಾಘೋಷವೆದ್ದಿತು. ಕೌರವರು ನಡುನಡುಗಿ ನಿಲ್ಲಲೂ ಬಾರದೆ, ಬೀಳಲೂ ಆಗದೆ, ಅಲ್ಲಲ್ಲಿ ಅವರ ದೇಹವ್ಯಾಪಾರಗಳೆಲ್ಲ ತಡೆದಂತಾಯಿತು. ವಿಶ್ವಬ್ರಹ್ಮಾಂಡವೆಲ್ಲವೂ 'ಜಯ, ಜಯ'ವೆಂದು ಕೋಲಾಹಲಮಾಡಿತು.

ಅರ್ಜುನನು ಸಿಡಿಲ್ಗುಂಡು ಹೊಯ್ದಂತೆ ಮೂಗನಾದನು. ಪಾಂಡವರ ಭ್ರಮೆಯು ಅಪಾರವಾಯಿತು.

ಭೀಷ್ಮನು ಮಾತ್ರ ನಡುಗಲೂ ಇಲ್ಲ, ಕೆರಳಲೂ ಇಲ್ಲ, ಭ್ರಮಿಸಲೂ ಇಲ್ಲ. ಕೂಡಲೇ ತನ್ನ ಬಿಲ್ಲನ್ನು ಬಿಸುಡಿದನು. ರಥದಿಂದ ಕೆಳಕ್ಕಿಳಿದು ಆವನು ಶ್ರೀಕೃಷ್ಣನಿಗೆ ಸಾಷ್ಟಾಂಗವೆರಗಿದನು. ಎದ್ದು, ಕೈಜೋಡಿಸಿಕೊಂಡು, ನಾನಾ ಬಗೆಯಾಗಿ ಭಗವಂತನನ್ನು ಸ್ತೋತ್ರಮಾಡುತ್ತ, 'ಮಗುವಿನಲ್ಲಿ ಗುಣದೋಷಗಳನ್ನು ಹುಡುಕುವುದೆ? ಭಗವಂತನೆ ಸಿಟ್ಟೇರಿ ನನ್ನನ್ನು ಇದಿರಾಡುವುದಕ್ಕೆ ನಾನಷ್ಟು ಪ್ರಬಲ ಬಲನೆ? ನೀನು ಇದಿರು ನಿಂದುದರಿಂದ ಚಿಕ್ಕ ಗೆದ್ದಲುಗೂಡಿನಂತಿರುವ ನಾನು ಮಹಾಮೇರುವಿನ ಗಾತ್ರವನ್ನು ಪಡೆದೆನಲ್ಲವೆ? ನನ್ನಲ್ಲಿ ಇಂತಹ ಸಂಭಾವನೆಯೇಕೆ? ಮಹಾಮಹಿಮನಾದ ನೀನು ಈ ರೀತಿಯಾಗಿ ವರ್ತಿಸಿರುವುದನ್ನು ಕಂಡರೆ ನನಗೂ ನಗುಬರುತ್ತದೆ. ಮಹಾತ್ಮನೆ! ಪ್ರಲಯಕಾಲದ ಯೋಗನಿದ್ರಾವಸ್ಥೆಯಲ್ಲಿ ನೀನಿರುವಾಗಲೆ, ಐನೂರುಸಾವಿರ ಬ್ರಹ್ಮರು ಸಂದುಹೋದರೆಂಬ ಆ ಹೆಗ್ಗಳಿಕೆಯೆಲ್ಲಿ—ಹುಲು ಮನುಷ್ಯನಾದ ನಾನೆಲ್ಲಿ? ಅವತಾರಪುರುಷನಾಗಿ ಈ ಭಾರತವರ್ಷಕ್ಕೆ ನೀನು ಜನ್ಮಗ್ರಹಣ ಮಾಡಿ ಇಳಿವುದೆತ್ತ? ಈ ರೀತಿಯಾಗಿ ರಥದಿಂದಿಳಿದು ಬರುವುದೆತ್ತ? ನೀನು ಈ ರೀತಿ ನಾಚುಗೆಗೆ ಈಡಾಗುವ ಹಾಗೆ ಮಾಡಿದುದೇ ನನಗೆ ಅಪಯಶವನ್ನುಂಟುಮಾಡುವುದಲ್ಲವೆ? ನಿನ್ನ ಮೈಯ ರೋಮಕೂಪವೊಂದರಲ್ಲಿ ಬ್ರಹ್ಮಾಂಡಗಳೆಷ್ಟು ಉರುಳಾಡುತಿವೆ? ಹೀಗಿರುವಾಗ ನನ್ನಂತಹ ಬಡಪ್ರಾಣಿಯು ವಿರೋಧಿಯೆಂದು ಬಗೆವ ಈ ನಿನ್ನ ಮರುಳತನವೆಂತಹುದು? ಇದೆಲ್ಲವೂ ವ್ಯರ್ಥವಾದ ಆಡಂಬರವಲ್ಲವೆ? ನೀನೆ ಸಿಟ್ಟನ್ನು ಧರಿಸಿದೆ ಎಂಬುವ ಈ ಗುಟ್ಟನ್ನು ತಿಳಿದುಕೊಂಡರೆ,—ಕೋಪವೇ ತಪಸ್ಸನ್ನು ಲಯಗೊಳಿಸುವುದೆಂದು ಬಲ್ಲ ನಿನ್ನ ಆರಾಧಕರಾಗಿರುವ ಮುನಿಗಳು ಏನೆಂದಾರು? ಮನುಷ್ಯರು ಕಡು ಮೂರ್ಖರೆಂಬುದು ನಿಜವಾದರೂ ಮಾನವಾವತಾರವನ್ನೆತ್ತಿರುವ ನೀನೂ ಇಂತಹ ಮೂರ್ಖತನಕ್ಕೆ ಎಡೆಗೊಡಬಹುದೆ? ಅಥವಾ ನೀನೇಕೆ ಮರುಳಾಗುವೆ? ನೀನು ಇಂತಹ ಮರುಳನಾದೆಯೆಂದು ನಾವು ಭಾವಿಸಲೆಂದು ಈ ಬಗೆಯ ಠಕ್ಕನ್ನು ಬೀರುವೆಯಾ? ನೀನು ಎಣಿಸಿದ ಮಾತ್ರದಲ್ಲಿ ನನ್ನಂತಹ 'ಪಿತಾಮಹ'ರು

ಕೋಟಿಸಂಖ್ಯೆಯಲ್ಲಿ ವಿನಾಶರಾಗುವರು; ಪುನಃ ವಿಲಾಸಕ್ಕೆಡೆಕೊಡುವೆಯಾದರೆ, ಚಿಂತಾಮಾತ್ರದಲ್ಲಿ ಕೋಟಿ ಬ್ರಹ್ಮರೂ ಹುಟ್ಟುವರು. ಅನಂತ ಮಹಿಮನಾದ ನೀನು ಅತಿ ಗೂಢನೆಂಬುದು ಸರ್ವರಿಗೂ ತಿಳಿಯದೆಂದು ಈ ಕಪಟಾಚರಣೆಯೆ? ದೇವಾ,-ಆದರೆ,-

ದೇವ! ನೀ ದಿಟ ಕೊಲುವಡೆಯು ತಾ
ಸಾವನೇ? ತಾನಾವನೆಂಬುದ
ದೇವರರಿಯಿರಲಾ ವೃಥಾ ಸಂಭಿನ್ನರೋಷದಲಿ ॥
ದೇವನಾಮದ ಜೋಡು ತನ್ನನು
ಕಾವುದೇ, ಮುನಿದಡೆಯು ನಿಮ್ಮಗೆ
ನಾವು ಹೆದರೆವು ನಾಮಧಾರಕರತುಳಬಲರೆಂದ.

ಕೊಲುವವನು ನೀನೆಂಬುದು ನಿಜವಾದರೂ ಸಾಯುವವನು ನಾನೆಂಬುದು ನಿಜವಲ್ಲ; ನಾನು ಸಾಯಲು ಎಂತಹ ವರಗಳನ್ನುಳ್ಳವನೆಂಬುದನ್ನು ನೀನು ತಿಳಿದೇ ಇರುವೆ. ನನ್ನಲ್ಲಿ ರೋಷವೇತಕ್ಕೆ? ಅಂತಹ ರೋಷಕ್ಕೆ ಬೆದರುವವನು ನಾನಲ್ಲವೆಂಬುದಕ್ಕೆ 'ಭೀಷ್ಮ'ನೆಂಬುವ ನನ್ನ ನಾಮಧೇಯವೆ ಸಾಕ್ಷಿಯು. ನನ್ನನ್ನು ಕೊಲ್ಲುವುದಕ್ಕೆ ನಿರ್ಧರಿಸಿರುವೆಯಾದರೆ, ನಿನಗೆ ಅಪಕೀರ್ತಿಯುಂಟಾಗಿ ನಾನೇ ಬಲನೆನಿಸಿಕೊಳ್ಳುವುದಕ್ಕಿಂತ ಸಾಯುವುದಕ್ಕೊಪ್ಪುವೆನು. ನಿನ್ನ ಚರಣಗಳ ಕೀರ್ತಿಯು ಮಾಸದಿರಲಿ. ಇನ್ನೂ ಸಿಟ್ಟಿದೆಯಾದರೆ, ನಾನಾಗಿ ಸಾಯುವೆನು; ಸುಮ್ಮನೆ ಚಕ್ರಾಯುಧವನ್ನು ಪ್ರೇರಿಸಬೇಕಾಗಿಲ್ಲ; ನಿನ್ನ ತೇಜಸ್ಸು ನಿನ್ನಲ್ಲೇ ಇರಲಿ; ಅಥವಾ ಕೊಲುವೆಯಾದರೆ, ಆ ಸುದರ್ಶನವನ್ನು ಎಸೆದು ನೋಡಬಹುದು. ಬೆದರಿ ಒಂದೇ ಒಂದು ರೋಮವಾದರೂ ನಡುಗಿದರೆ ನನ್ನ ಹೆಸರನ್ನೆ ಅಳಿಸು. ಇಂತಹ ನಾನಾ ಛಲಗಳನ್ನು ನಾನೆಷ್ಟೊ ನೋಡಿರುವೆನು' ಎಂದು ವಿಜ್ಞಾಪಿಸಿಕೊಂಡನು.

ಭಕ್ತರ ಬಂಟನಾದ ಭಗವಂತನು ಇನ್ನೇನು ಮಾಡುವನು? ಈ ಬಿನ್ನಹಕ್ಕೆ ಮೆಚ್ಚಿ, ತನ್ನಲ್ಲಿ ತಾನೆ ನಾಚಿಕೊಂಡನು. ಸುದರ್ಶನವನ್ನು ಒಂದು ಕೈಯಿಂದ ಮುಚ್ಚಿಕೊಂಡು, ಮತ್ತೊಂದು ಕೈಯಿಂದ ಬೆಚ್ಚಿ ಬೆದರಿದೆಲ್ಲರಿಗೂ ಅಭಯವನ್ನು ಕೊಟ್ಟು, ಪುನಃ ಅರ್ಜುನನ ರಥವನ್ನೇರಿದನು. ಬ್ರಹ್ಮನು ಅಡಿಗಡಿಗೆ ಭೀಷ್ಮನ ಭಕ್ತಿಯ ಮಹಿಮೆಯನ್ನು

ಕೊಂಡಾಡುತ್ತ, ಬ್ರಹ್ಮಾಂಡಕ್ಕೆ ಉಂಟಾದ ಅಂದಿನ ಸಂಕಟವು ಇವನ ಭಕ್ತಿಭಾವದಿಂದ ದೂರಗೊಂಡಿತೆಂದನು. ಶ್ರೀಕೃಷ್ಣನು ಬೆದರಿ ನಡುಗುತಲಿದ್ದು ಮೂಗಿನ ಮೇಲೆ ಬೆರಳನ್ನಿಟ್ಟು ಮೂಗನಾಗಿದ್ದ ಅರ್ಜುನನನ್ನು ತಕ್ಕೈಸಿ ಮರಳಿ ಕುದುರೆಗಳ ವಾಘೆಯನ್ನು ಸೆಳೆದು ಬಿಗಿಹಿಡಿದು, ಪುನಃ ಯುದ್ಧೋದ್ಯೋಗದಲ್ಲಿ ಪ್ರವೃತ್ತನಾದನು.

ಅವಷ್ಟರಲ್ಲಿ ಎಂದಿನಂತೆ ನೂರು ಸಾವಿರ ಪಾಂಡವ ಸೇನಾರಥಿಕರನ್ನು ಸಂಹರಿಸಿ, ಭೀಷ್ಮನು ಪ್ರತಿಜ್ಞಾಪಾಲನವಾಯಿತೆಂದು ತನ್ನ ವಿಜಯ ಶಂಖವನ್ನೂದಿದನು. ಅದರ ಧ್ವನಿ ಕೇಳಿ 'ಒಹೋ, ಶ್ರೀಕೃಷ್ಣನು ಚಕ್ರವನ್ನು ಪ್ರಯೋಗಿಸುವುದಿಲ್ಲ'ವೆಂದು, ಸೂರ್ಯನು ಆಗಲೆ ಅಸ್ತಾಚಲದ ಮರೆಯಲ್ಲಿ ವಿಶ್ರಮಿಸಿದನು.

---

## ೧೭ ಇಚ್ಛಾಮರಣಿಯ ಮರಣೋಪಾಯ

ಒಂಬತ್ತನೆಯ ದಿನವೂ ಎಂದಿನಂತೆ ಮಹಾಯುದ್ಧವೆಸಗಿತು. ಕೌರವಾನುಜರಿಷ್ಟೋ ನುಂದಿ ಮೊದಲೆ ಮಡಿದಿದ್ದರು. ಇತ್ತಂಡಗಳಲ್ಲೂ ಹಾವಳಿಯು ವಿಪರೀತವಾಗಿದ್ದಂತೆ ವ್ಯಕ್ತವಾಗುತ್ತ ಬಂದಿತು. ಭೀಷ್ಮನು ತನ್ನ ಪ್ರತಿಜ್ಞೆಯು ಪೂರಯಿಸುವಂತೆ ಕಾದಿದನು. ಪಾಂಡವರು ಮನನೊಂದರು. ಇನ್ನು ಉಳಿಗಾಲವೆಲ್ಲಿಯದು? ಶ್ರೀಕೃಷ್ಣನ ಅಭಿಪ್ರಾಯವನ್ನು ಪಡೆಯಲು ಅವರು ಅದೇ ರಾತ್ರಿಯಲ್ಲಿ ಶಿಬಿರಕ್ಕೆ ಬಂದರು.

ಯುಧಿಷ್ಠಿರನು ದುಃಖಭಾರದಿಂದ ಕುಗ್ಗಿದನು. ಶ್ರೀಕೃಷ್ಣನನ್ನು ಕುರಿತು,—"ಮಹಾಸ್ವಾಮಿ, ಗಂಗಾಪುತ್ರನು ನಮ್ಮ ಸೈನ್ಯಗಳನ್ನೆಲ್ಲ ನಿರ್ನಾಮಮಾಡುತಿರುವನು. ಅವನು ನಮ್ಮಲ್ಲಿ ವೈರವನ್ನೆ ಸಾಧಿಸಿರುವನು. ಜಯವಧುವು ಆ ಬ್ರಹ್ಮಚಾರಿಗೆ ಒಲಿದು ಮಾಲೆ ಹಾಕುವಳಂತೆ! ನಮ್ಮ ಭಟರ ಬಲಗೈಗಳು ಯುದ್ಧ ವಿದ್ಯಾಕೌಶಲವನ್ನೆ ಮರೆದಂತಿವೆ. ಬಿರುದುಳ್ಳ ಭಟರು ಬೆರಗಾಗಿರುವರು. ನಮ್ಮ ಸೈನ್ಯವು ಹಸಿದ ಹುಲಿಯಂತೆಯೂ ಸುಂಡಿಲು ತುಂಡಾದ ಆನೆಯಂತೆಯೂ, ಚಿತ್ರದಲ್ಲಿ ಅಂಕಿಸಿರುವ ಸಿಂಹದಂತೆಯೂ ವ್ಯರ್ಥವಾಗಿರುವದಲ್ಲ! ಸುಭಟರು ಮನಸ್ಸಿನಲ್ಲೊಂದು ಕೈಯ

ಲ್ಲೊಂದು ಎನ್ನುವಂತೆ ಕಾದಾಡುತ್ತಿರುವರು. ಭರವಸೆಯಿಲ್ಲದೆ ಅಟ್ಟಹಾಸದಿಂದ ಮುಂದೊತ್ತಿ ಈಗ ಪುರುಷಾರ್ಥವೇನನ್ನೂ ಸಾಧಿಸಲರಿಯದೆ ನಮ್ಮ ಬಲವೆಲ್ಲವು ಕುಗ್ಗಿರುವುದು. ಇಷ್ಟರೊಳಗೆ ತೊಂಬತ್ತುಸಾವಿರ ಅರಸುಗಳು ಮಡಿದರು. ಉಳಿದವರು ತಮ್ಮ ಸೈನ್ಯಸಾಗರಕ್ಕೆ ವಡಬಾನಲದಂತೆ ಭೀಷ್ಮನಿರುವನೆಂದೂ ಅವನನ್ನು ಗೆಲುವುದು ತಮಗೆ ಅಸಾಧ್ಯವೆಂದೂ ಹೇಳುತ್ತಿರುವರು. ಇನ್ನು ನಮ್ಮನ್ನು ಕಾವರಾರು? ಭಕ್ತವತ್ಸಲನೆ, ನಮಗೆ ಪುನಃ ವನವಾಸವೆ ಗತಿಯೋ?' ಎಂದು ಬಿನ್ನವಿಸಿಕೊಂಡನು.

'ಧರ್ಮರಾಜನೆ, ನಿನ್ನ ಮನಸ್ಸು ವನವಾಸವನ್ನೆ ಬಯಸುತ್ತಲಿದೆಯಾದರೂ ಸುಮ್ಮನೆ ಯುದ್ಧದ ಆಟವನ್ನೇಕೆ ಹೂಡಿರುವೆ? ಅದಿರಲಿ. ಭೀಷ್ಮನನ್ನು ಗೆಲ್ಲುವುದಕ್ಕೆ ಹರನಿಗೂ ಸಾಧ್ಯವಿಲ್ಲ. ಯುದ್ಧಮಾಡಿ ಅವನಿಂದ ಜಯಲಕ್ಷ್ಮಿಯನ್ನು ನಾವೆಂದಿಗೂ ಒಲಿಸಿಕೊಳ್ಳಲಾರೆವು. ಸಾಮದಲ್ಲಿಯೆ ಮಾತ್ರ ಅವನನ್ನು ಮುರಿಯಬಹುದಾಗಿದೆ' ಎಂದು ಶ್ರೀಕೃಷ್ಣನೆನ್ನಲು, ಅದೇ ಸರಿಯಾದುದೆಂದು ಧರ್ಮರಾಜನು ಒಪ್ಪಿಕೊಂಡನು.

ಆ ಬಳಿಕ, ರಾತ್ರಿ ವೇಳೆಯಲ್ಲಿಯೆ, ಗುಪ್ತವಾಗಿ ಧರ್ಮರಾಜನು ಸೋದರರ ಸಮೇತನಾಗಿ ಕೃಷ್ಣನಿಂದೊಡಗೂಡಿ ಭೀಷ್ಮನ ಪಾಳೆಯಕ್ಕೆ ಬಂದು ಪಡಿಹಾರರಿಗೆ ಸೂಚಿಸಲು, ಅವರು ಭೀಷ್ಮನ ಸಮಯವನ್ನು ತಿಳಿದು ಇವರನ್ನು ಒಳಬಿಟ್ಟರು. 'ಎಂದಿಗೆ ಧರ್ಮರಾಯನು ತನ್ನಲ್ಲಿಗೆ ಬಂದನೊ ಅಂದಿಗೇ ಕೌರವನನ್ನು ಕೊಂದನು' ಎಂದು ಭೀಷ್ಮನು ಮನಸ್ಸಿನಲ್ಲಿ ತಿಳಿದು, ಅಲ್ಲಿದ್ದವರನ್ನು ಹೊರಕ್ಕೆ ಕಳುಹಿಕೊಟ್ಟು, ಕುಂತೀಪುತ್ರರನ್ನು ವಿನಯದಿಂದ ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಂಡನು. 'ವೇದಗಳು ಹುಡುಕುತ್ತಲಿದ್ದರೂ ಯಾವನು ತನ್ನ ನಿಜಸ್ವರೂಪವನ್ನು ಪ್ರಕಟಗೊಳಿಸದೆ ಮರೆಯಲ್ಲಿರುವನೊ, ಅಂತಹನು ನನ್ನನ್ನು ಹುಡುಕಿಕೊಂಡು ಇಲ್ಲಿಗೆ ಬರುವುದಕ್ಕೆ ನಾನೆಷ್ಟರವನು? ಇದೇ ತನ್ನ ದಾಸರನ್ನು ಭಗವಂತನು ಮೆರೆಯಿಸುವ ರೀತಿಯು' ಎಂದು ಭೀಷ್ಮನು ಶ್ರೀಕೃಷ್ಣನ ಚರಣಗಳನ್ನು ವಂದಿಸಿದನು. ಅವನು ಭೀಷ್ಮನನ್ನೆತ್ತಿ ಆಲಿಂಗಿಸಿಕೊಂಡು, ಪಾಂಡವರು ತಂದಿದ್ದ ಕಾಣಿಕೆಗಳನ್ನೊಪ್ಪಿಸಿ, ಅವರನ್ನು ಅವನ ಕಾಲಿಗೆರಗಿಸಲು, ಭೀಷ್ಮನು ಸಂತೋಷದಿಂದ ಮೈಮರೆದನು.

ಭೀಷ್ಮನು ಪಾಂಡವರನ್ನೆತ್ತಿ 'ಸಮರವಿಜಯಿಗಳಾಗಿರಿ!' ಎಂದು ಹರಸಿದನು. ಬಳಿಕ,—'ಈಗ ರಾತ್ರೀಕಾಲವು. ಇದು ಶತ್ರುಗಳ ಪಾಳೆಯವು. ಕೌರವರು ಉಚಿತವಾವುದು ಅನುಚಿತವಾವುದು ಎಂಬುದನ್ನು ತಿಳಿದವರಲ್ಲ. ನೀವು ಈ ರೀತಿಯಾಗಿ, ಶ್ರೀಕೃಷ್ಣನ ಬೆಂಬಲವಿದೆಯೆಂದಾದರೂ, ರಾಜನೀತಿಯನ್ನು ಮರೆತು ಇಲ್ಲಿಗೆ ಬಂದುದು ಅಷ್ಟೊಂದು ಉತ್ತಮವಾಗಿಲ್ಲ. ಇರಲಿ, ಈಗ ಬಂದ ಕಾರ್ಯವೇನು? ಸಂಕೋಚಪಡದೆ ತಿಳುಹಬಹುದು!' ಎಂದು ಧರ್ಮರಾಜನಿಗೆಂದನು.

ಧರ್ಮರಾಜನು ಅಜ್ಜನಿಗೆ ಕೈಮುಗಿದು 'ಮಹಾತ್ಮರೆ,—ನೀವೂ ಶ್ರೀಕೃಷ್ಣನೂ ನಮ್ಮ ಸಂರಕ್ಷಕರಾಗಿರುವಿರಿ. ನಾವು ಬಾಲಕರು; ತಿಳಿದೂ ತಿಳಿಯದೆಯೂ ನಾವು ಮಾಡಿದ ಅಪರಾಧಗಳನ್ನು ಮನ್ನಿಸಿ ನಮ್ಮನ್ನು ಪರಿಪಾಲಿಸಿಕೊಂಡು ಅನಾಥರಕ್ಷಕರೆಂಬ ಬಿರುದನ್ನು ನೀವೇ ಪಡೆಯುವ ಭಾಗ್ಯವುಳ್ಳವರು. ಏನನ್ನೂ ತಿಳಿಯದವನೆಂದು ಬಾಲಕನನ್ನು ಹೆತ್ತ ತಾಯಿ ಸಲಹುವುದಕ್ಕೆ ಮರೆವುದುಂಟೆ? ನೀವೆರಡು ವಜ್ರದ ಕವಚಗಳಂತೆ ನಮಗಿರಲು ನಾವೇಕೆ ಬೆದರುವೆವು? ನಮಗೆ ಅಪಜಯವು ಹೇಗೆ ಲಭಿಸುವುದು? ರಾಜ್ಯಭ್ರಮೆಯು ನಮ್ಮನ್ನು ಹಿಡಿದಿರುವುದು. ನೀವಾದರೊ ತ್ರಿಲೋಕವಿಜಯಿಗಳು. ಯುದ್ಧದಲ್ಲಿ ನಾವು ಸೋತವರೆ ಸರಿ; ನಮ್ಮ ಭಟರುಗಳು ಯಮಕಿಂಕರರಾದರು. ನಮ್ಮ ಮೇಲೆ ದಯೆಯಿಟ್ಟು ನಾವು ಮಾಡತಕ್ಕುದೇನಿರುವುದೊ ಅದನ್ನು ಅಪ್ಪಣೆಕೊಟ್ಟರಾಯಿತು. ಭೀಮಾರ್ಜುನರು ಇದು ವರೆಗೂ ಯುದ್ಧಮಾಡಿ ನೊಂದಿರುವರು. ನಿಮ್ಮೊಬ್ಬರಿಂದಲೇ ನಮ್ಮ ರಾಜರುಗಳೆಲ್ಲರೂ ಸವೆದಿರುವರು. ಇನ್ನು ನಮ್ಮನ್ನು ಸಲಹುವಿರೇ ಅಥವಾ ಕೊಲುವಿರೇ ತಿಳಿಯದಾಗಿದೆ. ನಿಮ್ಮ ಅಭಿಪ್ರಾಯವೇನಿರುವುದೊ ಅದನ್ನು ತಿಳುಹಬಾರದೇ? ನಮ್ಮ ಸೇನೆಗಳು ಬಲಗುಂದಿವೆ; ಶತ್ರುಸೇನೆಗಳು ಇನ್ನೂ ಪ್ರಬಲವಾಗಿವೆ. ನಿಮ್ಮನ್ನು ಕಾದಿಕೊಲುವುದಕ್ಕೆ ನಿಮ್ಮನ್ನು ಹೆತ್ತ ತಾಯಿಯು ಜಾಹ್ನವಿಯಲ್ಲವೆ? ಇನ್ನು ನಿಮ್ಮನ್ನು ಕಾದಿದಂತೆಯೂ ಆಯಿತು, ಕಟ್ಟಿದಂತೆಯೂ ಆಯಿತು, ಗೆದ್ದಂತೆಯೂ ಆಯಿತು. ಮತ್ತೇನು? ಹಿಂದೆ ಅನುಭವಿಸಿದ ಆ ವನವಾಸಕ್ಕೇ ಪುನಃ ಹೋಗಿರೆಂದು ನಮಗೆ ಅಪ್ಪಣೆಕೊಡುವಿರಾದರೆ, ಅಲ್ಲಿಗೆ ಎಲ್ಲವೂ ಸಾಂಗವಾಗುವುದು. ನಮಗಿನ್ನು ರಾಜ್ಯವೇತಕ್ಕೆ ಬೇಕು?' ಎಂದು ದೈನ್ಯದಿಂದ ಹೇಳಿಕೊಂಡನು. "ನಿಮ್ಮ

ಮಾತನ್ನು ಮೀರುವವರಾರು? ಇವರು ಉಭಯತರೂ ನಿಮ್ಮ ಮುನ್ಮಕ್ಕಳಲ್ಲವೆ? ನೀವು ಕುಣಿಸಿದಂತೆ ಇವರ ಜೀವನವಿರುವುದು, ಹಿಂದೆ ಬಾಲ್ಯದಿಂದಲೂ ಇವರನ್ನು ಕಾಪಾಡಿದವರು ನೀವಾದುದರಿಂದ ಇವರು ನಿಮ್ಮನ್ನೆ ನಂಬಿರುವರು.'' ಎಂದು ಶ್ರೀಕೃಷ್ಣನು ಕೂಡಿಸಿ ಹೇಳಿದನು.

ಭೀಷ್ಮನು ಮೌನದಿಂದ ಈ ಮಾತುಗಳನ್ನು ಲಾಲಿಸಿದನು. ಅವನ ಮನಸ್ಸು ಕರುಣೆಯಿಂದ ನನೆಯಿತು. ಕಣ್ಣುಗಳು ಕಂಬನಿತುಂಬಿದುವು. ''ವತ್ಸ, ನನಗೆ ಸಾವು ಸಮೀಪವಾಗಿರುವುದು. ನಿನಗೆ ಇನ್ನು ಭಯವೇಕೆ? ದುರ್ಯೋಧನನು ಶ್ರೀಕೃಷ್ಣನ ಮಾತಿಗೆ ಒಪ್ಪಲಿಲ್ಲದಂದೇ ನೀವು ಜಯಶಾಲಿಗಳಾದಿರಿ! ನಾನೆಷ್ಟೋ ರಾಜರುಗಳನ್ನು ಸಂಹರಿಸಿರುವೆನಾದರೂ ನಿಮ್ಮನ್ನು ನೋಯಿಸಿಲ್ಲ, ನೀವೇಕೆ ಧೃತಿಗೆಡುವಿರಿ? ಇನ್ನು ಮುಂದಣ ಯುದ್ಧದಲ್ಲಿ ನನ್ನಿಂದ ಲೋಕಕ್ಷಯವನ್ನು ಮಾಡಿಸುವ ಬದಲಾಗಿ ನೀವೇ ವನವಾಸಕ್ಕೆ ಅಪ್ಪಣೆ ಪಡೆಯಲು ಸಿದ್ಧರಾಗಿರುವಿರೆಂದು ಎನ್ನುವಿರಲ್ಲವೆ? ಧರ್ಮವಿರುವಲ್ಲಿಯೆ ಜಯವೆಂದು ನಿಮಗೆ ತಿಳಿಯದೆ? ಯಾವ ಪಕ್ಷದಲ್ಲಿ ಸಾಕ್ಷಾತ್ತಾಗಿ ಜಗದ್ರಕ್ಷಕನಾದ ಹರಿಯೆ ಸೇವಾತುರನಾಗಿ ನಿಂದಿರುವನೋ, ಯಾರ ಧರ್ಮದ ಪ್ರಗತಿಯೂ ಪ್ರಚಾರವೂ ನಿರ್ವಿಘ್ನವಾಗಿ ಸಾಗಲೆಂದು ಶ್ರೀಹರಿಯೆ ಯಾರ ಬಂಡಿಯ ಬೋವಿಯಾಗಿ ಆಳುತನವನ್ನು ನಡೆಸುತ್ತಿರುವನೊ, ಅಂತಹರಿಗೆ ಶತಭೀಷ್ಮರು ಮುನಿದರೂ ಅವರೇ ಜಯಶೀಲರಾಗುವರೆಂಬುದು ವೇದವಚನದಷ್ಟೆ ಸತ್ಯವಾಗಿರುವುದು'' ಎಂದು ಭೀಷ್ಮನು ಹೇಳಿದನು.

ಧರ್ಮರಾಯನು—''ನಿಮ್ಮ ಮಾತುಗಳು ಸತ್ಯವೇ ಆದರೂ, ನೀವೇ ಎಷ್ಟು ದಿನ ಅಧರ್ಮದ ಕಡೆಗೆ ನಿಂದು ಹೋರಾಡುವಿರೊ ಅಷ್ಟು ಕಾಲವೂ ನಮಗೆ ಜಯವಾಗುವುದೆಂಬ ಆಸೆಯು ವ್ಯರ್ಥವಲ್ಲವೆ? ಯುದ್ಧದಲ್ಲಿ ನಿಮಗಿದಿರಾಗಿ ನಿಲ್ಲಬಲ್ಲವನಾವನು? ಅದೂ ಅಲ್ಲದೆ, ನೀವು ಇಚ್ಛಾಮರಣಿಗಳು! ಸಮರವಿಜಯಿಗಳಾಗಿರಿ ಎಂಬ ನಿಮ್ಮ ಆಶೀರ್ವಾದವು ಹೇಗೆ ಸತ್ಯವಾಗಿ ಪರಿಣಮಿಸುವುದೊ, ನಾವರಿಯೆವು,'' ಎಂದು ನಿರಾಶೆಯಿಂದ ನುಡಿದನು.

ಭೀಷ್ಮನು ನಸುನಗುತ್ತ,—''ಯುಧಿಷ್ಠಿರನೆ, ನಾನು ಇನ್ನೂ ಜೀವಿತನಾಗಿರುವೆನೆಂದು ಭಾವಿಸಿರುವಿಯೊ? ಯಾವ ದಿನ ಶ್ರೀಕೃಷ್ಣನು ನನ್ನ

ಪ್ರತಿಜ್ಞೆಗೆ ಭಂಗವನ್ನು ತಂದನೊ, ಅಂದೇ ನಾನು ಮಡಿದಿರುವೆನೆಂದು ತಿಳಿ. ಅಂದೇ ನನ್ನ ಭೀಷ್ಮನೆಂಬುವ ಹೆಸರಿಗೆ ಕುಂದುಂಟಾಯಿತು. ಅದೇ ನನಗೆ ಮರಣವಲ್ಲವೆ? ಆದರೆ, ದುರ್ಯೋಧನನಿಗೆ ನಾನು ಹತ್ತು ದಿನಗಳ ತನಕ ಕಾದುವೆನೆಂದು ಮಾತು ಕೊಟ್ಟಿರುವೆನೆಂದೇ ಆ ಅವಧಿಯು ಮುಗಿಯುವ ತನಕ ಜೀವ ಹಿಡಿದಿರುವೆನು. ನಾಳೆಗೆ ಹತ್ತನೆಯ ದಿನವಲ್ಲವೆ? ನಾನು ಸಶಸ್ತ್ರನಾಗಿ ಯುದ್ಧರಂಗದಲ್ಲಿರುವಾಗ ಎಂತಹನೂ ನನ್ನನ್ನು ಗೆಲ್ಲಲು ಸಮರ್ಥನಾಗನು. ಆದರೆ ನನ್ನನ್ನು ಕೊಲ್ಲುವುದಕ್ಕೆ ಉಪಾಯವೂ ಅತಿ ಸಹಜವಾಗಿಯೆ ಇರುವುದು. ಯುದ್ಧಕ್ಷೇತ್ರದಿಂದ ನಾನು ಪಲಾಯನ ಮಾಡುವಾತನೆ ಅಲ್ಲ; ನಪುಂಸಕರ ಇದಿರಿನಲ್ಲಿ ನಾನೆಂದೂ ಅಸ್ತ್ರಹಿಡಿವವನೆ ಅಲ್ಲ. ಹೀಗಿರುವಾಗ ಅತಿ ಸಾಧಾರಣನಾದ ಯಾವನೊಬ್ಬನೂ ನನ್ನನ್ನು ಕೊಲ್ಲಬಹುದಲ್ಲವೆ?'' ಎಂದು ತಿಳುಹಿ, ಶ್ರೀಕೃಷ್ಣನನ್ನು ಕಡೆಗಣ್ಣಿಂದ ನೋಡುತ್ತ, ''ಮರಣಕಾಲದಲ್ಲಿ ಶ್ರೀಚರಣಗಳ ದರ್ಶನವು ನನಗೆ ಲಭಿಸಲಿ'' ಎಂದು ಸುಮ್ಮಗಾದನು.

'ತನ್ನನ್ನು ಸೋಲಿಸುವುದಕ್ಕೆ ತಾನೆ ಉಪಾಯವನ್ನು ಹೇಳಿಕೊಡುವ ಅಪ್ರತಿಮವೀರನು ಎಂದೂ ಹುಟ್ಟಿರುವನೆ? ಮುಂದೆ ಹುಟ್ಟಲಿರುವನೆ?' ಈ ರೀತಿಯಾಗಿ ಭಾವಿಸುತ್ತ ಸಿಂದ ಪಾಂಡವರೊಳಗೆ, ಭೀಷ್ಮನೊಡನೆ ಯುದ್ಧಕ್ಕೆ ಸತತವೂ ಇದಿರಾಗುವ ಅರ್ಜುನನು, ಶಿವ ಶಿವ!' ಎನುತ ಕಣ್ಣೀರನ್ನು ಬೆರಳಿನಿಂದ ಮಿಡಿದು,—''ನಮಗೆ ಜಯವಾದಂತಾಯಿತಲ್ಲವೆ? ನಮ್ಮಂತಹ ಕೃತಾರ್ಥರು ಪ್ರಪಂಚದಲ್ಲಿರಬಹುದೆ? ನನಗೆ ತಮ್ಮಂತಹ ಹಗೆಗಳು ಇನ್ನಾರು ಇರಬಹುದು? ಕಾಡಿನಲ್ಲಿ ನಮ್ಮ ತಂದೆಯು ಮಡಿಯಲು, ನಿಮ್ಮ ತೊಡೆಯ ತೊಟ್ಟಿಲಿನಲ್ಲಿಯೆ ನಾವು ಬೆಳೆದೆವು. ನಮ್ಮ ದೂಳಾಟದ ದಿನಗಳಿಂದ ನೀವೇ ನಮ್ಮನ್ನು ಸಲಹಿದವರು. ನಮ್ಮ ವಯಸ್ಸನ್ನೂ ಅಧಿಕಾರವನ್ನೂ ತಿಳಿದು, ನೀವೇ ನಮಗೆ ರಾಜ್ಯವನ್ನು ಕೊಡಿಸಿದಿರಿ. ಆದರೆ ಕೃಷ್ಣಾ, ಈಗ ಇಂತಹರನ್ನು ಕೊಲ್ಲಲು ನನ್ನ ಮನಸ್ಸು ಹೇಗೆ ಬಯಸುವುದು? ಭೀಷ್ಮನನ್ನು ಕೊಂದ ಮಹಾವೀರನೆಂದು ನನ್ನ ಹೆಸರು ಲೋಕದಲ್ಲಿ ಬೆಳಗುವುದಲ್ಲವೆ? ಅಹ! ಇಂತಹ ಕೊಲೆಯಿಂದ ದೊರೆವ ರಾಜ್ಯವು ಸುಡಲಿ! ಘಾತುಕರು ಪಾತಕರು ಎನ್ನಿಸಿಕೊಂಡು ರಾಜ್ಯವಾಳುವುದು ಎಂತಹ ಸುಕೃತವೊ! ಪಾಂಡವರ ಹೆಸರನ್ನೆತ್ತುವುದೂ

ಮಹಾಪಾತಕವೆಂದು ಜಗತ್ತಿನಲ್ಲಿ ಸೂರ್ಯಚಂದ್ರರಿರುವ ತನಕವೂ ನಾವು ಗಾದೆಗೆ ಬರುವೆವಲ್ಲವೆ?'' ಎಂದು ಶ್ರೀಕೃಷ್ಣನಿಗೆ ಬಿನ್ನವಿಸಿ, ಸಂತಾಪದಿಂದ ಬೆಂದನು. ಮಿಕ್ಕ ಪಾಂಡವರೂ ಮೌನದಿಂದ ಅಳತೊಡಗಿದರು.

ಭೀಷ್ಮನು,—''ಕ್ಷಾತ್ರಧರ್ಮವನ್ನು ಚೆನ್ನಾಗಿ ಬಲ್ಲ ನೀನು, ಈ ರೀತಿಯಾಡುವುದೆ? ರಾಜನೀತಿಯು ನಿನಗೆ ತಿಳಿಯದ ವಿಷಯವೆ? ಕೀರ್ತಿ ಅಪಕೀರ್ತಿಗಳು ವಿಧಿವಶವಾಗಿವೆ; ನೀನು ಕೊಲ್ಲುವ ಪರಾಕ್ರಮವುಳ್ಳವ ನೆಂದೂ ಭಾವಿಸದಿರು; ನಿನ್ನಿಂದ ಸಾವರೊಬ್ಬರೂ ಇಲ್ಲ.

ಯಂತ್ರಿ ಪಿಡಿದರೆ ಕಾದಿ ಬೀಳ್ವವು
ಯಂತ್ರಮಯ ರೂಹುಗಳು. ಹಗೆಯಾ
ಯಂತ್ರಿಗೋ ರೂಹುಗಳಿಗೋ? ನೀ ಹೇಳು ನಿಶ್ಚಯವ ।
ಯಂತ್ರಿ ಕೃಷ್ಣನು, ನಾವು ನೀವೀ
ತಂತ್ರ ಸಕಲ ಚರಾಚರಂಗಳು
ಯಂತ್ರಮಯ ರೂಹುಗಳಲ್ಲಿ ಕಾರಣವಿಲ್ಲ ಕೇಳೆಂದ.

ಸೂತ್ರಧಾರನು ಹಗ್ಗ ಎಳೆದಂತೆ ಕುಣಿಯುವ ಸೂತ್ರದ ಗೊಂಬೆಗಳಲ್ಲಿ ಪರಸ್ಪರವಾಗಿ ಕಾದಾಟವುಂಟಾಗುವಂತೆ ಸೂತ್ರಗಳನ್ನೆಳೆದುದೇ ಆದರೆ, ಕೊಂದ ಬೊಂಬೆ ಯಾವುದೊ ಅದಕ್ಕೆಲ್ಲಿಯ ಕೀರ್ತಿಯು? ಸತ್ತ ಬೊಂಬೆ ಯಾವುದೊ ಅದಕ್ಕೆಲ್ಲಿಯ ವಿನಾಶವು? ವಧೆಯು ಸೂತ್ರಧಾರನ ಪಾಲಿಗೆ ಬೀಳುವುದೆ, ಅಥವಾ ಬೊಂಬೆಗಳ ಪಾಲಿಗೆ ಬರುವುದೆ? ನಾವೂ ನೀವೂ ಯಂತ್ರಮಯವಾದ ಬೊಂಬೆಗಳು; ಯಂತ್ರಿಯಾದಾತನೆ ಶ್ರೀಕೃಷ್ಣನು. ಇವನೇ ಎಲ್ಲಕ್ಕೂ ಕಾರಣನಾಗಿರುವನಲ್ಲದೆ, ಯಂತ್ರಗಳಂತಿರುವ ಈ ಚರಾ ಚರಗಳು ಕಾರಣವಾಗಿ ಇರುವುದಿಲ್ಲ. ಒಂದು ಕೈಯಿಂದ ಇವನೇ ಜಗತ್ತನ್ನು ಹೂಡುವನು; ಮತ್ತೊಂದು ಹೆಸರನ್ನು ಧರಿಸಿಕೊಂಡು ಇವನೇ ಜಗತ್ತನ್ನು ಸಲಹುವನು; ಇನ್ನೊಂದು ರೀತಿಯಲ್ಲಿ ಹಣೆಗಣ್ಣಿನ ಜ್ವಾಲೆ ಯಿಂದ ಇವನೇ ಜಗತ್ತನ್ನು ಧ್ವಂಸಮಾಡುವನು. ಆದುದರಿಂದ ನೀನು ಕೊಂದರೂ ಹಗೆಯಿಲ್ಲ; ನಾನು ಸಲಹಿದೆನೆಂದೂ ಇದರಲ್ಲಿ ಮೋಹಕ್ಕೆ ಎಡೆ ಯಿಲ್ಲ; ಏತಕ್ಕೆಂದರೆ, ಇದೆಲ್ಲಕ್ಕೂ ಕಾರಣನು ಪರಮಾನಂದಮಯನಾದ ಇವನೇ ಹರಿಯು. ನಾವು ಉಳಿದೆವೊ, ಅದು ಅವನ ಕರುಣೆಯೆ; ನಾವು ಮಡಿಯುವೆವೊ, ಅದೂ ಅವನ ಕೈಯಿಂದಲೆ. ಆದುದರಿಂದ ನೀನು

ಇದರಿಂದಾಗಿ ನನನ್ನು ಕೊಲ್ಲಲು ಹೆದರದಿರು. ನನ್ನನ್ನು ಕೊಲ್ಲುವವನು ನೀನಲ್ಲ, ಅನುಪಯುಕ್ತವಾದಂತಹ ಯಾವ ಕ್ಷಣಕ್ಕಾದರೂ ನಾನು ಬದುಕಲಿಚ್ಛಿಸುವ ಜೀವಿಯಲ್ಲವೆಂದು ನನ್ನ ದೃಢಭಾವವನ್ನರಿತೇ, ನನಗೆ ಇಚ್ಛಿಸಿದಾಗಲೆ ಸಾಯುವಂತೆ ವರವೂ ಕೊಡಲಾದುದು. ಇಚ್ಛಾಮರಣಿಯಾಗಿರುವ ನಾನೇ ನನ್ನ ಮರಣಕ್ಕೆ ಕಾರಣನು; ನಾನೇ ನನ್ನ ಮರಣದ ಇಂಗಿತವನ್ನು ಅದಕ್ಕಾಗಿಯೇ ತಿಳುಹಿದೆನು. ಶ್ರೀಕೃಷ್ಣನು ನನ್ನನ್ನು ಎಂದೋ ವಧಿಸಿಯೇ ಇರುವನು; ಹೀಗೆ ಅವನೆ ನನ್ನ ಮರಣಕ್ಕೆ ಕಾರಣನು. ಶ್ರೀಕೃಷ್ಣನೂ ನಾನೂ ಕೂಡಿ ಕೊಂದಿರುವ ನನ್ನನ್ನೆ ನೀನು ಕೊಲುವಂತೆ ತೋರಿದರಾಯಿತು. ಇನ್ನು ಬಾಲಕರಿರಾ, ಭಾವಶುದ್ಧಿಯುನ್ನಿಟ್ಟು ತೆರಳಿರಿ. ನನ್ನ ಮಾತನ್ನು ನಂಬಿರಿ. ತೆರಳಿರಿ, ವಿಜಯ ಹೊಂದಿರಿ!" ಎಂದು ಎಲ್ಲರನ್ನು ಪುನಃ ಆಶೀರ್ವದಿಸಿ ಕಳುಹಿಸಿಕೊಟ್ಟನು. ಪಾಂಡವರು ಭೀಷ್ಮನ ಚರಣಗಳಿಗೆರಗಿ, ಅಂದಿನ ಕಾರ್ಯವಿಶೇಷವನ್ನು ತಿರುತಿರುಗಿ ಪರ್ಯಾಲೋಚಿಸುತ್ತ, ಶ್ರೀಕೃಷ್ಣನೊಡನೆ ತಮ್ಮ ಶಿಬಿರಕ್ಕೆ ಮರಳಿದರು.

---

## ೧೮. ಯುದ್ಧತ್ಯಾಗ

ಅಖಂಡ ಸತ್ಯಪ್ರತಿಜ್ಞನೂ ಅಪ್ರತಿಮ ಸತ್ವಶಾಲಿಯೂ ಆದ ಗಂಗಾಪುತ್ರನು ಯುದ್ಧರಂಗವನ್ನು ಪ್ರವೇಶಿಸಿ, ವಹಿಸಿಕೊಂಡ ಯುದ್ಧಕಾರ್ಯಭಾರವು ಅವಿಚ್ಛಿನ್ನವಾಗಿ ನಡೆಯುತ್ತ ಬಂದುದನ್ನು ಈಗ ತಾನೇ ಸೂರ್ಯದೇವನು ತಿಳಿದು, ತನ್ನ ಮಗನನ್ನು ಮೂದಲಿಸಿದ ಮುದಿಯನು ಹತ್ತನೆಯ ದಿನ ಮಾಡುವುದೇನಿದೆಯೊ ಅದನ್ನೊಮ್ಮೆ ಕಾಣುವೆನೆಂದು, ಕುತೂಹಲದಿಂದ ಮೂಡಣಬೆಟ್ಟದ ಮರೆಯಿಂದ ಮೊಗವನ್ನೆತ್ತಿ ಇಣಿಕಿದನು. ಯುದ್ಧರಂಗದಲ್ಲಿ ಆಗಲೆ ಹೆಗ್ಗಾಳೆಗಳು ಮೊರೆದುವು; ಗಜತುರಗಗಳು ಆ ಸಂಜ್ಞೆ ತಿಳಿದೆದ್ದುವು. ಭಟರು ಸನ್ನದ್ಧರಾದರು. ತೇರುಗಳ ತಳುಕು ರಣರಂಗವನ್ನು ಪ್ರಭಾಮಯವನ್ನಾಗಿ ಮಾಡಿ, ಸಂದುಗೊಂದುಗಳಲ್ಲಿನ ಮೃತದೇಹಗಳನ್ನು ಗೋಚರಕ್ಕೆ ತಂದಿತು. ಪಾಠಕರ ಮಂಗಲಗೀತದ

ಉದಯರಾಗವನ್ನಾಲಿಸಿ ದುರ್ಯೋಧನನು ಉಪ್ಪವಡಿಸಿ, ಸಾಯದೆ ಇನ್ನೂ ಉಳಿದ ಸೋದರರೊಡನೆ ವೈಯಾರದಿಂದ ಸಿಂಗರಿಸಿ, ಯುದ್ಧರಂಗಕ್ಕೆ ಹೊರಟನು. ಪಾಂಡವರೆದ್ದು ಧರ್ಮವಿಹಿತವಾದ ಕ್ರಿಯೆಗಳನ್ನು ಮುಗಿಸಿ ಶ್ರೀಕೃಷ್ಣಾಶೀರ್ವಚನದಿಂದ ಅಲಂಕೃತರಾಗಿ ಕಾಳಗಕ್ಕೆ ಮುನ್ನಡೆದರು.

ಮಾನಸ ಸರೋವರದೊಳಗಿನ ಪ್ರಫುಲ್ಲಿತವಾದ ಪದ್ಮಗಳಂತೆ ಛತ್ರಗಳೂ, ಆಕಾಶಗಂಗೆಯ ಕಾಲುವೆಗಳಂತೆ ಪತಾಕೆಗಳೂ, ಐರಾವತದ ಜಾಲಗಳಂತೆ ಚಾಮರಗಳೂ, ಕಲ್ಪವೃಕ್ಷದ ಸಾಲುಗಳಂತೆ ಈಟಿಗಳೂ ಶೋಭಿಸಿದುವು. ಜಯಲಕ್ಷ್ಮಿಯನ್ನು ಒಲಿಸಲು 'ನಾನು ಮುಂದೆ....ನಾನು ಮುಂದೆ' ಎಂದು ಆಳುಗಳು ಮುನ್ನಡೆದರು. ಭೀಷ್ಮನ ಕಾರ್ಯಭಾರವು ಇಂದಿಗೆ ಮುಗಿಯುವುದರಿಂದ, ಇಂದೇ ಪಾಂಡವರ ಆನಂದಕ್ಕೆ ಹೊಗೆ ಮುಚ್ಚುವುದೆಂದೂ, ಪಾಂಡವರು ಇಂದೇ ಅಮರಾವತಿಗೆ ನಡೆವರೆಂದೂ, ಭೀಮಾರ್ಜುನರ ಪ್ರತಾಪವಿಷಕ್ಕೆ ಇಂದೇ ಗಾರುಡೀಮಂತ್ರ ಪ್ರಯೋಗವಾಗುವುದೆಂದೂ ಕೌರವಾನುಜರು ಪರಸ್ಪರ ಆಡಿಕೊಳ್ಳುತ್ತಿದ್ದರು. ಭೀಷ್ಮನಾದರೋ ತನ್ನ ವಿಶಿಷ್ಟ ಅಲಂಕಾರವನ್ನೂ ಮಾಡಿಕೊಂಡು, ಸೈನ್ಯಗಳಿಗೆ ಸಂಜ್ಞೆ ತಿಳುಹಿ, ಪರಾಕ್ರಮವನ್ನು ಹಬ್ಬಿದನು. 'ಅರ್ಜುನನೂ ಭೀಮನೂ ಇಲ್ಲಿರುವರಾದರೆ ಮುಂದಕ್ಕೆ ಬರಲಿ' ಎಂದು ನಾಯಕರು ಕೂಗಿದರು. ಇತ್ತಂಡದ ಪ್ರಮುಖವೀರರು ಶಸ್ತ್ರಾವಳಿಗಳಿಂದ ಮಳೆಗಾಲವನ್ನು ಬರಮಾಡಿದರು. ಅಶ್ವತ್ಥಾಮನು ದ್ರುಪದನೊಡನೆಯೂ, ಕೃಪನು ಸಾತ್ಯಕಿಯೊಡನೆಯೂ, ದ್ರೋಣಾಚಾರ್ಯನು ಭೀಮನೊಡನೆಯೂ, ದುರ್ಯೋಧನನು ಧರ್ಮರಾಜನೊಡನೆಯೂ ಯುದ್ಧಕ್ಕೆ ದುಡುಕತೊಡಗಿದರು. ಅಭಿಮನ್ಯುವು ಭೀಷ್ಮನನ್ನು ಕೆಣಕಿದನು; ಅತಿ ವೃದ್ಧನೂ ಬಾಲಕನೂ ಯುದ್ಧದಲ್ಲಿ ಇದಿರಾದಂತಾಯಿತು. ದುಶ್ಶಾಸನನು ಅರ್ಜುನನನ್ನೂ, ಭಗದತ್ತನು ಘಟೋತ್ಕಚನನ್ನೂ ಸೆಣಸಿದರು. ಉಭಯ ಸೇನೆಗಳೊಳಗೆ ಮಹಾಯುದ್ಧವು ಉಪಕ್ರಮಿಸಲು, ಕೌರವ ಪಕ್ಷದವರ ಬಲವು ಕುಂದಿತು. ದ್ರೋಣನು ಪಾಂಡವ ಸೈನ್ಯಗಳ ಪರಾಕ್ರಮಕ್ಕೆ ತಲೆದೂಗಿದನು. ಎಲ್ಲಿ ನೋಡಿದರೂ ಅರ್ಜುನನೊಬ್ಬನ ಬಾಣಗಳೆ ಎಲ್ಲರನ್ನು ನೋಯಿಸುವಂತೆಯೂ ಯಾರ ಬಾಣಗಳಾದರೂ ಅರ್ಜುನನ ಮೈಗೆ ತಗಲದಿರುವಂತೆಯೂ ಕಾಣುತ್ತಿದ್ದಿತು. ಕೆಲವರು ಹಾವಳಿಯನ್ನು

ಬಣ್ಣಿಸಿ, ಭ್ರಮೆಯಿಂದ, ಆರು ಸಾವಿರ ಆನೆಗಳೂ ಹದಿನಾರು ಸಾವಿರ ಕುದುರೆಗಳೂ ಆರು ಲಕ್ಷ ಪಾಯದಳವೂ ಮೂರು ಸಾವಿರ ರಥಗಳೂ ಅಂದಿಗೆ ಅರ್ಜುನನ ಬಾಣಗಳಿಗೆ ತುತ್ತಾದುವೆಂದು ಗುಣಿಸಿ ಹೇಳತೊಡಗಿದರು. ಇನ್ನು ಅರ್ಜುನನ ಹಾವಳಿಯನ್ನು ತಡೆಯಬೇಕೆಂದು ಹೆಣಗಳನ್ನು ತುಳಿದು ದನ್ನು ತಿಳಿಯದೆ ಒತ್ತೊತ್ತಾಗಿ ಸೇರಿ ಸೈನಿಕರು ಹಾಯ್ದರು. ಇದೂ ಒಂದು ವಿನೋದವೆಂದು ಅರ್ಜುನನು ಮತ್ತಷ್ಟು ಚೆನ್ನಾಗಿ ಕಾದಾಡ ಲಾರಂಭಿಸಿದನು. ದಿಗಂತದಿಂದಲೆ ಬಾಣಗಳು ಹುಟ್ಟಿ ಹಾರಲಾರಂಭಿಸಿ ದುವೊ, ಮೇಘಮಾಲೆಯನ್ನು ಯಾರಾದರೂ ಕೊಯ್ದು ಭೂತಲಕ್ಕೆ ಕೆಡಹಿದರೊ, ಎನ್ನುವಂತೆ ಹೊಳೆಯುತ್ತಿರುವ ಬಾಯುಳ್ಳ ಅಸಂಖ್ಯಾತ ಬಾಣಗಳಿಂದ ಅರ್ಜುನನು ಶತ್ರುಸೈನ್ಯವನ್ನು ಮುಚ್ಚಿದನು. ಆಗ ದ್ರೋಣ ಪುತ್ರನು, ಈ ಹಾವಳಿಯೆಲ್ಲಿಯದು? ಜೇನುಹುಟ್ಟನ್ನು ಬಡಿದಂತೆ ಸೈನಿಕರನ್ನು ಕೊಲುವುದೆಂದರೇನು ಎಂದು ಕೂಗುತ್ತ, ಅತಿರಥರೆಲ್ಲರನ್ನೂ ಕರೆದು ಅರ್ಜುನನ ಮೇಲೆ ಎರಗುವಂತೆ ಸೂಚಿಸಿದನು. ಅಶ್ವತ್ಥಾಮನ ಕ್ರೂರಾದ ಬಾಣಗಳೂ, ದ್ರೋಣನ ಬಾಣಸಾಗರವೂ, ಶಲ್ಯನ ಬಾಣರಾಶಿಯೂ, ಶಕುನಿಯ ಬಾಣಪಂಜರವೂ, ಕೃಪನ ಬಾಣಮೇಘವೂ, ದುರ್ಯೋಧನನ ಬಾಣವೃಷ್ಟಿಯೂ, ಸೈಂಧವ ಕೃತವರ್ಮರುಗಳ ಬಾಣಾವಳಿಗಳೂ ಭೂತಳವನ್ನು ಹೂಳಿದುವು! ಆದರೆ ಮಾಡುವುದೇನು? ಅಗ್ನಿಯು ರಾಜ್ಯ ವನ್ನು ಅರಗು ಹೊಕ್ಕಂತಾಯಿತು. ಮೇಘಗಳ ದಳವು ಗಾಳಿಯ ಮನೆಗೆ ದಿಬ್ಬಣ ಬಂದಂತೆಯೂ ಆಯಿತು. ಅರ್ಜುನನು ಹೂಡಿದ ಬಾಣಗಳು ಎಷ್ಟಿದ್ದವೆಂದರೆ, 'ಅವನ ಬಾಣಗಳಾವುವು, ಹಗೆಗಳ ಬಾಣಗಳಾವುವು' ಎಂದು ವಿಂಗಡಿಸಿ ನೋಡಲಾಗುತಿರಲಿಲ್ಲ; ಅತಿರಥರ ರಥಗಳನ್ನೂ ಅಸ್ತ್ರ ಗಳನ್ನೂ ಅವನು ಕಡಿದಿಕ್ಕಿದನು. ಇವರು ಪುನಃ ಯುದ್ಧಕ್ಕೆ ಬಂದರೂ, ಇವರ ಬೆಂಬಲವಾಗಿ ಮತ್ತೂ ಮಹಾರಥರು ಕಲೆತರೂ ಅರ್ಜುನನ ಇದಿರು ನಿಲ್ಲಲಾರದಾಗಲು,—'ಅತಿರಥರೂ ಮಹಾರಥರೂ ರಥರಹಿತರಾಗಿ ಪಲಾ ಯನ ಮಾಡುತಿರುವರಲ್ಲಾ!' ಎಂದು ಅಲ್ಲಲ್ಲಿ ಗುಜುಗುಜು ಧ್ವನಿಯೆದ್ದಿತು. ಅವರು ಸ್ವಾಮಿಕಾರ್ಯವನ್ನೂ ಮನ್ನಿಸದೆ, ಜಯಲಕ್ಷ್ಮಿಯನ್ನೂ ವರಿಸದೆ, ಮುಕ್ತಿರಾಜ್ಯವನ್ನು ಸೇರಲು ಆಸೆಪಡದೆ, ಯಶಸ್ಸಿನ ಗೋಜಿಗೆ ಹೋಗದೆ,- ಎಲ್ಲರೂ ಒಂದೇ ಬಾರಿ ವಿರಕ್ತರಾದರು. ಇಂತಹ ನಪುಂಸಕರನ್ನು ನಂಬಿ

ತಾನು ಕೆಟ್ಟೆನೆಂದು, ದುರ್ಯೋಧನನು ಭೀಷ್ಮನಿಗೆ ದೂರುಕೊಡಲು ವೇಗದಿಂದ ಅವನು ರಥದ ಕಡೆಗೆ ಬಂದನು.

ದುರ್ಯೋಧನ—ಜೀಯಾ! ನೋಡಲಿಲ್ಲವೆ? ಸೇನಾನಾಯಕರು ತಮ್ಮ ಧರ್ಮವನ್ನು ಮರೆದು, ಜಠರಪರಾಯಣರಾಗಿ ಪಲಾಯನವನ್ನು ಮಾಡಿ, ತಮ್ಮ ಬಿರುದುಗಳನ್ನಾದರೂ ಕಾಯಲಾರದೆ ಹೋದರಲ್ಲ!

ಭೀಷ್ಮ—ಅದು ವಿಚಿತ್ರವಲ್ಲ. ದೇವಾಸುರರೊಳಗೆ ಅರ್ಜುನನನ್ನು ಇದಿರಾಡುವವರು ಯಾರು? ಇವರು ಹುಲುಮನುಷ್ಯರು, ತಡೆಯಲಾರದಾಗ ತಿರುಗುವುದೇ ಯುದ್ಧದ ಕ್ರಮ. ವಿದ್ಯಮಾನಗಳನ್ನು ನೋಡಿಯೆ ಕಾದುವುದು ಯೋಗ್ಯವಲ್ಲವೆ?

ದುರ್ಯೋಧನ—ಕೊನೆಗೆ ಈ ತೆರನಾಯಿತೆ? ನೀವು ಹೇಳಿದ್ದೆ ನಿಜವೆಂದು ನಂಬದೆ ನಮಗೆ ಬೇರೆ ಉಪಾಯವಿಲ್ಲ. ಅರ್ಜುನನೆ ದಿವ್ಯವೀರನೆಂದೂ, ಪಲಾಯನವೆ ವೀರರಿಗೆ ದಿವ್ಯಧರ್ಮವೆಂದೂ ಆಯಿತು! ಇನ್ನು ಹೀಗೆ ಅರ್ಧಯುದ್ಧದಲ್ಲೆ ಶರಣೆನ್ನಿರೆಂದು ನಮಗೆ ಅಪ್ಪಣೆ ಕೊಟ್ಟರೆ, ಅದೇ ನಮಗೆ ಪುಣ್ಯೋದಯವು!

ಭೀಷ್ಮ—ನೀನಾದರೆ, ಅಂದಿನಿಂದ ಇದುವರೆಗೂ ನಮ್ಮ ಮಾತಿಗೊಪ್ಪದೆ ಸಿಟ್ಟಾದೆ. ಅಂದಿನಿಂದಲೂ ನಿಮಗೆ ನಾವು ಹೇಳುವುದೇ ಅನುಚಿತವೆಂದೇ ತೋರುತ್ತಲಿದೆಯಲ್ಲವೆ? ನಾನು ಈ ಸಿಂಹಾಸನದ ರಕ್ಷಕನೆಂದು ಮಾತಿಗೆ ಕಟ್ಟುಬಿದ್ದವನು; ನೋಡೋಣ—ಹದಿನೆಂಟು ಸಾವಿರ ಬಂಡಿ ತುಂಬ ಬಾಣಗಳು ಬರಲಿ! ಹನ್ನೆರಡು ಸಾವಿರ ಧನುಸ್ಸುಗಳು ಸಿದ್ಧವಿರಲಿ! ಕೌರವನಾಯಕರೆಲ್ಲರೂ ಯುದ್ಧಕ್ಕೆ ಬಂದು ಕೂಡಲಿ. ಅವರೆಲ್ಲರೂ ನನ್ನಂತೆಯೇ ಏಕಪ್ರಕಾರವಾಗಿ ಯುದ್ಧಮಾಡಿದರೆ, ಇಂದೇ ಪಾರ್ಥನ ಬಲವನ್ನೆಲ್ಲ ಯಮಪುರಕ್ಕೆ ಕಳುಹುವೆನು.

ಹೀಗೆಂದು ಭೀಷ್ಮನು ಕೂಡಲೆ ಪಾಂಡವರ ಸೈನ್ಯವನ್ನು ಬೆಂಬಳಸಿದನು. ಪಾಂಡವರೊಳಗಣ ಪ್ರತಿಯೊಬ್ಬ ವೀರನನ್ನೂ ಇದಿರಿಸಿ ಹಿಂದಟ್ಟಿದನು. ಇನ್ನೆಲ್ಲಿ? ಸೇನೆಗಳು ಎಲ್ಲಿವೆಯೊ? ತುರಗದಳವನ್ನೂ ಕಡಿದು ಬಿಸುಟನು; ಹೇರಾನೆಗಳನ್ನು ಕೆಡಹಿದನು; ರಥಗಳನ್ನೆಲ್ಲ ಪುಡಿಗೈದನು; ಕಾಲಾಳುಗಳು ಕಾಲುಗಳ ಜತನವನ್ನು ನೋಡುವಂತೆ ಮಾಡಿದನು. 'ಅಹಹ! ಇವರೇನು ಕ್ಷಾತ್ರವೀರರೆ, ರಾಜಕುಲದವರೇ? ಭೂಮಿಯನ್ನು

ಆಳುವುದು ಇಂತಹರ ಕೈಯಲ್ಲಿಯೇ? ಭರತಖಂಡವು ಧನ್ಯವಾಯಿತು—' ಎಂದು ಗಹಿಗಹಿಸಿ ನಗುತ್ತ, ಅವರ ಬೆನ್ನುಗಳ ಸಾಲನ್ನು ನೋಡಿ ನಕ್ಕನು. ಅಷ್ಟರಲ್ಲಿ ಅರ್ಜುನನು ಇದಿರಾದನು. ಅರ್ಜುನನು ಈ ನಗುವನ್ನು ತಡೆಯಲು ಭೀಷ್ಮನ ರಥವನ್ನು ಒಂದು ಸಾವಿರ ಹೆಜ್ಜೆ ದೂರಕ್ಕೆ ಹಿಂದೋಡಿಸಿದನು. ಭೀಷ್ಮನು ಆಗಲೆ 'ದಾಮೋದರಾ! ನಿನ್ನ ರಥದ ಜತನವನ್ನು ನೋಡಿಕೋ!' ಎಂದು ಒಂದೇ ಬಾಣದಲ್ಲಿ ಆ ರಥವು ಮೂರು ಹೆಜ್ಜೆಗಳಷ್ಟು ಹಿಂದಕ್ಕೆ ಉರುಳುವಂತೆ ಸಾಧಿಸಿದನು. ಶ್ರೀಕೃಷ್ಣನು,—'ಭೀಷ್ಮಾ— ಧನ್ಯ ಧನ್ಯ!' ಎಂದನು.

ಆಗ ಅರ್ಜುನನು—'ಇದೇನು? ನನ್ನ ಬಾಣಕ್ಕೆ ಪಿತಾಮಹರ ರಥವು ಸಹಸ್ರ ಪಾದಗಳಷ್ಟು ಹಿಂದೋಡಿತು; ಅವರ ಬಾಣಕ್ಕೆ ನನ್ನ ರಥವು ಮೂರೇ ಹೆಜ್ಜೆ ಹಿಂದಕ್ಕುರುಳಿತು. ಹೀಗಾದಲ್ಲಿ ಪಿತಾಮಹರು ಎಂತಹ ಪರಾಕ್ರಮವನ್ನು ತೋರಿದರೆಂದು ಈ ಧನ್ಯವಾದವು?' ಎಂದು ವಿಚಾರಿಸಿದನು.

ಶ್ರೀಕೃಷ್ಣನು—'ಅರ್ಜುನಾ, ನಿನ್ನ ಕಪಿಧ್ವಜರಥದ ಮೇಲೆ ಸುಮೇರುಸದೃಶನಾದ ಹನುಮಂತನು ವಿರಾಜಿಸುತ್ತಿರುವನು; ಅದರಿಂದ ಈ ರಥವು ಪರ್ವತದಂತೆ ಭಾರವುಳ್ಳುದಾಗಿದೆ. ಅದು ಸಾಲದೆ, ವಿಶ್ವಂಭರನಾದ ನಾನೂ ಇದರಲ್ಲೆ ಕುಳ್ಳಿರುವೆನು. ಯಾವ ಶಕ್ತಿಯಿಂದ ಇದು ಮೂರೇ ಹೆಜ್ಜೆ ಹಿಂದುರುಳಿತೊ, ಅದೇ ಶಕ್ತಿಯಿಂದ ಭೀಷ್ಮನ ರಥವು ಬ್ರಹ್ಮಾಂಡದಾಚೆಗೆ ಉರುಳಿ ಮಾಯವಾಗುತಿದ್ದಿತು! ಅದಕ್ಕಾಗಿಯೆ ಭೀಷ್ಮನಿಗೆ ಧನ್ಯವಾದವನ್ನಿತ್ತೆನು,' ಎನ್ನುವುದರೊಳಗೆ ಭೀಷ್ಮನು ಹತ್ತು ಸಾವಿರ ಪಾಂಡವ ರಥಿಕರನ್ನು ತನ್ನ ಪ್ರತಿಜ್ಞೆಯಂತೆ ಕೊಂದಿಕ್ಕಿದನು. "ಪಾಂಡವಬಲವು ಅಲ್ಲಲ್ಲಿಗೇ ಹಿಂಜರಿಯಿತು, ಮುರಿಯಿತು, ತೆರಳಿತು, ಹೆದರಿತು. ಭೀಮನಿಂದ ಹಿಮ್ಮೆಟ್ಟುವವರನ್ನು ತಡೆಯಲಾಗಲಿಲ್ಲ; ಸಹದೇವನು ಬಲದ ಹಿಂಭಾಗವನ್ನು ನೋಡಬಂದನು; ಧೃಷ್ಟದ್ಯುಮ್ನನಕುಲರು ಅನುಚಿತವಾದುದನ್ನೆ ಮಾಡಿದರು; ಘಟೋತ್ಕಚನು ಅಧರ್ಮವನ್ನೆ ನೆನೆದನು; ಪಾಂಚಾಲ—ಮತ್ಸ್ಯರು ಹಲವರ ದಾರಿಯೆ ತಮಗೆಂದು ಮುಖ ತಿರುಹಿದರು! ಸಾಹಸಿಯೆಂದರೆ ಭೀಷ್ಮನು!" ಎಂದು ದೇವತೆಗಳು ಹೇಳಿದರು. ಇದನ್ನು ನೋಡಿ, ಅರ್ಜುನನು ತನ್ನ ರಥವನ್ನೂ ಇನ್ನು ತಿರುಗಿಸುವುದು ಉಚಿತವೆಂದನು.

ಆದರೆ, ಶ್ರೀಕೃಷ್ಣನು ಕೂಡಲೆ ರಥವನ್ನು ಭೀಷ್ಮನ ಇದಿರಲ್ಲಿ ನಿಲ್ಲಿಸಿದನು. ಭೀಷ್ಮನು 'ಅರ್ಜುನನೆ, ನಾವು ವೃದ್ಧರು. ನಮಗೆ ಬಿರುದುಗಿರುದುಗಳೂ ಒಂದೂ ಇಲ್ಲ. ನೀವು ಯೌವನದ ವೀರರು. ನೀವೆಲ್ಲರಿರುವಾಗ ಸೇನೆಯು ನಿರ್ನಾಯಕವೆನ್ನಬಹುದೆ? ಎಂದೋ ಆ ಹಳೆಯ ಕಾಲದಲ್ಲಿ ಪರಶುರಾಮರನ್ನು ನಾನು ಕೆಣಕಿದ್ದೆನು; ಅವರೊಡನೆ ಕೈಮಾಡಿದೆನೆಂದು ನಿಮ್ಮೊಡನೆ ಸಾಗುವುದೆ? ನಿಮಗೆ ನಾನು ಇದಿರಾಗ ಬಲ್ಲೆನೆ? ನೀವಲ್ಲವೆ ಜಾಣಾಯ್ದರು?' ಎಂದು ನಗುತ್ತ ಮೂದಲಿಸಿದನು. ಅರ್ಜುನನು 'ನಿಮ್ಮ ಬಾಣಗರ್ಭಿಣಿಯನ್ನು ಹೆರಿಸಿ'ರೆಂದು ಕೂಡಲೆ ಬಾಣ ರಾಶಿಯಿಂದ ಅವನನ್ನು ಮುಚ್ಚಿದನು; 'ಇದೀಗ ಶಿವನನ್ನು ಮೆಚ್ಚಿಸಿ ಪಾಶುಪತವನ್ನು ದೊರಕಿಸಿಕೊಂಡ ಪ್ರೌಢಿಮೆಯಲ್ಲವೆ?' ಎನ್ನುತ್ತ ಭೀಷ್ಮನು ಬಿಟ್ಟ ಬಾಣವೃಷ್ಟಿಗೆ ಅರ್ಜುನನು ಕಂಗೆಟ್ಟನು. ಶ್ರೀಕೃಷ್ಣನು ಕೆರಳಿದನು; ಅರ್ಜುನನ ಮೈಯ ಮೇಲೆ ಬಾಣಗಳು ಒಂದರ ಹಿಂದೆ ಒಂದಾಗಿ ಸಾಲುಗಟ್ಟಿ ಇರಿವೆಗಳ ಹಿಂಡಿನಂತೆ ಹಾಯ್ದುವು. ಅರ್ಜುನನ ಬಾಣಗಳು ಹುತ್ತುಗಳನ್ನು ಹೊಗುವ ಹಾವುಗಳಂತೆ ಭೀಷ್ಮನ ಮೈಯೊಳಗೆ ಸುಳಿದುವು. ಭೀಷ್ಮನ ವಜ್ರಕವಚವು ಸೀಳಿತು, ಅವನ ನಾಳಧ್ವಜವು ಕೆಡೆದುದು; ಸಾರಥಿಯು ಎಂದೋ ಮಡಿದನು; ರಥದ ಕುದುರೆಗಳು ಉಸಿರನ್ನು ಕಾರಿದುವು; ಭೀಷ್ಮನು ಸೋತನೆಂದು ಕೌರವರೊಳಗೆ ಮಾತು ಹರಡಿತು. ಆದರೆ ಭೀಷ್ಮನು—'ಏನು? ಬಾಲಕನೆಂದು ಬಗೆದುದಕ್ಕೆ ಇಷ್ಟು ಪರಾಕ್ರಮವೆ? ನಿಮ್ಮೊಡನೆ ಹಗೆತನ ಬೇಡೆಂದರೂ ಕೆಣಕುವಿರೇ?' ಎಂದು ಬಾಣದ ಬಲೆಯನ್ನು ಬೀಸಿದನು. ಬಗೆಬಗೆಯ ಅಸ್ತ್ರಗಳನ್ನು ಭೀಷ್ಮನು ಹೂಡುತ್ತಲೂ, ಅರ್ಜುನನು ಪ್ರತ್ಯಸ್ತ್ರಗಳಿಂದ ಅವನ್ನು ಕತ್ತರಿಸುತ್ತಲೂ ರಭಸದಿಂದ ಇಬ್ಬರೂ ಕಾದಾಡಿದರು. ಕೌರವದುಶ್ಶಾಸನಾದಿಗಳನ್ನು ಭೀಷ್ಮನಿಗೆ ಒತ್ತಾಗಿ ಯುದ್ಧಮಾಡಲು ಕಳುಹಿದರು. ಅರ್ಜುನನಿಗೆ ಬೆಂಬಲವಾಗಿ ಪಾಂಚಾಲ-ಮತ್ಸ್ಯ-ಧೃಷ್ಟದ್ಯುಮ್ನ-ಸಾತ್ಯಕಿ ಮೊದಲಾದವ ರೆಲ್ಲರೂ ಬಂದೊದಗಿದರು. ಇವರೊಡನೆ ಬಿಲ್ಲಿನ ಠೇಂಕಾರವನ್ನು ಮಾಡುತ್ತ, ಬಾಣವನ್ನು ಲಕ್ಷ್ಯದ ಕಡೆಗೆ ತಿರುಗಿಸುವ ಬೆರಳಿನ ಸಂಭ್ರಮ ವನ್ನು ತೋರುತ್ತ, ರಥವನ್ನೇರಿ **ಶಿಖಂಡಿಯು** ಬಂದನು. ಅವನು ಬರುವು ದನ್ನು ನೋಡಿ ಅರ್ಜುನನು 'ಭೀಷ್ಮನ ಮೇಲೆ ನೀನು ಬಾಣಗಳನ್ನು

ಕೂಡಲೆ ಹೂಡುವವನಾಗು, ನಿನ್ನ ಬೆನ್ನ ಹಿಂದೆಯೆ ನಾನಿರುವೆನು, ಬೆದರ ಬೇಡ!' ಎಂದು ಶಿಖಂಡಿಗೆ ಸೂಚಿಸಲು—ಭೀಷ್ಮನ ಅಂಗಾಂಗಗಳೆಲ್ಲವೂ ಇವರಿಬ್ಬರ ಬಾಣಗಳಿಂದ ನೆತ್ತರು ಕಾರಿದುವು!

ಭೀಷ್ಮನು ಕಣ್ತೆರೆದು ನೋಡಿದನು,—ಏನನ್ನು ನೋಡಿದನು? ಇದಿರಲ್ಲಿ ಶಿಖಂಡಿಯು ನಿಂದಿರುವನು; ಆಗಾಗ ಅವನೇ ಅಂಬೆಯಂತೆ ತೋರುವನು. ಅಂದು ಅಗ್ನಿಯಲ್ಲಿ ಪ್ರಾಣತ್ಯಾಗವನ್ನು ಮಾಡುವಾಗ ಅವಳು ಶಾಪಕೊಟ್ಟುದು ನೆರವೇರುವ ಹಾಗೆ, ಇಂದು ಅವಳೇ ಶಿಖಂಡಿಯಾಗಿ ಸಮರಂಗದಲ್ಲಿ ನಿಂದು ಬಾಣಹೂಡುವಳು! ಭೀಷ್ಮನ ಮನಸ್ಸಿನಲ್ಲಿ ವೈರಾಗ್ಯವು ಮೂಡಿತು. ನಪುಂಸಕನೊಡನೆ ಕಾದುವುದೆ? ಅವನ ಬೆನ್ನ ಹಿಂದೆ ನಿಂದು, ಅರ್ಜುನನಿಂದ ಶ್ರೀಕೃಷ್ಣನೆ ಬಾಣಗಳನ್ನು ಎಸೆಯಿಸುತ್ತಿರುವನು!

ಅಗಲದಲಿ ದಿಗುವಳೆಯ ವಿಧಿಯಂ-
ಬುಗಳನೀದುದೊ! ಮೇಣು ಬಾಣದ
ಮುಗಿಲುಮಾಲೆಯು ಕೊಯ್ಗರೋ ಜರುಹಿದರೊ ಶರನಿಧಿಯ ॥
ಝುಗಝುಗಿಸಿ ಹೊಳೆಹೊಳೆವ ಬಾಯ್ಧಾ-
ರೆಗಳ ಹೊಳಹಿನ ಧಾರೆ ಬಿಂಕವ
ಮೊಗೆದವರ್ಜುನನಂಬುಗಳು ಚತುರಂಗ ಮೋಹರವ.

ಇನ್ನು ಸಾಕು! ಶಪಥದಂತೆ, ಭೀಷ್ಮನು ತನ್ನ ಬಿಲ್ಲನ್ನು ನಾರಾಯಣ ಸ್ಮರಣೆ ಮಾಡುತ್ತ ಕೆಳಗಿಟ್ಟು, ಇದಿರಾಗಿ ಬರುವ ಬಾಣಗಳಿಗೆ ಎದೆಗೊಟ್ಟು—'ಇನ್ನು ನಾನು ಕಾದುವುದಿಲ್ಲ; ಕೌರವರನ್ನು ಕಾಪಾಡುವರಾದರೆ ಶಲ್ಯ, ಗುರು, ಕೃಪ, ದುಶ್ಶಾಸನರು ಬರಲಿ; ಈ ಬಾಣಗಳು ಪಾಶುಪತದ ಕೊರೆಯುವಿಕೆಗಿಂತಲೂ, ಈಶ್ವರನ ತ್ರಿಶೂಲದ ಗಾಯಕ್ಕಿಂತಲೂ, ಇಂದ್ರನ ವಜ್ರಾಯುಧದ ಆಘಾತಕ್ಕಿಂತಲೂ, ಯಮದಂಡದ ಬಡೆದಾಟಕ್ಕಿಂತಲೂ, ಪರಶುರಾಮನ ಕೊಡಲಿಯ ಕಡಿತಕ್ಕಿಂತಲೂ, ಹರಿಯ ಗದೆಯ ಹೊಯ್ಲಿಗಿಂತಲೂ, ಕಠಿಣವಾಗಿವೆ. ಅವುಗಳ ಇದಿರಲ್ಲಿ ನನ್ನ ರೋಮವೂ ನಡುಗದು; ಅವನ್ನು ಉಗುರುಕೊನೆಯಿಂದ ಕಡಿಯುವೆನು. ಈ ಬಾಣಗಳು ಶಿಖಂಡಿಯವಲ್ಲ, ಅರ್ಜುನನವು. ಇನ್ನು ನನ್ನ ಪಾಲಿನ ಯುದ್ಧವಂತೂ ಇಲ್ಲಿಗಾಯಿತು!'

ಎನ್ನುತ್ತ, ಎದೆಯನ್ನು ಹೊಕ್ಕು ಬೆನ್ನಲ್ಲಿ ಮೂಡಿದ ಆ ಬಾಣಗಳ ಮೇಲೆ ಭೀಷ್ಮ ಪಿತಾಮಹನು ಮೆಲ್ಲಮೆಲ್ಲನೆ ಶ್ರೀಕೃಷ್ಣನನ್ನು ಸ್ಮರಿಸುತ್ತ, ಅಚೇತನ ನಾಗಿ, ರಣರಂಗದಲ್ಲಿ ನಿಂತಲ್ಲೆ ಒರಗಿದನು.

---

## ೧೯. ಶರಶಯ್ಯೆ

'ಪಾಂಡವರಂತಹ ಪಾಪಿಗಳು ಇರಬಹುದೆ? ಪಿತಾಮಹನು, ಗುರುವು, ಬಾಲ್ಯದಿಂದಲೂ ಇದು ವರೆಗೆ ಸಲಹಿದವನು! ಅಂತಹ ದಾತಾರನಿಗೆ ಮುನಿದವರೇ ಅವರು!' ಎಂದು ಪಾಂಡವರನ್ನು ಬೈಯುತ್ತ ಕುರುಸೇನೆಯು ದಿಕ್ಕುದಿಕ್ಕಿಗೆ ಓಡಿ ಚದರಿತು. ಮಹಾವೀರನಾದ ಭೀಷ್ಮನು ಯುದ್ಧಾಂಗಣ ದಲ್ಲಿ ಮಲಗಿದನೆಂದು ದುರ್ಯೋಧನನು ಕಳವಳಿಸಿದನು. ಬಾಣಗಳು ಭೀಷ್ಮನ ಮೈಯಲ್ಲಿ ನಾಟಿದುವಾದರೂ, ಅವುಗಳ ಬೇನೆಯು ದುರ್ಯೋಧ ನನ ಪ್ರಾಣಕ್ಕೆ ತಟ್ಟಿತು. ಅವನು ಬಿಸುಸುಯ್ಯುತ್ತ, ಗಳಗಳನೆ ಕಣ್ಣೀರು ಮಿಡಿದು, ದುಃಖಭಾರದಿಂದ ಪಿತಾಮಹನು ಒರಗಿದಲ್ಲಿಗೆ ಬಂದನು. ದುರ್ಯೋಧನನ ಭಾಗ್ಯರವಿಯು ಅಸ್ತಮಿಸಿದನೆಂದು ಗೋಳಿಡುತ್ತ, ಗುರು, ಕೃಪರೇ ಮೊದಲಾದವರೂ ಅತ್ತ ಬಂದರು. ಕುದುರೆಗಳು ಅತ್ತು ಕೊಂಡವು. ಆನೆಗಳು ನಡುಗಿದುವು; ಕಾಲಾಳುಗಳು ಹಾ—ಯೆಂದು ಒದರಿದರು. ದುರ್ಯೋಧನನು ಭೀಷ್ಮನ ಪಾದಗಳಿಗೆ ಎರಗಿ, ಅಲ್ಲೆ ಹೊರಳಾಡಿದನು; ಭೀಷ್ಮನ ಮತ್ತೊಂದು ಮಗ್ಗುಲಲ್ಲಿ ಪಾಂಡವರು ಶ್ರೀಕೃಷ್ಣನೊಡಗೂಡಿ ಬಂದರು. ಧರ್ಮರಾಯನ ಸಂತಾಪವು ಮಿತಿ ಮೀರಿದುದು; ಅವನು ಅಳುತಳುತ,—'ಏನನ್ನು ನೆನೆದು ಏನನ್ನು ಮಾಡಿ ದೆನು? ನನ್ನ ಪಾಪವೆಷ್ಟೆಂದು ಯಾರು ತಾನೇ ಹೇಳಲಾಪರು? ಎಂಥ ಅಪರಾಧವನ್ನು ನಾನು ಮಾಡಿರುವೆನು? ಯಮಧರ್ಮನು ನನ್ನನ್ನು ಹೇಗೆ ದಂಡಿಸುವನೋ ತಿಳಿಯದು' ಎಂದು ಭೀಷ್ಮನಲ್ಲಿ ಬಿನ್ನವಿಸಿಕೊಂಡನು. ಭೀಷ್ಮನು 'ಪ್ರಪಂಚದಲ್ಲಿ ನಿನ್ನಂತಹ ಚರಿತಾರ್ಥರಿಲ್ಲ; ಕ್ಷಾತ್ರಧರ್ಮವನ್ನು ಆದರಿಸು; ಅದೇ ನಿನಗೆ ಧರ್ಮಪಥವು. ನಿಮಗೆ ಅಪರಾಧವಾಗಲಿ ಪಾತಕವಾಗಲಿ ತಟ್ಟದು; ಈ ಮಾತಿಗೆ ಇಲ್ಲಿರುವ ಶ್ರೀಕೃಷ್ಣನೆ ಹೊಣೆ ಯಾಗಿರುವನು' ಎಂದು ಅವನನ್ನು ಸಂತವಿಸಿದನು.

ಭೀಷ್ಮನ ಮೈಯಲ್ಲಿ ನಾಟಿದ್ದ ಬಾಣಗಳು ಬೆನ್ನಿನಲ್ಲಿ ತುಂಬ ಮೂಡಿದ್ದುದರಿಂದ ಅದೊಂದು ಹಾಸುಗೆಯೆ ಆಗಿದ್ದಿತು. ದೇಹವೆಲ್ಲವೂ ಅದರ ಮೇಲೆ ಆಧರಿಸಿದ್ದಿತು. ಆದರೆ ಅವನ ತಲೆಯು ಮಾತ್ರ ಜೋಲು ತಿದ್ದಿತು. ಅದಕ್ಕೊಂದು ತಲೆಗಿಂಬು ಬೇಕೆಂದು ಭೀಷ್ಮನು ಅರ್ಜುನನಿಗೆ ತಿಳುಹಲು ದುಯೋರ್ಧನನು ಶೋಕಸಂತಪ್ತನಾಗಿದ್ದು, ಮಣಿಖಚಿತವಾದ ತಲೆಗಿಂಬನ್ನು, ಓಡ್ಯೋಡಿ ತರಿಸಿಕೊಟ್ಟನು. ಭೀಷ್ಮನು ಅದನ್ನು ಕಂಡು ನಗಲು, ಅರ್ಜುನನು ಕೂಡಲೆ ಐದು ಕವಲಂಬುಗಳಿಂದ ಬಿಲ್ಲಾಳಾದ ಭೀಷ್ಮನ ತಲೆಗೆ ಯೋಗ್ಯವಾದ ಆಧಾರವನ್ನು ಮಾಡಿಕೊಟ್ಟನು.

ಬಳಿಕ, ಹತ್ತು ದಿನಗಳ ಯುದ್ಧಪರಿಶ್ರಮದ ಭಾರದಿಂದ ಬೆಂಡಾಗಿ ಬಸವಳಿದ ಭೀಷ್ಮನ ರೋಮರೋಮಗಳಿಂದಲೂ ನೆಟ್ಟ ಬಾಣಗಳ ವೇದನೆಯು ಹೊರಸೂಸಲು, ಗೋನಾಳಿಯೊಣಗಿ ನೀರಡಿಸಿರುವೆನೆಂದು ಅವನೆಂದನು. ದುಯೋರ್ಧನನು ನಡುಗಿನಡುಗಿ, ತವಕದಿಂದ, ಪೂರ್ಣಮಾ ಚಂದ್ರನ ಕಿರಣಗಳಿಗೆ ಹಿಂಡಿದ ಇಬ್ಬನಿಯ ಪರಮ ಸುಗಂಧವುಳ್ಳ ಪಾನಕ ವನ್ನು ಮರಕತದ ಕಲಶದಲ್ಲೆ ತರಿಸಿಕೊಟ್ಟನು. ಮಹಾಯುದ್ಧದ ಪರಿಶ್ರಮ ನಿವಾರಣೆಗಾಗಿ ಗಂಗಾಪುತ್ರನಿಗೆ ಈ ಮೂಢರ ಗುರುವಿನ ಬುದ್ಧಿಯ ಸಂಭ್ರಮವನ್ನು ಕಂಡು ಮನಸ್ಸಿನಲ್ಲಿ ಜಿಗುಪ್ಸೆಯುಂಟಾಯಿತು. ಅವನು ಅರ್ಜುನನ ಕಡೆಗೆ ನೋಗತಿರುಹಲು, ಅರ್ಜುನನು ಜಲಾಸ್ತ್ರವನ್ನು ಬಿಟ್ಟು ಕಾಸಿದ ಕಬ್ಬಿಣದಂತೆ ಹೊಳೆವ ನಿರ್ಮಲಧಾರೆಯ ಪಾತಾಳದ ಭೋಗವತೀ ಗಂಗಾಜಲವನ್ನು, ಭೀಷ್ಮನ ಬಾಯಿಯಲ್ಲಿ ಹರಿಯಿಸಿದನು. ಭೀಷ್ಮನ ಪ್ರಾಣದ ತಾಪಗಳು ನಿವಾರಣೆಹೊಂದಿದುವು. ಭೀಷ್ಮನು ಅರ್ಜುನನ ವಿವೇಕವನ್ನು ಹೊಗಳಿದನು.

ಬಳಿಕ, ಇದನ್ನೆ ದೃಷ್ಟಾಂತವಾಗಿಟ್ಟು, ಭೀಷ್ಮನು 'ದುಯೋರ್ಧನಾ! ನೋಡಿದೆಯಾ ಅರ್ಜುನನ ವಿವೇಕ—ಪರಾಕ್ರಮಗಳನ್ನು? ನಿನ್ನ ಮಹಾ ರಥಿಗಳೆಲ್ಲರೂ ಅರ್ಜುನನು ಎಂತಹನೆಂದು ತಿಳಿದೇ ಇರುವರು. ಇನ್ನಾದರೂ ನಿನ್ನ ಮಂದಮತಿಯನ್ನು ತ್ಯಜಿಸು. ಇನ್ನೀ ಒಳಜಗಳವನ್ನು ಸಾಕುಮಾಡಿ. ಸೋದರರು ಪ್ರೀತಿಯಿಂದ ಬಾಳಿರಿ; ನನ್ನ ಮಾತುಗಳಲ್ಲಿ ನಿನಗೆ ಎಂದಿ ನಿಂದಲೂ ಅರುಚಿಯೆ ಇದೆ. ಆ ಮಾತುಗಳೇ ಪಾಂಡವರಿಗೆ ರುಚಿಸುವುವು. ನನ್ನ ಅಭಿಪ್ರಾಯವಾವುದೋ ಅದನ್ನೆ ಅವರು ತಮ್ಮ ನಡತೆಯ ರೀತಿಯಿಂದು

ಮನ್ನಿಸುವರು; ಬೇಡ; ಕೌರವವನವನ್ನು ಯುದ್ಧಾಗ್ನಿಯಿಂದ ಸುಟ್ಟುರುಹದಿರು' ಎಂದು ಹಿತೋಕ್ತಿಗಳನ್ನಾಡಿದನು.

ದುರ್ಯೋಧನನು ಈ ಮಾತುಗಳನ್ನು ಕೇಳಲಾರನು. ಅವನಲ್ಲವೆ ಯುದ್ಧಾತುರನು? ಅವನಲ್ಲವೆ ಛಲದಂಕನು? ರಾಜ್ಯಾಭಿಲಾಷೆಯಿಂದ ತಾನೆ ಈ ಯುದ್ಧವನ್ನು ಮಾಡಿದವನಲ್ಲ. ಅವನು ಹೇಗೂ ಭುವನ ಖ್ಯಾತನೆನಿಸಿಕೊಳ್ಳಬೇಕೆಂದೇ ಇಷ್ಟು ಹಟಹಿಡಿದವನು! ಪಾಂಡವರನ್ನೆ ಎಲ್ಲರೂ ಹೊಗಳುವುದೆಂದರೇನು? ಅವನು 'ಇಂತಹ ನೀತಿಯ ಮಾತುಗಳನ್ನು ಮೊದಲಾಗಿ ನೀವೆ ಹೇಳಿದಿರಿ; ಬಳಿಕ ಶ್ರೀಕೃಷ್ಣನು ವಿವರಿಸಿದನು; ಋಷಿಗಳು ತಿಳುಹಿದರು; ನಮ್ಮ ತಂದೆಯವರು ಇದನ್ನೆ ಒತ್ತಿ ಬೋಧಿಸಿದರು; ವಿದುರರಾದರೂ ಧಾರಾಳವಾಗಿ ಪ್ರೇರೇಪಿಸಿದರಲ್ಲವೆ? ಪುನಃ ಅವೇ ಮಾತುಗಳನ್ನು ಹೇಳದಂತೆ ನಿಮ್ಮ ಕಾಲಿಗೆ ಬೀಳುವೆನು. ನಿಮಗೆ ಇಂತಹ ಸ್ಥಿತಿಯನ್ನು ಒದಗಿಸಿದವನಾದ ನಾನು ಇನ್ನು ಸಂಧಿಮಾಡಿ ಬದುಕಿಕೊಳ್ಳಲೇನು? ಈ ದೇಹಕ್ಕಾಗಿ ನಾನು ದುಃಖಿಸುವವನಲ್ಲ, ಅದು ಸುಖಹೊಂದಬೇಕಾಗಿಯೂ ಮನಸೋತವನಲ್ಲ. ಪಾಂಡವರಿಗೆ ಮಸ್ತಕಶೂಲನೆಂಬುವ ಬಿರುದನ್ನು ನಾನು ಪಡೆಯಬೇಕೆಂದೇ ನನ್ನ ಪೇಚಾಟವು' ಎಂದು ಬಿನ್ನಹ ಮಾಡಿದನು.

ಆಗಲೆ ಭೀಮನು ಕೆರಳಿ,-'ಭೀಷ್ಮರ ಮಾತುಗಳಿಗೆ ನೀನು ಒಪ್ಪಿದರೂ ಸರಿಯೆ, ತಪ್ಪಿದರೂ ಸರಿಯೆ. ದೇಹದ ಮೇಲೆ ನಿನಗೆ ಅಭಿಮಾನವಿರಲಿ, ಇಲ್ಲದಿರಲಿ. ಸಂಧಿಯಾಗಲಿ, ಆಗದಿರಲಿ. ನಿನ್ನ ಸೋದರನ ತಿಳಿ ನೆತ್ತರನ್ನು ಕುಡಿದಲ್ಲದೆ, ನನಗೆಂದೂ ತೃಪ್ತಿಯಾಗದೆಂದು ನಂಬು!' ಎಂದು ರೋಷದಿಂದ ಕೂಗಲು, ಶ್ರೀಕೃಷ್ಣನು—'ಭೀಮಾ, ಪಿತಾಮಹನ ಮಾತೇ ಪ್ರಸಾದವಲ್ಲವೆ? ಅದಕ್ಕೆ ಇದಿರಾಡುವುದೆ? ಮೌನವಾಗಿ ಎದ್ದು ಪಾಳೆಯದತ್ತ ತೆರಳು' ಎಂದು ಇವನನ್ನು ಅಲ್ಲಿಂದ ಕಳುಹಿಕೊಟ್ಟು-'ಸಾಕು, ಸಾಕು. ಭೀಮನು ಬಾಲನಂತೆ ಪಿತಾಮಹನ ವಿರುದ್ಧವಾಗಿ ಏನನ್ನೊ ಒದರಿದನು. ಮೂರ್ಖಶಿರೋಮಣಿಯಾದ ದುರ್ಯೋಧನನು ಯುದ್ಧದಲ್ಲಿ ಮಡಿಯಲಿ, ಅಥವಾ ಸಾಮದಲ್ಲಿ ಬಾಳಲಿ. ಬೇಕಾದಂತೆ ಮಾಡಲಿ. ಪಾಂಡವರಿಂದ ತಪ್ಪಿಲ್ಲ' ಎಂದು ಅಲ್ಲಿದ್ದವರಿಗೆ ವಿವರಿಸಿ ಹೇಳಿದನು.

'ಶ್ರೀಕೃಷ್ಣನ ಅಭಿಪ್ರಾಯವೆ ಲೋಕಮಾನ್ಯವಾದುದು, ಇನ್ನಿಲ್ಲಿರದೆ ಪಾಳೆಯಕ್ಕೆ ತೆರಳಿರಿ. ರಾಜ್ಯಾಭಿಲಾಷೆಯಿಂದ ನನ್ನನ್ನು ನೋಯಿಸಿದಿ

ರೆಂಬ ವ್ಯಥೆಯನ್ನು ಕಟ್ಟಿಕೊಳ್ಳದಿರಿ! ವಿಜಯಿಗಳಾಗಿರಿ!' ಎಂದು ಭೀಷ್ಮನು ಪಾಂಡವರನ್ನು ಹರಸಿ, ಕಳುಹಿಸಿಕೊಟ್ಟನು. ಭೀಷ್ಮನ ಕಣ್ಣುಗಳು ಶ್ರೀಕೃಷ್ಣನ ಅಡಿದಾವರೆಗಳನ್ನೆ ಬಹಳ ಹೊತ್ತು ದಿಟ್ಟಿಸಿ, ಮನದಣಿಯೆ ಅವನ್ನೆ ಹೃದಯದಲ್ಲಿ ಧ್ಯಾನಿಸಿ, ವಿಮಲಾನಂದವನ್ನು ಹೊಂದಿದುವು. ದೇಹವನ್ನು ತೊಲಗಿ ಹೋಗುವಂದು ಅಂದಿನಂತೆಯೆ ಭಗವಂತನ ಶ್ರೀಚರಣಗಳು ತನ್ನ ತುಟಿಗಳನ್ನು ಒತ್ತಲೆಂದೂ ಅವನು ಭಕ್ತಿಯಿಂದ ಪ್ರಾರ್ಥಿಸಿಕೊಂಡನು. ಬಳಿಕ ದ್ರೋಣಾದಿ ನಾಯಕರಿಗೆ ಶ್ರೀಕೃಷ್ಣನ ಕೊನೆಯ ಮಾತುಗಳನ್ನು ನೆನೆದು ನಡೆಯಿರೆಂದು ಸೂಚಿಸಿ, ಅವರನ್ನೂ ಕಳುಹಿಕೊಟ್ಟನು.

ಪಾಂಡವರು ತಮಗೆ ಯುದ್ಧದಲ್ಲಿ ವಿಜಯವಾಯಿತೆಂದು ಹಿಗ್ಗುತ್ತಲೂ, ಪಿತಾಮಹನು ಮಲಗಿದನೆಂದು ಕುಗ್ಗುತ್ತಲೂ ಪಾಳೆಯವನ್ನು ಸೇರಿದರು. ದುರ್ಯೋಧನನ ಮೊಗವನ್ನು ದುಃಖವು ಮುಸುಕಿತು; ತನ್ನ ಮಗನನ್ನು ಮೂದಲಿಸಿದವನು ಪವಡಿಸಿದನೆಂದು ಸೂರ್ಯನು ಪಡುವಲಲ್ಲಿ ಕಂತಿದನು.

---

## ೨೦. ನಿರ್ಯಾಣ

ದುರ್ಯೋಧನನು ಪಿತಾಮಹನ ವಿವೇಕದ ಮಾತುಗಳನ್ನೇಕೆ ಕೇಳುವನು? ಅವನಿಗೆ ಮೃತ್ಯುವೇ ಒಲಿದಿರುವಾಗ, ಅವನಿಗೆ ಉತ್ತರೋತ್ತರವೆಲ್ಲಿಯದು? ಅವನು ಯುದ್ಧವನ್ನೆ ಹೂಡಿದನು. ಕರ್ಣನಿಂದ ಪರಾಮರ್ಶೆಯನ್ನು ಪಡೆದು ಒಂದು ಕಾಣಿಯಷ್ಟು ಚಿನ್ನಕ್ಕೆ ಸಮಾನನಾದ ಭೀಷ್ಮನು ಅಳುಕಿದರೂ, ಕನಕಾಚಲಸಮಾನವಾದ ಕೌರವಸೇನೆಗೆ ಎಲ್ಲಿಯ ಕೊರತೆಯೆಂದು ದ್ರೋಣನನ್ನು ಸೇನಾನಾಯಕತ್ವಕ್ಕೆ ನಿಯಮಿಸಿದನು. ಆದರೆ, ಹಿಂದೆ ಭೀಷ್ಮನೊಡನೆ ವಿವಾದಮಾಡಿದುದನ್ನು ನೆನೆದು, ಕರ್ಣನು ಭೀಷ್ಮನಿದ್ದಲ್ಲಿಗೆ ತೆರಳಿ, ಅವನ ಚರಣಗಳನ್ನು ತನ್ನ ಕಣ್ಣೀರಿನಿಂದ ತೊಳೆದು ಮಿಂಯಿಸಿದನು. ಶ್ರೀಕೃಷ್ಣಧ್ಯಾನಪರನಾಗಿ ಮೈಮರೆದಿದ್ದ ಭೀಷ್ಮನು ಕಣ್ತೆರೆದು— 'ವತ್ಸಾ, ಅಳಲದಿರು, ಕೌರವನು ಉಳಿಯಬೇಕಾದರೆ ನೀನೆ ಮುಂದರಿದು

ಕದನದಲ್ಲಿ ಜಯಿಸತಕ್ಕುದಲ್ಲವೆ?' ಎಂದನು. ಕರ್ಣನು—'ನಾನು ಗರ್ವದಿಂದ ನಿಮ್ಮನ್ನು ಅಂದು ನಿಂದಿಸಿದೆನು. ನಿಮ್ಮ ಸೇನಾಧಿಪತ್ಯದಲ್ಲಿ ನಾನು ಬಿಲ್ಲುಬಾಣಗಳನ್ನು ತ್ಯಜಿಸಿದ ಕಾರಣ ಅಪರಾಧವಾಯಿತು. ಕ್ಷಮೆಯನ್ನು ಬೇಡುವೆನು' ಎಂದು ಬೇಡಿಕೊಂಡನು. ಭೀಷ್ಮನು, ದುರ್ಯೋಧನನ ಬಂಧುಗಳು ತನಗೆ ಜೀವಸಮಾನರೆಂದೂ, ದುರ್ಯೋಧನನ ಪಕ್ಷವು ಗೆಲ್ಲುವಂತೆ ಸಾಹಸಮಾಡಬೇಕೆಂದೂ ಬುದ್ಧಿಹೇಳಲು, ಕರ್ಣನು ಎಲ್ಲ ವಾಸ್ತವ ವಿಷಯಗಳನ್ನು ತಿಳಿದಿದ್ದು, 'ತಂಗಾಳಿಗೆ ಮೇಘಾಳಿಯು ಕಂಗೆಡುವುದೆ? ಮಿಂಚುಹುಳು ಕತ್ತಲನ್ನು ಜಯಿಸುವುದೆ? ಸೀಸದ ಉಳಿಯಿಂದ ಬಂಡೆಕಲ್ಲನ್ನು ಸೀಳಲಾಗುವುದೆ? ಶ್ರೀಹರಿಯು ಒಲಿದವರನ್ನು ಗೆಲಲಾಗುವುದೆ? ಮಾಡಲೇನು? ನಾನು ಸಭಿಕನಾದೆನು, ಆಳಾದೆನು. ರಾಜತಂತ್ರವನ್ನು ಸೂಚಿಸಲು ಅಧಿಕಾರವು ನನಗಿಲ್ಲ. ಅರಸು ಹೇಳಿದಂತೆ ಆಳು ನಡೆಯತಕ್ಕುದಲ್ಲವೆ? ಅಲ್ಲದಿದ್ದಲ್ಲಿ ಈ ಯುದ್ಧಕ್ಕೆ ಯಾರು ಒಪ್ಪುತ್ತಿದ್ದರು?' ಎಂದು ತನ್ನ ಮನಸ್ಸಿನ ಸತ್ಯಾಭಿಪ್ರಾಯವನ್ನು ತಿಳುಹಿದನು. ಬಳಿಕ, ಸೂರ್ಯನು ಉತ್ತರಪಥಕ್ಕೆ ಬಾರದೆ ತನಗೆ ಅವಸಾನವಾಗ ಬಾರದೆಂದು ಪರಮಭಾಗವತೋತ್ತಮನಾದ ಭೀಷ್ಮನು ಯೋಗಾನಂದವನ್ನು ಅದುವರೆಗೆ ಹೊಂದುತ್ತ ತನ್ನ ಸಮಯ ಕಾದಿದ್ದನು.

ಮತ್ತೂ ಎಂಟು ದಿನಗಳ ತನಕ ಯುದ್ಧವು ನಡೆಯಿತು. ಕೌರವ ಪಕ್ಷವೆಲ್ಲವೂ ಸೋತು ನಿರ್ನಾಮವಾಯಿತು. ದ್ರೋಣ, ಕರ್ಣ, ಶಲ್ಯ ಮೊದಲಾದ ಸೇನಾಧಿಪತಿಗಳು ಯುದ್ಧ ನಡೆಯಿಸಿದರೂ, ಭೀಮನು ತನ್ನ ಪ್ರತಿಜ್ಞೆಯನ್ನು ನೆರವೇರಿಸಿದನು. ದುರ್ಯೋಧನನು ಭೀಮನ ಗದಾ ಪ್ರಹಾರಕ್ಕೆ ತೊಡೆಮುರಿದು ಮಡಿದನು. ಪಾಂಡವರಿಗೆ ದಿಗ್ವಿಜಯವಾಗಿ ರಾಜ್ಯವು ಅವರ ಪಾಲಿಗಾಯಿತು. ಧರ್ಮರಾಯನೆ ಸಾರ್ವಭೌಮ ಚಕ್ರವರ್ತಿಯಾದನು.

ಬಹು ಕಷ್ಟಕ್ಲೇಶಗಳನ್ನು ತಳೆದು, ಭಯಂಕರವಾದ ಕಾದಾಟದಲ್ಲಿ ಉಳಿದು, ಕೊನೆಗೆ ನ್ಯಾಯವಾದ ರಾಜಪದವನ್ನು ತಳೆದುದರಿಂದಲಾದರೂ ಧರ್ಮರಾಯನು ಸುಖಕಾಣದಾದನು. ಸಿಂಹಾಸನವನ್ನೇರುತ್ತಲೆ, ಅವನು ತನ್ನ ಬಂಧುಬಾಂಧವರನ್ನು ನೆನೆದು, 'ಗಂಡನಿಲ್ಲದ ಸ್ತ್ರೀಯೂ, ಹಗೆಗಳಿಲ್ಲದ ಅರಸೂ, ಗುರುಹಿರಿಯರನ್ನು ಮನ್ನಿಸದ ಮನುಷ್ಯನೂ, ಬಂಧುಗಳಿಲ್ಲದವನ

ಸಂಪತ್ತೂ ನಿಷ್ಫಲವಾಗಿವೆ. ದುರ್ಯೋಧನ—ಕರ್ಣರೇ ಮೊದಲಾದವರ ಮಂದಿರಗಳು ಕೈದುಗಳಿಲ್ಲದ ಒರೆಗಳಂತೆಯೂ, ಪರಿಮಳವಿಲ್ಲದ ಹೂಗಳಂತೆಯೂ, ನೀರುಬತ್ತಿದ ಕೊಳದಲ್ಲಿನ ತಾವರೆಗಳಂತೆಯೂ, ಮುತ್ತಿಲ್ಲದ ಚಿಪ್ಪುಗಳಂತೆಯೂ, ಅರ್ಥವಿಹೀನವಾದ ಪದಗಳಂತೆಯೂ ವ್ಯರ್ಥವಾಗಿವೆ. ದಾನಕೊಡುವವನನ್ನೆ ಕೊಂದು ದಾನಬುದ್ಧಿಯೆ ಇಲ್ಲದ ಮೂರ್ಖನನ್ನು ಹಿಡಿದರೆ ಫಲವೇನಿದೆ? ನಮ್ಮ ತಂದೆಯಾದ ಪಾಂಡು ರಾಜನು ಯಾವನಿಗೆ ಸೇವಕನಾಗಿದ್ದನೊ ಅಂತಹ ಧೃತರಾಷ್ಟ್ರಭೂಪತಿ ಯನ್ನೆ ನಾವು ಆಳುಗಳಾಗಿ ಸೇವೆಮಾಡದೆ ಇದ್ದೂ, ರಾಜಧರ್ಮವೆಂದು ರಾಜ್ಯದ ಭಾಗಕ್ಕಾಗಿ ಕಾದಾಡಿ ಅವನ ಮಕ್ಕಳನ್ನೆ ನಾವು ಕೊಂದೆವಲ್ಲ? ಇದು ಎಂತಹ ಧರ್ಮವಾಯಿತು? ಆ ಹುಟ್ಟುಕುರುಡನ ಕೈಯ ಊರು ಗೋಲುಗಳನ್ನೆ ನಾವು ಕಿತ್ತುಕೊಂಡೆವಲ್ಲ! ಚಂದ್ರವಂಶದವರೊಳಗೆ ಇದು ವರೆಗೆ ಇಂತಹ ಪಾಪವನ್ನು ಯಾರೂ ಮಾಡಿರುವರೆ? ಸಾಯಬಾರದ ವರವನ್ನು ತಂದೆಯಿಂದ ಪಡೆದ ನಮ್ಮ ಪಿತಾಮಹನಿಗಾದರೂ ಸಾಯುವಂಥ ವರವನ್ನು ನಾವೆ ಕೊಟ್ಟಂತಾಯಿತು. ದ್ರೋಣಾಚಾರ್ಯರನ್ನು ಕೊಂದಾಗಲೆ ಗುರುವಧೆಯೂ ಬ್ರಹ್ಮವಧೆಯೂ ನಮ್ಮ ಪಾಲಿಗೆ ಬಿತ್ತು! ಈ ಪಾಪಯಾತನೆಯನ್ನೆಂತು ಸಹಿಸಲಿ?'' ಎಂದು ಬಾರಿಬಾರಿಗೂ ಅಳುತಲಿದ್ದನು.

ದುಃಖಾತುರನಾದ ಧರ್ಮರಾಜನಲ್ಲಿಗೆ ಮುನಿಗಳು ಹಿಂಡಾಗಿ ಬಂದರು. ಅವರು ಅವನ ದುಃಖಕಾರಣವನ್ನು ತಿಳಿದು—'ಅಯ್ಯಾ ಧರ್ಮರಾಯನೆ! ಹೇಳಿ ಮಾಡಿಸುವ ಕೃಷ್ಣನಿಗೆ ನೀನು ನಿಮಿತ್ತ ಮಾತ್ರನಾಗಿರುವ ಕಾರಣ, ಸ್ವತಂತ್ರನಲ್ಲ. ಯುದ್ಧದಲ್ಲಿ ನೀವು ಯಾರನ್ನೂ ಕೊಂದುದಿಲ್ಲ. ಶ್ರೀಕೃಷ್ಣನೆ ಅವರೆಲ್ಲರನ್ನು ನಿಮ್ಮಿಂದ ಸೀಳಿಸಿದನು' ಎನ್ನಲು, ಅಲ್ಲಿಗೆ ಶ್ರೀಕೃಷ್ಣನೂ ಬಂದನು. ಅವನು ಯೋಗ್ಯ ಸತ್ಕಾರವನ್ನು ಹೊಂದಿ, ಧರ್ಮರಹಸ್ಯವನ್ನು ಭೀಷ್ಮನಿಂದ ತಿಳಿದುಕೊಳ್ಳೆಂದು ಧರ್ಮ ರಾಯನಿಗೆ ಹೇಳಲು—'ನಾವೇ ಅವನು ಸಾಯುವಂತೆ ಸಾಧಿಸಿ, ಈಗ ಅರ್ಧಗತಪ್ರಾಣನಾಗಿರುವಾಗ ಅವನನ್ನು ನುಡಿಸುವುದೆ?' ಎಂದು ಅರಸು ಕಳವಳಗೊಂಡನು. ಮುನಿಗಳೂ ಶ್ರೀಕೃಷ್ಣನೂ ಅವನನ್ನು ಸಮಾಧಾನ ಗೊಳಿಸಿದರು.

ಶಿರಮಂ ಬಾಗಿಸೆ ಚಿಂತೆಯಿಂ, ಗಳದ ಸಂದೊಳ್ ಸಿಲ್ಕಲಾ ನಿಟ್ಟುಸಿ
ಸುರಿದುಂ ಕಂಬನಿ ಜಾರೆ ಗಲ್ಲತಟದೊಳ್, ಕುಂತೀಕುಮಾರರ್ ವಲ
ಮರಣಾಸನ್ನನ ತಲ್ಪಮಂ ಬಳಸಿ ನಿಂದರ್; ಭೀಷ್ಮನುಂ ಕಂಗಳಂ
ತೆರೆದುಂ ನೋಡಿದನೊಮ್ಮೆ ಕೃಷ್ಣಮುಖಮಂ ಮಂದಸ್ಮಿತಾಹ್ಲಾದದಿಂ ॥ ೩ ॥

"ಅರರೇ! ಧರ್ಮಜ! ಮಾತೃಭೂಮಿಯು ಪರಾಧೀನತ್ವದಾ ಪಾಶಮಂ
ತರಿದುಂ, ಧರ್ಮಪತಾಕೆಯಂ ಭರತಕ್ಷೋಣೀ ವಕ್ಷದೊಳ್ ನೆಟ್ಟಿಹೈ!
ಶಿರದೊಳ್ ಪಾತಕಮಿಲ್ಲಮಿಲ್ಲಮಿನಿಸುಂ ದುರ್ಯೋಧನಧ್ವಂಸದಿಂ.
ಧರೆಯಂ ಪಾಲಿಸು ಮೆಚ್ಚುವೊಲ್ ಪ್ರಜೆಗಳುಂ! ಕರ್ತವ್ಯದೊಳ್ ಕಣ್ಣಿಡೈ!" ॥ ೪ ॥

ನುಡಿಯಿಂದುಜ್ವಲಕಾಂತಿ ಭೀಷ್ಮಮುಖದೊಳ್ ವಿಭ್ರಾಜಿಸಲ್, ಹಸ್ತದಿಂ-
ದೊಡನಾಶೀರ್ವದಿಸುತ್ತ ಧರ್ಮಸುತನಂ, ಶ್ರೀಕೃಷ್ಣನುತ್ಸಂಗದೊಳ್
ಮುಡಿಯಂ ನೀಡಿ, ಮಲಂಗಿದಂ ಸುಭಟಭೀಷ್ಮಂ ಯೋಧಶಾರ್ದೂಲಮಂ-
ದೊಡಲಿಂ ನಂದುದು ಲೇಶಜೀವಕಳೆಯುಂ—ನಿರ್ಯಾಣದಾ ದೀಪದೋಲ್ ॥ ೫ ॥

(ಸುವಾಸಿನಿಯಲ್ಲಿ, ಕವಿಶಿಷ್ಯರಿಂದ.)

**ಸಂಪೂರ್ಣಂ**